ಶುಕ್ರವಾರ, 11 ಅಕ್ಟೋಬರ್ 2024
ಪ್ರಜಾವಾಣಿ
ಪ್ರಜಾ ಪ್ಲಸ್+
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ



ಮಾಧವಿ ಮಾಧವ ನಾಟಕದ ದೃಶ್ಯ

15-16ರಂದು ರಂಗಶಂಕರದಲ್ಲಿ ನೀನಾಸಂ ತಿರುಗಾಟ

ನಗರದ ರಂಗಶಂಕರದಲ್ಲಿ ಇದೇ 15 ಮತ್ತು 16ರಂದು ನೀನಾಸಂ ತಿರುಗಾಟ ಎರಡು ನಾಟಕಗಳನ್ನು ಪದರ್ಶಿಸುತ್ತಿದೆ. ಸಂಜೆ 7.30ಕ್ಕೆ ಅನುಕ್ರಮವಾಗಿ ಮಾಲತೀಮಾಧವ ಹಾಗೂ ಅಂಕದ ಪರದೆ ನಾಟಕಗಳು ಪದರ್ಶನವಾಗಲಿವೆ.

ನೀನಾಸಂ ತಿರುಗಾಟದ ಬಗ್ಗೆ 1985 ರಲ್ಲಿ ಪ್ರಾರಂಭವಾದ ನೀನಾಸಂ ತಿರುಗಾಟವು ನೀನಾಸಂ ನಾಟಕ ಸಂಸ್ಥಾನದ ಹಳೆ ವಿದ್ಯಾರ್ಥಿಗಳಿಂದ ರಚಿಸಲಾದ ಪ್ರವಾಸಿ ನಾಟಕ ತಂಡವಾಗಿದೆ. ಪ್ರತಿ ವರ್ಷ, ಈ ತಂಡವು 2 ಹೊಸ ನಾಟಕಗಳನ್ನು ಕರ್ನಾಟಕದ ವಿವಿಧ ಪಟ್ಟಣಗಳು ಮತ್ತು ಹಳ್ಳಿಗಳಲ್ಲಿ ಪ್ರದರ್ಶಿಸುತ್ತದೆ. ಕಳೆದ 23 ವರ್ಷಗಳಲ್ಲಿ, ನೀನಾಸಂ ತಿರುಗಾಟವು 250 ಕ್ಕೂ ಹೆಚ್ಚು ಕೇಂದ್ರಗಳಲ್ಲಿ 3,000ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದ್ದು, ಸುಮಾರು 19 ಲಕ್ಷ ಜನರಿಗೆ ನಾಟಕವನ್ನು ತಲುಪಿಸಿದೆ.

ಮಾಲತೀಮಾಧವ

ರಚನೆ: ಭವಭೂತಿ
ಕನ್ನಡ ರೂಪ ಮತ್ತು ನಿರ್ದೇಶನ: ಅಕ್ಷರ ಕೆ.ವಿ.

ಕ್ರಿ.ಶ. ೮ನೆಯ ಶತಮಾನದ ಪ್ರಸಿದ್ಧ ಸಂಸ್ಕೃತ ನಾಟಕಕಾರ ಭವಭೂತಿಯ ಈ ಕೃತಿ ಮೇಲ್ನೋಟಕ್ಕೆ ಸರಳ – ಮಾಲತಿ ಮತ್ತು ಮಾಧವ ಎಂಬ ಪ್ರೇಮಿಗಳು ತಮ್ಮ ಮದುವೆಗಿರುವ ತೊಡಕುಗಳನ್ನೆಲ್ಲ ದಾಟಿ ಸಂಲಗ್ನಗೊಳ್ಳುವುದೂ ಜತೆಗೆ ಇನ್ನೆರಡು ಜೋಡಿ ಮದುವೆ ಸಂಭವಿಸುವುದೂ ಈ ಕತೆಯ ತಿರುಳು. ಈ ಮದುವೆಗಳಿಗೆ ವಿಘ್ನ ಉಂಟಾಗುವುದು ರಾಜಕೀಯ ಕಾರಣದಿಂದ – ಪದ್ಮಾವತಿಯ ರಾಜನು ತನ್ನ ಗೆಳೆಯನಿಗೆ ಮಾಲತಿಯನ್ನು ಮದುವೆ ಮಾಡಿಸಲು ಬಯಸಿದ್ದಾನೆ. ಮಾಧವ ಹತಾಶನಾಗಿ ನಾಗರಿಕಲೋಕ ತೊರೆದು ಸ್ಮಶಾನ ವಾಸಿಯಾಗುವುದು, ಅಲ್ಲಿ ಕಾಪಾಲಿಕರಿಂದ ನರಬಲಿಗಾಗಿ ಮಾಲತಿಯ ಅಪಹರಣವಾಗಿರುವುದನ್ನು ತಡೆದು ಅವಳನ್ನು ಉಳಿಸುವುದು, ಆಮೇಲೆ ಮತ್ತೊಮ್ಮೆ ಅವಳ ಅಪಹರಣವಾದಾಗ ಮಾಧವ ಕಾಡುಮೇಡು ಅಲೆಯುವುದು, ಮತ್ತು ಅಂತಿಮವಾಗಿ ಸೌದಾಮಿನಿಯೆಂಬ ಬೌದ್ಧ ಸಾಧಕಿ ಆಕೆಯನ್ನು ಉಳಿಸುವುದು ಮತ್ತು ಅಂತಿಮವಾಗಿ ಅವರಿಬ್ಬರ ಸಮಾಗಮ - ಹೀಗೆ ಕಥನ ಸಾಗುತ್ತದೆ. ಇಂಥ ಅಸಂಭವನೀಯ ಸಂವಿಧಾನವನ್ನು ಹೆಣೆಯಲಿಕ್ಕೆ ಇಲ್ಲಿ ಕಾಮಂದಕಿ ಎಂಬ ಬೌದ್ಧ ಸನ್ಯಾಸಿನಿ ಮತ್ತವಳ ಶಿಷ್ಯರು ಕಾರಣರಾಗುತ್ತಾರೆ. ವೈರಾಗ್ಯಕ್ಕೆ ಮುಖ ಮಾಡಿರುವ ಸನ್ಯಾಸಿಗಳೇ ಸಂಸಾರಗಳನ್ನು ಕಟ್ಟುವ ಸೂತ್ರಧಾರರಾಗುವುದು ಈ ನಾಟಕದ ಮರ್ಮ. ಆಗಬಾರದ ಮದುವೆಗಳು ನಿಂತು ಆಗಬೇಕಾದ ಮದುವೆಗಳು ತಂತಾನೇ ನಡೆಯುವುದು ಈ ಕೃತಿಯ ವಿಶಿಷ್ಟ ನಾಟಕೀಯತೆ.

ಅಂಕದ ಪರದೆ

ಮರಾಠಿ ಮೂಲ: ಅಭಿರಾಮ ಭಡ್ಕಮಕರ್,
ಕನ್ನಡಕ್ಕೆ: ಜಯಂತ ಕಾಯ್ಕಿಣಿ
ನಿರ್ದೇಶನ: ವಿದ್ಯಾನಿಧಿ ವನಾರಸೆ (ಪ್ರಸಾದ್)

ತಮ್ಮ ಜೀವನದ ಕಡೆಯ ವರ್ಷಗಳನ್ನು ಕಳೆಯುತ್ತಿರುವ ಹಿರಿಯ ನಾಗರಿಕರ ಒಂದು ಆಶ್ರಯಧಾಮದೊಳಗಿನ ಕತೆ ಇದು. ಆದರೆ, ಇಲ್ಲಿರುವ ವ್ಯಕ್ತಿಗಳು ಬರಿದೇ ಬದುಕಿನ ಸಂಧ್ಯಾಕಾಲವನ್ನು ನೋವಿನಿಂದ ನೂಕುತ್ತಿರುವ ಹತಾಶರಲ್ಲ, ಹಲವು ಬಗೆಯಲ್ಲಿ ಕ್ರಿಯಾಶೀಲರು. ಪತ್ನಿ ಹೀಗಳೆದರೂ; ಮಕ್ಕಳಿಂದ ಬೇರ್ಪಟ್ಟರೂ ಅವರೆಲ್ಲರಿಗೂ ಹಣ ಕಳಿಸುತ್ತಿರುವ ದಿಲ್ಖುಷ್ ಮನುಷ್ಯ ದೇಸಾಯಿ ಇಲ್ಲಿದ್ದಾನೆ; ಹಾಗೇ, ಮಗನ ವಿದ್ಯಾಭ್ಯಾಸಕ್ಕಾಗಿ ಕಷ್ಟಪಟ್ಟು ಹಣ ಸಂಪಾದಿಸಿ ತಮ್ಮ ಆಸೆಗಳನ್ನು ಅದುಮಿಟ್ಟು ಬದುಕಿದ ನಾನಾ ಮಾಯಿ ಎಂಬ ಗಂಡಹೆಂಡಿರು ಬಂದಿದ್ದಾರೆ; ಅಂತೆಯೇ, ಬದುಕಿನುದ್ದಕ್ಕೂ ಸಮಾಜಮುಖೀ ಚಳವಳಿಗಾರನಾಗಿ ದುಡಿದ ಭಾಯೀಜಿ ಮತ್ತು ಅವನಿಗಾಗಿಯೇ ತನ್ನ ಬದುಕನ್ನು ಮುಡುಪಿಟ್ಟ ಅವನ ಪತ್ನಿ ಸೇವಾತಾಯಿ ಇಲ್ಲೀಗ ಹಳೆಯ ನೆನಪುಗಳನ್ನು ಪರಿಷ್ಕರಿಸಿಕೊಳ್ಳುತ್ತಿದ್ದಾರೆ; ಹಳೆಯ ರಂಗಭೂಮಿಯ ಕಲಾವಿದ ಜನುಭಾಯಿ ಇಲ್ಲೀಗ ತನ್ನ ಬಣ್ಣದ ಬದುಕಿನ ರೋಮಾಂಚನಗಳನ್ನು ನೆನಪಿಸಿಕೊಳ್ಳುತ್ತಿದ್ದಾನೆ. ಇಂಥವರೆಲ್ಲರ ನಡುವೆ, ಹರ್ಷನೆಂಬ ಹೊಸಗಾಲದ ಯುವ ರಂಗಕರ್ಮಿಯೊಬ್ಬ ಈ ವಾರ್ಧಕ್ಯದ ತಥ್ಯ ತಿಳಿಯಲಿಕ್ಕೆಂದು, ತನ್ನ ತಂದೆಯ ವೇಷಾಂತರದಲ್ಲಿ ಈ ವೃದ್ಧಾಶ್ರಮಕ್ಕೆ ಸೇರಿಕೊಂಡು ಅವರೊಂದಿಗೆ ರಂಗಭೂಮಿಯ ಪಾಠಗಳನ್ನು ಕಲಿಯತೊಡಗುತ್ತಾನೆ. ಹೀಗೆ ವೃದ್ಧಾಪ್ಯವೆಂಬ ವಾಸ್ತವವು ರಂಗಭೂಮಿಯ ರೂಪಕವಾಗಿ ಪರಿವರ್ತನೆಯಾಗುವ ವಿಸ್ಮಯದ ದಿಕ್ಕಿಗೆ ನಾಟಕ ಮುನ್ನಡೆಯುತ್ತದೆ.

ನೋಡ ಬನ್ನಿ ದಸರಾ ಗೊಂಬೆ ಪ್ರದರ್ಶನ

ಹೆರಿಗೆಗೆ ಬಂದವರು, ಹೆರಿಗೆಯಾದವರನ್ನು ನೋಡಲು ಬಂದವರಿಗೆ ಆಹ್ಲಾದಕರವೆನಿಸಲಿ ಎಂದು ರಾಜರಾಜೇಶ್ವರಿ ನಗರದಲ್ಲಿರುವ ಉಷಾ ಮೆಟರ್ನಿಟಿ ಆಸ್ಪತ್ರೆಯ ಅಂಗಳದಲ್ಲಿ ದಸರಾ ಬೊಂಬೆ ಪ್ರದರ್ಶನವಿರಿಸಲಾಗಿದೆ.

ರಾಮಾಯಣದ ಕತೆ ಹೇಳುವ ವೈವಿಧ್ಯಮಯ ನೂರಾರು ಬೊಂಬೆಗಳು ಇಲ್ಲಿವೆ. ಮೈಸೂರು ಅರಮನೆಯ ಭಿತ್ತಿಚಿತ್ರದ ಹಿನ್ನೆಲೆಯಲ್ಲಿ, ಪಟ್ಟದರಸ, ಪಟ್ಟದರಸಿಯೊಡನೆ, ಆನೆ ಸಾಲು, ದಶಾವತಾರ ಮತ್ತಿತರ ಬೊಂಬೆಗಳೊಡನೆ ರಾಮ, ಲಕ್ಷ್ಮಣ ಸೀತೆಯರೂ ಜೊತೆಯಾಗಿ ಕಂಗೊಳಿಸುತ್ತಿದ್ದಾರೆ.

ಆಂಧ್ರ ಹಾಗೂ ಕರ್ನಾಟಕದ ವಿವಿಧ ಭಾಗಗಳಿಂದ ಬೊಂಬೆ ಸಂಗ್ರಹಿಸಿರುವ ಡಾ. ಉಷಾ ವಿಕ್ರಮ್, ಕಳೆದೈದು ವರ್ಷಗಳಿಂದ ತಮ್ಮ ಆಸ್ಪತ್ರೆಯಲ್ಲಿ ಬೊಂಬೆ ಉತ್ಸವ ಏರ್ಪಡಿಸುತ್ತಿದ್ದಾರೆ.

ಪ್ರತಿವರ್ಷವೂ ಬೊಂಬೆ ಸಂಗ್ರಹ ದೊಡ್ಡದಾಗುತ್ತಿದ್ದು, ನೋಡುಗರ ಸಂಖ್ಯೆಯೂ ಹೆಚ್ಚುತ್ತಿದೆ. ಅ.13ರ ಸಂಜೆಯವರೆಗೂ ಈ ಪ್ರದರ್ಶನ ಸಾರ್ವಜನಿಕರಿಗೂ ನೋಡಲು ಮುಕ್ತವಾಗಿದೆ ಎಂದು ವೈದ್ಯೆ ಉಷಾ ವಿಕ್ರಮ್ ತಿಳಿಸಿದ್ದಾರೆ.



ಉಷಾ ಮೆಟರ್ನಿಟಿ ಆಸ್ಪತ್ರೆಯಲ್ಲಿ ಬೊಂಬೆ ಉತ್ಸವ

ನಗರದಲ್ಲಿ ಸಂಗೀತ- ನೃತ್ಯೋತ್ಸವ

ಅಕ್ಟೋಬರ್ 11–

ಸಂಸ್ಕೃತಿ, ಸಂವಿಧಾನದ ಮೇಲೆ ಚರ್ಚೆ

ಕಲ್ಚರ್ ಕಟ್ಟೆ ವತಿಯಿಂದ ಶೇಕ್ ಚಿನ್ನಾ ಮೌಲಾನ್ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ಅಕ್ಟೋಬರ್ 11ರಂದು ಬಸವನಗುಡಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣಲದಲ್ಲಿ ಸಂಜೆ 4.30ಕ್ಕೆ 'ಸಂಸ್ಕೃತಿ ಮತ್ತು ಸಂವಿಧಾನದ ಮೇಲೆ ಚರ್ಚೆ' ಕಾರ್ಯಕ್ರನ ನಡೆಯಲಿದೆ.

ಸಂಜೆ 4.30ಕ್ಕೆ ಶೇಕ್ ಚಿನ್ನಾ ಮೌಲಾನಾ ಅವರ 'ಸಾಕ್ಷ್ಯಚಿತ್ರ ಪ್ರದರ್ಶನ, ಸಂಜೆ 5ಕ್ಕೆ 'ಭಾರತದ ಸಮನ್ವಯತೆ ಸಂಪ್ರದಾಯಗಳ' ಕುರಿತು ಚರ್ಚೆ ಕಾರ್ಯಕ್ರಮದಲ್ಲಿ ಇತಿಹಾಸಕಾರ ಮೊಹಮ್ಮದ್ ಕಲೀಮುಲ್ಲಾ, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಪ್ರಾಧ್ಯಾಪಕಿ ಸಮೀರಾ ಜುನೈದ್ ಭಾಗವಹಿಸಲಿದ್ದಾರೆ.

ಸಂಜೆ 6.15ಕ್ಕೆ ಶೇಕ್ ಮಹೆಬೂಬ್ ಸುಭಾನಿ, ಖಲೀಶಾಬಿ ಮಹಬೂಬ್ ಮತ್ತು ಫಿರೋಸ್ ಬಾಬು ಮತ್ತು ತಂಡದಿಂದ ನಾದಸ್ವರ ವಾದನ ಪ್ರಸ್ತುತಿಪಡಿಸಲಿದ್ದಾರೆ. ಪ್ರವೇಶ ಉಚಿತವಾಗಿದೆ.

ಅಕ್ಟೋಬರ್ 13–

ಸತ್ಯಾಅಮೃತ ಮಹೋತ್ಸವ

ಸೃಷ್ಟಿ ಅಭಿನಯ ಕಲಾವಿದರ ಕೇಂದ್ರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಇದೇ 13ರಿಂದ 15ರವರೆಗೆ ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ಮಧ್ಯಾಹ್ನ 3ರಿಂದ 'ಸತ್ಯ–75, ಸೃಷ್ಟಿ–55' ಎಂಬ ಸತ್ಯಾಅಮೃತ ಮಹೋತ್ಸವ ಕಾರ್ಯಕ್ರಮ ನಡೆಯಲಿದೆ.

ನೃತ್ಯಕ್ಷೇತ್ರದಲ್ಲಿ 55 ವಸಂತಗಳನ್ನು ಪೂರೈಸಿರುವ ಎ.ವಿ. ಸತ್ಯನಾರಾಯಣ ಅವರು ಬಹುಮುಖ ವ್ಯಕ್ತಿತ್ವದವರು. ಕಥಕ್ ನೃತ್ಯ ಸಂಯೋಜನೆ ಹಾಗೂ ನೃತ್ಯ ಚಿಕಿತ್ಸೆಯಲ್ಲಿ ಮೇರುಪಂಕ್ತಿಯಲ್ಲಿದ್ದಾರೆ. ಅವರ ಈ ಸೇವೆಯನ್ನು ಸ್ಮರಿಸಲು ಮೂರು ದಿನಗಳ ಕಾರ್ಯಕ್ರಮ ಆಯೋಜಿಸಲಾಗಿದೆ.ಪ್ರೊ. ಎಮ್ ಆರ್ ಕೃಷ್ಣಮೂರ್ತಿ ಅವರಿಗೆ ಜೀವಮಾನ ನೃತ್ಯ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಮತ್ತಿತರ 74 ಕಲಾವಿದರನ್ನೂ ಇದೇ ಸಂದರ್ಭದಲ್ಲಿ ಗೌರವಿಸಲಾಗುತ್ತದೆ.



ಎ.ವಿ. ಸತ್ಯನಾರಾಯಣ

ಕಾರ್ಯಕ್ರಮವನ್ನು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷೆ ಶುಭ ಧನಂಜಯ ಉದ್ಘಾಟಿಸಲಿದ್ದಾರೆ. ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, ಕಲಾವಿದರಾದ ಸುಪರ್ಣಾ ಸಾಯಿ ವೆಂಕಟೇಶ್, ನಂದಿನಿ ಮೆಹ್ತಾ ಭಾಗವಹಿಸಲಿದ್ದಾರೆ. ಮೂರು ದಿನಗಳ ನಡೆಯುವ ಕಾರ್ಯಕ್ರಮದಲ್ಲಿ ಕಥಕ್, ಭರತನಾಟ್ಯ ಸೇರಿದಂತೆ ವಿವಿಧ ಪ್ರಕಾರಗಳ ನೃತ್ಯಗಳು ಪ್ರದರ್ಶನಗಳು ನಡೆಯಲಿವೆ. ರೋಟರಿ ದಸರಾ ಡಾನ್ಸ್ ಆ್ಯಂಡ್ ದಾಂಡಿಯಾ ಉತ್ಸವವೂ ಜರುಗಲಿದೆ ಎಂದು ಕೇಂದ್ರದ ನಿರ್ದೇಶಕ ಎ.ವಿ. ಸತ್ಯನಾರಾಯಣ ತಿಳಿಸಿದ್ದಾರೆ.

ವಾರ್ಷಿಕ ನೃತ್ಯ ಹಬ್ಬ

ಅಂಜಲಿ ಸ್ಕೂಲ್ ಆಫ್ ಡಾನ್ಸ್ ಆ್ಯಂಡ್ ಮ್ಯೂಸಿಕ್ ವತಿಯಿಂದ ಅಕ್ಟೋಬರ್ 13ರಂದು ಜೆ.ಸಿ. ರಸ್ತೆಯಲ್ಲಿರುವ ಎಡಿಎ ರಂಗಮಂದಿರ ಸಂಜೆ 5.30ಕ್ಕೆ 'ಕಲಾರ್ಪಣ ಆರನೇ ವಾರ್ಷಿಕ ನೃತ್ಯ ಹಬ್ಬ' ನಡೆಯಲಿದೆ.



ಅಂಜಲಿ ಸ್ಕೂಲ್ ಆಫ್ ಡಾನ್ಸ್ ಆ್ಯಂಡ್ ಮ್ಯೂಸಿಕ್‌ನ ವಿದ್ಯಾರ್ಥಿಗಳ ನೃತ್ಯ ಪ್ರದರ್ಶನ

ಅಕ್ಟೋಬರ್ 14–

ಮೈಸೂರು ಶೈಲಿಯ ಕಲಾಕೃತಿಗಳ ಪ್ರದರ್ಶನ

ವಿಷ್ಣು ಕಲಾ ಆರ್ಟ್ಸ್ ವತಿಯಿಂದ ಅಕ್ಟೋಬರ್ 14ರಿಂದ 20ರವರೆಗೆ ಕುಮಾರಕೃಪಾ ರಸ್ತೆಯಲ್ಲಿರುವ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ 'ಮೈಸೂರು ಶೈಲಿಯ' ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ.

ಅ. 14ರಂದು ಕಲಾವಿದರಾದ ಕೆ.ಎಸ್. ನಮ್ರತಾ ಅವರು ಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ. ಮೈಸೂರಿನ ರಾಮಸಿಂಗ್ ಮ್ಯೂಸಿಯಂನ ಆಫ್ ಪೇಟಿಂಗ್ಸ್‌ನ ಸಂಸ್ಥಾಪಕ ಆರ್.ಜಿ. ಸಿಂಗ್ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಪ್ರತಿದಿನ ಬೆಳಿಗ್ಗೆ 10ರಿಂದ ರಾತ್ರಿ 8ಗಂಟೆಯವರೆಗೆ ಪ್ರದರ್ಶನ ಇರಲಿದೆ.

ಮಲ್ಲೇಶ್ವರಂ
ಸುದರ್ಶನ್ ಜುವೆಲ್ಲರ್ಸ್



100%* Buy Back on Old Gold

25%* off on Making Charges of Silver Articles

₹100*/- OFF/gram on Gold Rate

ದಸರಾ ಹಬ್ಬದ ಸಂಭ್ರಮ

ಉಡುಗೊರೆಯ ಆನಂದ

ಹಬ್ಬಕ್ಕೆ ಇಲ್ಲಿಗೆ ಬನ್ನಿ

MALLESHWARAM

Sudarshan Jewellers

916 BIS HALLMARK JEWELLERY | KANJEEVARAM SILKS | ETHNIC WEAR | WOMEN'S | MEN'S | KID'S WEAR

CAR PARKING AVAILABLE

NO.9 MARGOSA ROAD, 8TH CROSS MALLESHWARAM
BANGALORE-03 | 080-40980441 | 46300300

ಶುಕ್ರವಾರ, ಅಕ್ಟೋಬರ್ 11, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 283 | ಪುಟ 36
• www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಓದುಗರ ಗಮನಕ್ಕೆ
ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ

ಸಚಿವರ ಪ್ರತ್ಯೇಕ ಸಭೆ: ಸಿದ್ದರಾಮಯ್ಯ ಅತೃಪ್ತಿ 5
ಗಾಜಾದಲ್ಲಿ ಇಸ್ರೇಲ್ ದಾಳಿ: 27 ಸಾವು 6

ಸೆನ್ಸೆಕ್ಸ್	ನಿಫ್ಟಿ	₹/$
81,611	24,998	83.98

ಲಾವೊಸ್‌ನಲ್ಲಿ ಪ್ರಧಾನಿ ಮೋದಿ

ವಿಯನ್‌ಟಿಯಾನ್, ಲಾವೊಸ್ (ಪಿಟಿಐ): ಭಾರತ ಮತ್ತು ಆಸಿಯಾನ್ ಶೃಂಗದ ರಾಷ್ಟ್ರಗಳ ನಡುವೆ ಸಮಗ್ರ ಪಾಲುದಾರಿಕೆಯನ್ನು ಇನ್ನಷ್ಟು ಬಲಪಡಿಸಲು ಪ್ರಧಾನಿ ನರೇಂದ್ರ ಮೋದಿ ಗುರುವಾರ 10 ಅಂಶಗಳ ಕಾರ್ಯಕ್ರಮವನ್ನು ಪ್ರಕಟಿಸಿದರು. 6

ಗ್ರಾ. ಪಂ. ನೌಕರರ ಮುಷ್ಕರ ಅಂತ್ಯ 5

ಬಿಡುವು

ಪ್ರಿಯ ಓದುಗರು, ಜಾಹೀರಾತುದಾರರು, ಪತ್ರಿಕಾ ವಿತರಕರಿಗೆ ಆಯುಧ ಪೂಜೆ ಹಾಗೂ ವಿಜಯದಶಮಿ ಶುಭಾಶಯಗಳು

ಆಯುಧಪೂಜೆ ನಿಮಿತ್ತ ಶುಕ್ರವಾರ ನಮ್ಮ ಕಚೇರಿಗೆ ಬಿಡುವು. ಹೀಗಾಗಿ ಶನಿವಾರದ ಸಂಚಿಕೆ ಪ್ರಕಟವಾಗುವುದಿಲ್ಲ.
–ಸಂ

ದಿನದ ಬೆಳವಣಿಗೆಗಳ ಅಪ್‌ಡೇಟ್ಸ್‌ಗಾಗಿ www.prajavani.net ನೋಡಿ.

ರಾಜ್ಯಕ್ಕೆ ₹6,498 ಕೋಟಿ ಬಿಡುಗಡೆ


ಪ್ರಜಾವಾಣಿ ವಾರ್ತೆ


ನವದೆಹಲಿ: ಕೇಂದ್ರ ಸರ್ಕಾರವು ಕರ್ನಾಟಕ ರಾಜ್ಯಕ್ಕೆ ತೆರಿಗೆ ಪಾಲಿನ ಕಂತಿನ ರೂಪದಲ್ಲಿ ₹6,498 ಕೋಟಿಯನ್ನು ಗುರುವಾರ ಬಿಡುಗಡೆ ಮಾಡಿದೆ. ಕರ್ನಾಟಕಕ್ಕೆ ಹೋಲಿಸಿದರೆ ಬಿಜೆಪಿ ಆಡಳಿತವಿರುವ ಉತ್ತರದ ರಾಜ್ಯಗಳಿಗೆ ಬಿಡುಗಡೆ ಆಗಿರುವ ಮೊತ್ತ ಹೆಚ್ಚು ಇದೆ.


ಕೇಂದ್ರವು 28 ರಾಜ್ಯಗಳಿಗೆ ಒಟ್ಟು ₹1,78,173 ಕೋಟಿ ಬಿಡುಗಡೆಗೊಳಿಸಿದೆ. ಇದರಲ್ಲಿ ಅಕ್ಟೋಬರ್ ತಿಂಗಳ ₹89,086 ಕೋಟಿ ಮುಂಗಡ ಕಂತು ಸಹ ಸೇರಿದೆ.

15ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ, ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರ ಸಂಗ್ರಹಿಸುವ ತೆರಿಗೆಯಲ್ಲಿ ಶೇ 41ರಷ್ಟನ್ನು ರಾಜ್ಯ ಸರ್ಕಾರಗಳಿಗೆ 14 ಕಂತುಗಳಲ್ಲಿ ಹಂಚಿಕೆ ಮಾಡಬೇಕಾಗುತ್ತದೆ. 'ಮುಂಬರುವ ಹಬ್ಬದ ಋತುವಿನ ದೃಷ್ಟಿಯಿಂದ ಮತ್ತು ರಾಜ್ಯ ಸರ್ಕಾರಗಳಿಗೆ ಅಭಿವೃದ್ಧಿ ಹಾಗೂ ಬಂಡವಾಳ ವೆಚ್ಚಕ್ಕೆ ಹೆಚ್ಚಿನ ಹಣ ತೊಡಗಿಸಲು ಅನುಕೂಲ ಮಾಡಲು ಈ ಕಂತು ಬಿಡುಗಡೆಗೊಳಿಸಲಾಗಿದೆ' ಎಂದು ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ.

2024–25ನೇ ಸಾಲಿನಲ್ಲಿ ರಾಜ್ಯಗಳಿಗೆ ತೆರಿಗೆ ಪಾಲಿನ ರೂಪದಲ್ಲಿ ₹12,19,783 ಕೋಟಿ ನೀಡಲಾಗುತ್ತದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಭಾಷಣದಲ್ಲಿ ತಿಳಿಸಿದ್ದರು.







ಚಿನಕುರುಳಿ

ಪ್ರಕಾಶ್ ಶೆಟ್ಟಿ



5 ಕೆ.ಜಿ ಗೋಧಿ ಕಳವು ಶಂಕೆ: ದಲಿತ ಬಾಲಕರ ತಲೆಬೋಳಿಸಿ ಮೆರವಣಿಗೆ

ಬಹರಾಯಿಚ್ (ಉತ್ತರಪ್ರದೇಶ) (ಪಿಟಿಐ): ಕೋಳಿ ಫಾರಂನಿಂದ 5 ಕೆ.ಜಿ ಗೋಧಿ ಕದ್ದಿದ್ದಾರೆಂದು ಶಂಕಿಸಿ ಪರಿಶಿಷ್ಟ ಜಾತಿಯ ಮೂವರು ಬಾಲಕರನ್ನು ಥಳಿಸಿ, ಅವರ ತಲೆ ಬೋಳಿಸಿ ಮೆರವಣಿಗೆ ಮಾಡಿರುವ ಪ್ರಕರಣ ನಾನ್‌ಪಾರಾ ಪೊಲೀಸ್ ಠಾಣೆ ವ್ಯಾಪ್ತಿಯ ತಾಜ್‌ಪುರ ಟೆಡಿಯಾ ಗ್ರಾಮದಲ್ಲಿ ನಡೆದಿದೆ.

ಕೋಳಿ ಫಾರಂನ ಇಬ್ಬರು ಮಾಲೀಕರು ಮತ್ತಿಬ್ಬರು ಆರೋಪಿಗಳ ಜತೆ ಸೇರಿ, 12ರಿಂದ 14 ವರ್ಷ ವಯಸ್ಸಿನ ಮೂವರು ಬಾಲಕರ ಮುಂಗೈಯಲ್ಲಿ 'ಕಳ್ಳ' ಎಂದು ಬರೆಸಿ, ಮುಖಕ್ಕೆ ಮಸಿ ಬಳಿದು, ಕೈಗಳನ್ನು ಕಟ್ಟಿ ಗ್ರಾಮದಾದ್ಯಂತ ಮಂಗಳವಾರ ಮೆರವಣಿಗೆ ನಡೆಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಂತ್ರಸ್ತ ಬಾಲಕರ ಕುಟುಂಬದವರು ನೀಡಿದ ದೂರು ಆಧರಿಸಿ ನಜೀಂ ಖಾನ್, ಖಾಸಿಂ ಖಾನ್, ಇನಾಯತ್ ಮತ್ತು ಸಾನು ಎಂಬವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್‌ಗಳು ಮತ್ತು ಎಸ್‌ಸಿ, ಎಸ್‌ಟಿ ವಿರುದ್ಧ ದೌರ್ಜನ್ಯ ತಡೆ ಕಾಯ್ದೆಯಡಿ ಬುಧವಾರ ಪ್ರಕರಣ ದಾಖಲಿಸಲಾಗಿದೆ. ಆರೋಪಿ ಸಾನು ಎಂಬಾತ ತಲೆಮರೆಸಿಕೊಂಡಿದ್ದು, ಉಳಿದ ಮೂವರನ್ನು ಬಂಧಿಸಲಾಗಿದೆ ಎಂದು ನಾನ್‌ಪಾರಾ ಠಾಣೆಯ ಅಧಿಕಾರಿ ಪ್ರದೀಪ್ ಸಿಂಗ್ ತಿಳಿಸಿದ್ದಾರೆ.

4ನೇ ಪುಟ ನೋಡಿ

ನಾಳೆ ಜಂಬೂಸವಾರಿ

• ಎಂ. ಮಹೇಶ

ಮೈಸೂರು: ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ 'ಜಂಬೂಸವಾರಿ'ಯು ವಿಜಯದಶಮಿಯ ದಿನವಾದ ಶನಿವಾರ (ಅ.12) ನಡೆಯಲಿದ್ದು, ಜಿಲ್ಲಾಡಳಿತವು ಅಂತಿಮ ಹಂತದ ಸಿದ್ಧತೆಗಳನ್ನು ನಡೆಸುತ್ತಿದೆ.

'ರಾಜಪಥ'ದಲ್ಲಿ ಸಾಗಲಿರುವ 'ಪರಂಪರೆಯ ತೇರು' ವೀಕ್ಷಿಸಲು ಸಾವಿರಾರು ಮಂದಿ ಭಾಗವಹಿಸುವ ನಿರೀಕ್ಷೆ ಇದೆ.

ಶನಿವಾರ ಮಧ್ಯಾಹ್ನ 1.41ರಿಂದ 2.10ರವರೆಗೆ ಅರಮನೆ ಬಲರಾಮ ದ್ವಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಂದಿಧ್ವಜ ಪೂಜೆ ನೆರವೇರಿಸಿ ಚಾಲನೆ ನೀಡುವರು. ಸಂಜೆ 4ರಿಂದ 4.30ರವರೆಗೆ ಅರಮನೆ ಆವರಣದಲ್ಲಿ 'ಅಭಿಮನ್ಯು' ಹೊರಲಿರುವ 750 ಕೆ.ಜಿ. ತೂಕದ ಚಿನ್ನದ ಅಂಬಾರಿಯಲ್ಲಿ ವಿರಾಜಮಾನಗೊಂಡ ಚಾಮುಂಡೇಶ್ವರಿ ದೇವಿ ಮೂರ್ತಿಗೆ ಪುಷ್ಪಾರ್ಚನೆ ಮಾಡುವರು.

4ನೇ ಪುಟ ನೋಡಿ



ಆಯುಧ ಪೂಜೆ ಮುನ್ನಾ ದಿನವಾದ ಗುರುವಾರ ಸಾಮಗ್ರಿ ಖರೀದಿಗೆ ಕೆ.ಆರ್. ಮಾರುಕಟ್ಟೆಗೆ ಹೆಚ್ಚಿನ ಸಂಖ್ಯೆಯಲ್ಲಿ ಜನ ಬಂದಿದ್ದರಿಂದ ಜನದಟ್ಟಣೆ ಉಂಟಾಗಿತ್ತು –ಪ್ರಜಾವಾಣಿ ಚಿತ್ರ

ನಗರದ ಹಲವೆಡೆ ಆಯುಧಪೂಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸರ್ಕಾರಿ ಹಾಗೂ ಖಾಸಗಿ ಕಚೇರಿಗಳಲ್ಲಿ ಗುರುವಾರವೇ ಆಯುಧ ಪೂಜೆ ನಡೆಸಲಾಯಿತು.

ಶುಕ್ರವಾರ ಆಯುಧ ಪೂಜೆ ಹಾಗೂ ಶನಿವಾರ ವಿಜಯದಶಮಿಯ ರಜೆ ಇರುವುದರಿಂದ ಬಹುತೇಕ ಕಚೇರಿಗಳಲ್ಲಿ ಮುಂಚಿತವಾಗಿ ಆಯುಧ ಪೂಜೆ ನೆರವೇರಿಸಲಾಯಿತು. ವಿಧಾನಸೌಧ, ವಿಕಾಸಸೌಧದಲ್ಲಿನ ಕಚೇರಿಗಳು ಹಾಗೂ ಎಂ.ಎಸ್. ಬಿಲ್ಡಿಂಗ್, ಬಿಬಿಎಂಪಿ ಸೇರಿದಂತೆ ವಿವಿಧ ಸರ್ಕಾರಿ ಕಚೇರಿಗಳನ್ನು ಬೆಳಿಗ್ಗೆಯಿಂದಲೇ ತಳಿರು-ತೋರಣಗಳಿಂದ ಸಿಂಗರಿಸಲಾಗಿತ್ತು.

ಕಚೇರಿಗಳಲ್ಲಿ ಹಬ್ಬದ ವಾತಾವರಣ ಮನೆ ಮಾಡಿತ್ತು. ವಾಹನಗಳಿಗೆ ಹಾಗೂ ಕಂಪ್ಯೂಟರ್‌ಗಳಿಗೆ ಸಿಬ್ಬಂದಿ ಸಮ್ಮುಖದಲ್ಲಿ ಪೂಜೆಗಳು ನೆರವೇರಿದವು. ಹೊಸ ಬಟ್ಟೆ ತೊಟ್ಟು ನೌಕರರು, ಪೂಜೆಯ ಬಳಿಕ ಸಿಹಿ ಹಂಚಿ ಸಂಭ್ರಮಿಸಿದರು. ಮಧ್ಯಾಹ್ನದ ನಂತರ ಬಹುತೇಕ ಕಚೇರಿಗಳು ಸಿಬ್ಬಂದಿಯಿಲ್ಲದೆ ಖಾಲಿಯಾಗಿದ್ದವು.



ವಿಧಾನಸೌಧದ ಆವರಣದಲ್ಲಿ ಸರ್ಕಾರಿ ವಾಹನಗಳಿಗೆ ಸಿಬ್ಬಂದಿ ಗುರುವಾರ ಪೂಜೆ ಸಲ್ಲಿಸಿದರು –ಪ್ರಜಾವಾಣಿ ಚಿತ್ರಗಳು

ನಗರದ ವಿವಿಧ ಮಾರುಕಟ್ಟೆಯಲ್ಲಿ ಆಯುಧ ಪೂಜೆಯ ಮುನ್ನಾದಿನವಾದ ಗುರುವಾರ ಹೂವು ಮತ್ತು ಹಣ್ಣಿನ ಖರೀದಿ ಜೋರಾಗಿತ್ತು. ಕೆ.ಆರ್. ಮಾರುಕಟ್ಟೆ, ಯಶವಂತಪುರ, ಬಸವನಗುಡಿ, ಮಲ್ಲೇಶ್ವರ ಮಾರುಕಟ್ಟೆ ಪ್ರದೇಶಗಳು ಜನಜಂಗುಳಿಯಿಂದ ಕೂಡಿದ್ದವು. ಬೆಲೆ ಏರಿಕೆಯ ನಡುವೆಯೂ ಸೇವಂತಿಗೆ, ಕನಕಾಂಬರ, ಗುಲಾಬಿ ಹೂವುಗಳು, ಬಾಳೆಕಂದು ಹಾಗೂ ಬೂದುಗುಂಬಳಗಳನ್ನು ಜನರು ಖರೀದಿಸಿದರು.

ಪೂಜಾ ಸಾಮಗ್ರಿಗಳಾದ ತೆಂಗಿನಕಾಯಿ, ಅರಿಶಿಣ-ಕುಂಕುಮ, ಅಗರಬತ್ತಿ, ಕರ್ಪೂರ, ವಿಭೂತಿ, ಗಂಧ, ದೀಪದ ಬತ್ತಿ, ಎಣ್ಣೆ ಮತ್ತು ಅಲಂಕಾರಿಕ ವಸ್ತುಗಳು, ರಂಗೋಲಿ ಪುಡಿಯ ಮಾರಾಟವೂ ಜೋರಾಗಿತ್ತು.

ವಾರಾಂತ್ಯದ ರಜೆ: ಬಸ್ ನಿಲ್ದಾಣ, ರಸ್ತೆಗಳಲ್ಲಿ ದಟ್ಟಣೆ

ದಸರಾ ಮಹೋತ್ಸವ ಸಂದರ್ಭದಲ್ಲಿ ವಾರಾಂತ್ಯ ಮೂರು ದಿನಗಳು ರಜೆ ಇರುವುದರಿಂದ ಪ್ರವಾಸ, ಧಾರ್ಮಿಕ ಸ್ಥಳ ಹಾಗೂ ಊರಿಗೆ ತೆರಳುವವರ ಸಂಖ್ಯೆ ಹೆಚ್ಚಾಗಿದ್ದು, ನಗರದ ಬಸ್ ನಿಲ್ದಾಣಗಳು ಗುರುವಾರ ಪ್ರಯಾಣಿಕರಿಂದ ಭರ್ತಿಯಾಗಿದ್ದವು.

ನಗರದಿಂದ ಹೊರಟ ಎಲ್ಲ ಬಸ್‌ಗಳು ಪ್ರಯಾಣಿಕರಿಂದ ತುಂಬಿದ್ದವು. ಬುಧವಾರ ರಾತ್ರಿಯಿಂದಲೇ ಜನರು ಊರಿನತ್ತ ತೆರಳಿದ್ದು ಕಂಡುಬಂತು. ಕೆಂಪೇಗೌಡ ಬಸ್‌ನಿಲ್ದಾಣ, ಯಶವಂತಪುರ, ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ, ಕಂಟೋನ್ಮೆಂಟ್ ಹಾಗೂ ಬೈಯಪ್ಪನಹಳ್ಳಿ ನಿಲ್ದಾಣದಲ್ಲೂ ಪ್ರಯಾಣಿಕರ ದಟ್ಟಣೆಯಿತ್ತು. ಸುತ್ತ-ಮುತ್ತಲಿನ ರಸ್ತೆಗಳಲ್ಲಿ ವಾಹನ ದಟ್ಟಣೆ ಉಂಟಾಗಿತ್ತು.



ನಗರದ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಗುರುವಾರ ಕಂಡು ಬಂದ ಜನದಟ್ಟಣೆ

ಖಾಸಗಿ ಬಸ್‌ಗಳಲ್ಲಿ ಪ್ರಯಾಣ ದರವು ದುಬಾರಿಯಾಗಿತ್ತು. ಕೊನೆಯ ಕ್ಷಣದಲ್ಲಿ ಬಂದ ಪ್ರಯಾಣಿಕರಿಗೆ ಸೀಟು ಲಭ್ಯ ಇಲ್ಲ ಎಂಬ ಉತ್ತರ ದೊರೆಯಿತು. ಇದರಿಂದ ಊರಿಗೆ ತೆರಳಲು ಬಂದ ಪ್ರಯಾಣಿಕರು ನಿರಾಸೆಗೆ ಒಳಗಾದರು.

ಕೆಲವು ಖಾಸಗಿ ಬಸ್‌ಗಳಲ್ಲಿ ಮಿತಿಗಿಂತ ಹೆಚ್ಚಿನ ಪ್ರಯಾಣಿಕರನ್ನು ಕರೆದೊಯ್ಯುತ್ತಿರುವುದು ತಪಾಸಣೆ ವೇಳೆ ಕಂಡುಬಂದಿದೆ. ಚಾಲಕರು ಹಾಗೂ ನಿರ್ವಾಹಕರಿಗೆ ಎಚ್ಚರಿಕೆ ನೀಡಿದ್ದು, ನೋಟಿಸ್ ಕೊಡಲಾಗಿದೆ ಎಂದು ಆರ್‌ಟಿಒ ಅಧಿಕಾರಿಗಳು ತಿಳಿಸಿದರು.

ವಾಹನ ದಟ್ಟಣೆ: ತುಮಕೂರು ರಸ್ತೆ, ಮೈಸೂರು ರಸ್ತೆ, ಬಳ್ಳಾರಿ ರಸ್ತೆಯಲ್ಲಿ ಗುರುವಾರ ರಾತ್ರಿಯಿಂದಲೇ ವಾಹನ ದಟ್ಟಣೆ ಕಂಡುಬಂತು. ಜಂಕ್ಷನ್‌ಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಇದರಿಂದ ಚಾಲಕರು ಪರದಾಡಿದರು.

ನಾಲ್ವರಿಗೆ 'ಆಶ್ವಾಸನ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ರಂಗನಗೌಡ



ಶ್ರೀಧರ ಷಡಕ್ಷರಿ



ಪಿ.ಕೃಷ್ಣಮೂರ್ತಿ



ಎಂ.ನಾಗೇಶ

ಬೆಂಗಳೂರು: ನಗರದ ಆಶ್ವಾಸನ ಫೌಂಡೇಷನ್ ನೀಡುವ 2024ನೇ ಸಾಲಿನ 'ಆಶ್ವಾಸನ ಪ್ರಶಸ್ತಿ'ಗೆ ವಿವಿಧ ಕ್ಷೇತ್ರಗಳ ನಾಲ್ವರು ಸಾಧಕರನ್ನು ಆಯ್ಕೆ ಮಾಡಲಾಗಿದೆ.

ಸಂಗೀತ ಸಂಘಟಕ ರಂಗನಗೌಡ ಕೆ. ನಾಡಿಗೇರ (ಕುಂದಗೋಳ), ಯಕ್ಷಗಾನ ಕಲಾವಿದ ಶ್ರೀಧರ ಷಡಕ್ಷರಿ (ಕುಮಟಾದ ಕತಗಾಲ್), ತಬಲಾ ವಾದಕ ಎಂ. ನಾಗೇಶ (ಬೆಂಗಳೂರು) ಹಾಗೂ ಮೂರ್ತಿಗಳಿಗೆ ಹೊಯ್ಸಳ ಶೈಲಿಯಲ್ಲಿ ಹಿತ್ತಾಳೆಯ ಎರಕ ಹೊಯ್ದು ಹೊನ್ನ ಹೊಳಪು ನೀಡುತ್ತಿದ್ದ ಪಿ. ಕೃಷ್ಣಮೂರ್ತಿ (ಬ್ಯಾಡರಹಳ್ಳಿ) ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ₹15 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ.

'ಸಪ್ತಕ' ಸಂಸ್ಥೆಯ ಮುಖ್ಯಸ್ಥ ಜಿ.ಎಸ್. ಹೆಗಡೆ ಅವರ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಅ.19ರಂದು ಬೆಳಿಗ್ಗೆ 9.45ಕ್ಕೆ ಲ್ಯಾವೆಲ್ಲೆ ರಸ್ತೆಯಲ್ಲಿರುವ ರೋಟರಿ ಕ್ಲಬ್‌ನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಫೌಂಡೇಷನ್‌ನ ವ್ಯವಸ್ಥಾಪಕ ಟ್ರಸ್ಟಿ ಮಾಳವಿಕಾ ಉಭಯಕರ್ ಬಿಜೂರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಆರೋಗ್ಯ ತಪಾಸಣೆಗೆ ಶಿಬಿರಗಳು ಸಹಕಾರಿ'

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಲಯನ್ಸ್ ಕ್ಲಬ್ ಆಫ್ ಬೆಂಗಳೂರು, ಶಿವಗಂಗಾ ಹಾಗೂ ತುಮಕೂರು ಇವರ ಸಹಯೋಗದಲ್ಲಿ ದಾಬಸ್ ಪೇಟೆ ಪಟ್ಟಣದ ಜ್ಞಾನ ಸಂಗಮ ಕಾಲೇಜಿನಲ್ಲಿ ಉಚಿತ ಆರೋಗ್ಯ ಶಿಬಿರವನ್ನು ಆಯೋಜಿಸಲಾಗಿತ್ತು.

ತುಮಕೂರಿನ ಸಿದ್ದಾರ್ಥ ವೈದ್ಯಕೀಯ ಸಂಸ್ಥೆಯ ಡಾ.ರಾಕೇಶ್ ಮಾತನಾಡಿ, 'ಬಹಳಷ್ಟು ಮಂದಿ ಸುಲಭವಾಗಿ ಗುಣಪಡಿಸ ಬಹುದಾದ ಹಲವು ರೋಗಗಳಿಗೂ ಚಿಕಿತ್ಸೆ ಪಡೆಯುವುದಿಲ್ಲ. ಇಂಥ ಶಿಬಿರದಲ್ಲಿ ತಪಾಸಣೆ ಮಾಡಿಸಿಕೊಂಡು ಆರೋಗ್ಯ ವೃದ್ಧಿಸಿಕೊಳ್ಳಿ' ಎಂದು ಸಲಹೆ ನೀಡಿದರು.

ನಗರದಲ್ಲಿ ಇಂದು

ನವರಾತ್ರಿ ವಿಶೇಷ

'ದಿವಾರಾತ್ರಿ ಅಖಂಡಲ ಗೊಂಧಳ ಹಾಗೂ ಉಧೋದೀವಟಿ ಪ್ರಾರ್ಥನೆ' ಅಂಬಾಭವಾನಿ ಪೂಜೆ: ದೇವಿ ಕಲಶ ಪೀಠಾರೋಹಣ, ಸುಮಂಗಲಿ ವಂದನೆ, ದೇವಿ ಉಡಿ ಸೇವೆ, ದೀವಟಿ ಪ್ರಾರ್ಥನೆ, ಹೂರ್ಣದಾರತಿ, ತೀರ್ಥಪ್ರಸಾದ ವಿನಿಯೋಗ, 'ಅಹೋರಾತ್ರಿ ಗೊಂಧಳ– ಉಧೋದೀವಟಿ ಪ್ರಾರ್ಥನೆ, ಆಯೋಜನೆ ಮತ್ತು ಸ್ಥಳ: ಭವಾನಿ ಕ್ಷೇತ್ರ ದೇವಿ ದೇವಸ್ಥಾನ, ಭುವನೇಶ್ವರಿನಗರ, ಎಂಟನೇ ಮುಖ್ಯರಸ್ತೆ, ಟಿ. ದಾಸರಹಳ್ಳಿ, ಬೆಳಿಗ್ಗೆ 9.45ರಿಂದ

ಭಜನೆ: ಸುಬ್ರಹ್ಮಣ್ಯನಗರದ ಜಾಹ್ನವಿ ಭಜನಾ ಮಂಡಳಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ಸ್ವಾಮಿ ಮಠ, ಮಂತ್ರಿ ಮಾಲ್ ಮೆಟ್ರೊ ನಿಲ್ದಾಣ ಮುಂಭಾಗ, ಸಂಜೆ 5

ವಚನ ನವರಾತ್ರಿ: 'ಮಹಾತ್ಯಾಗಿ ಮೋಳಿಗೆ ಮಹಾದೇವಿಯವರ ಪರಿಚಯ': ಶಿಲ್ಪಾ ಚಂದ್ರಪ್ಪಯ್ಯ, ಅತಿಥಿ: ಶಕುಂತಲಾ ಬಾಗಲಕೋಟೆ, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, 533, 7ನೇ ಮುಖ್ಯರಸ್ತೆ, ದೊಡ್ಡಬಸ್ತಿ ಮುಖ್ಯರಸ್ತೆ, ಕಲ್ಯಾಣ ಗೃಹ ನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5

ಶಾರದಾ ಮಹಾಭಿಷೇಕ, ಶಾರದಾ ಶರನ್ನವರಾತ್ರಿ ಮಹೋತ್ಸವ, ನೃತ್ಯ ನವರಾತ್ರಿ: ಭರತನಾಟ್ಯ ಪ್ರದರ್ಶನ: ಆರ್. ವಾಸುದೇವ್, ಚಾರ್ವಿ, ಕಥಕ ನೃತ್ಯ ಪ್ರದರ್ಶನ: ಜನಾರ್ದನ್ ರಾಜು, ಸ್ಥಳ: ಶೃಂಗೇರಿ ಶಂಕರ ಮಠ, ಸಂಜೆ 5.20ರಿಂದ

ಮಾತಾ ಅನ್ನಪೂರ್ಣೇಶ್ವರಿ ದೇವಿಗೆ ಹೂವಿನ ಅಲಂಕಾರ: ಕೊಳಲು ವಾದನ: ಶರಶ್ಚಂದ್ರ, ಸುಧನ್ವ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಶ್ರೀಮಾತಾ ಅನ್ನಪೂರ್ಣೇಶ್ವರಿ ದೇವಿ, ವಸಂತಪುರ, ಸಂಜೆ 6.30ರಿಂದ

ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಅಲಂಕಾರ: ಮಹಾಲಕ್ಷ್ಮಿ ದೇವಿ, ಸ್ಥಳ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೃಷ್ಣರಾಜಪುರ, ಸಂಜೆ 6ರಿಂದ

ದಸರಾ ಮಹೋತ್ಸವ: ಮಿಶ್ರ ಮಾಧುರ್ಯ: ಗಾನಸುಧಾ ಸಂಗೀತ ಶಾಲೆಯ ವಿದ್ಯಾರ್ಥಿಗಳು, ರಮ್ಯಾ ಸುಧೀರ್, ನೃತ್ಯ ವೈವಿಧ್ಯ: ಲಾಸ್ಯವರ್ಧನ ವಿದ್ಯಾರ್ಥಿಗಳು, ಆಯೋಜನೆ ಮತ್ತು ಸ್ಥಳ: ಲಾಸ್ಯ ವರ್ಧನ ಟ್ರಸ್ಟ್, ಮಲ್ಲೇಶ್ವರ, ಸಂಜೆ 6

ಆಯೋಜನೆ: ವರಸಿದ್ಧಿ ವಿನಾಯಕ ದೇವಾಲಯ: ಅಲಂಕಾರ: ಹೂವು-ದುರ್ಗಾಷ್ಟಮಿ-ಆಯುಧ ಪೂಜೆ, ದುರ್ಗಾ ನಮಸ್ಕಾರ ಪೂಜೆ, ಸ್ಥಳ: ವರಸಿದ್ಧಿ ವಿನಾಯಕ ದೇವಾಲಯ, ಕೆನರಾ ಬ್ಯಾಂಕ್ ಕಾಲೊನಿ, ಸಂಜೆ 6.30ರಿಂದ

ಆಯೋಜನೆ: ಸರ್ಕಲ್ ಮಾರಮ್ಮ ದೇವಸ್ಥಾನ: ಅಲಂಕಾರ: ಮುತ್ತಿನ ಅಲಂಕಾರ, ಮಧ್ಯಾಹ್ನ 1.30ಕ್ಕೆ ಸಾಮೂಹಿಕ ಲಲಿತಾ ಸಹಸ್ರನಾಮ ಪಾರಾಯಣ, ಭಜನೆ: ತತ್ವ-18 ಮತ್ತು ತಂಡ, ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ, ಸಂಜೆ 6.30

ಆಯೋಜನೆ: ವೆಂಕಟರಮಣ ಸ್ವಾಮಿ ದೇವಸ್ಥಾನ: ಅಲಂಕಾರ: ಕೃಷ್ಣವತಾರ, ಭರತನಾಟ್ಯ ಪ್ರದರ್ಶನ: ಸುಷ್ಮಾ, ಸ್ಥಳ: ವೆಂಕಟರಮಣ ಸ್ವಾಮಿ ದೇವಸ್ಥಾನ ಕಣಿಯರ ಕಾಲೊನಿ, ಚಾಮರಾಜಪೇಟೆ, ಸಂಜೆ 6.30

ಶರನ್ನವರಾತ್ರಿ ಮತ್ತು ವಿಜಯದಶಮಿ: ದೊಡ್ಡಮ್ಮ ದೇವಿಗೆ ದುರ್ಗಿ ಅಲಂಕಾರ, ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಚಿಕ್ಕದೇವಸಂದ್ರ, ಕೃಷ್ಣರಾಜಪುರ, ಸಂಜೆ 7.30

ಊಂಜಲ್ ಸಂಗೀತೋತ್ಸವ: ಗಾಯನ: ರಂಜಿತಾ ಪ್ರಸಾದ್, ಪಿಟೀಲು: ಎಂ.ಎಸ್. ಗೋವಿಂದಸ್ವಾಮಿ, ಮೃದಂಗ: ಬಾಲಸುಬ್ರಹ್ಮಣ್ಯಂ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರಸ್ವಾಮಿ ದೇವಸ್ಥಾನ, 16ನೇ ಅಡ್ಡರಸ್ತೆ, ವಯ್ಯಾಲಿ ಕಾವಲ್


ತುಮಕೂರು ದಸರಾ ಉತ್ಸವದ ಅಂಗವಾಗಿ ದಸರಾ ಉತ್ಸವದಲ್ಲಿ ವಿಂಟೇಜ್ ಕಾರುಗಳ ಪ್ರದರ್ಶನಕ್ಕೆ ಚಾಲನೆ: ಟಿ.ಬಿ. ಜಯಚಂದ್ರ, ಡಾ.ಎಚ್.ಡಿ. ರಂಗನಾಥ್, ಸ್ಥಳ: ವಿಧಾನಸೌಧದ ಮುಂಭಾಗ, ಬೆಳಿಗ್ಗೆ 7.30

ಸುದ್ದಿ 2 ನಿಮಿಷ

ಕೆಂಪೇಗೌಡ ಕಾಲೇಜು: 100 ಹೆಚ್ಚುವರಿ ವೈದ್ಯಕೀಯ ಸೀಟು

ಬೆಂಗಳೂರು: ಇಲ್ಲಿನ ಕೆಂಪೇಗೌಡ ವೈದ್ಯಕೀಯ ಕಾಲೇಜಿನಲ್ಲಿ ಹೊಸದಾಗಿ 100 ಸೀಟುಗಳು ಲಭ್ಯವಿದ್ದು, ಅವುಗಳ ಹಂಚಿಕೆಗೆ ಸರ್ಕಾರ ಆದೇಶಿಸಿದೆ. ಈ ಕಾಲೇಜಿಗೆ ಮಾತ್ರ ಅನ್ವಯವಾಗುವಂತೆ ಹೊಸದಾಗಿ ಆಯ್ಕೆ ನಮೂದಿಸಲು ಅ. 14ರ ರಾತ್ರಿ 11.59 ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಈಗಾಗಲೇ ಬೇರೆ ಕಾಲೇಜುಗಳಲ್ಲಿ ಸೀಟು ಪಡೆದವರು ಹಾಗೂ ಸೀಟು ಹಂಚಿಕೆಯಾಗದವರೂ 'ಆಪ್ಷನ್' ಎಂಟ್ರಿ ಮಾಡುವ ಮೂಲಕ ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು ಎಂದು ಕೆಇಎ ಹೇಳಿದೆ.



ಈಗಾಗಲೇ ಶುಲ್ಕ ಪಾವತಿಸಿ ವೈದ್ಯಕೀಯ ಮಾಪ್‌ಅಪ್ ಸುತ್ತಿನಲ್ಲಿ ಭಾಗವಹಿಸುತ್ತಿರುವ ಇತರ ಅಭ್ಯರ್ಥಿಗಳು ಸಹ ಕೆಂಪೇಗೌಡ ವೈದ್ಯಕೀಯ ಕಾಲೇಜಿನ ಸೀಟುಗಳಿಗೆ ಆಪ್ಷನ್ ನಮೂದಿಸಬಹುದು ಹಾಗೂ ಸೀಟ್‌ಮ್ಯಾಟ್ರಿಕ್ಸ್‌ನಲ್ಲಿ 'ಇರುವ ಕಾಲೇಜುಗಳಿಗೂ ಆಪ್ಷನ್ ದಾಖಲಿಸಲು ಅವಕಾಶವಿರುತ್ತದೆ. ಮಾಪ್‌ಅಪ್ ಸುತ್ತಿಗೆ ವೈದ್ಯಕೀಯ ಕೋರ್ಸ್ ಶುಲ್ಕ ಠೇವಣಿ ಪಾವತಿಸಲು ಅ. 14ರವರೆಗೆ ಅವಕಾಶ ನೀಡಲಾಗಿದೆ ಎಂದು ಮಾಹಿತಿ ನೀಡಿದೆ.

ಅ.16ರಂದು ಕಾವೇರಿ 5ನೇ ಹಂತದ ಯೋಜನೆ ಲೋಕಾರ್ಪಣೆ

ಮಂಡ್ಯ: ಮಳವಳ್ಳಿ ತಾಲ್ಲೂಕಿನ ತೊರೆಕಾಡನಹಳ್ಳಿಯಲ್ಲಿ ಅಕ್ಟೋಬರ್ 16ರಂದು ಬೆಳಿಗ್ಗೆ 10.30 ಗಂಟೆಗೆ ಕಾವೇರಿ 5ನೇ ಹಂತದ ಕುಡಿಯುವ ನೀರಿನ ಯೋಜನೆ ಲೋಕಾರ್ಪಣೆ ಸಮಾರಂಭವನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಲೋಕಾರ್ಪಣೆ ಮಾಡಲಿದ್ದಾರೆ. ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಎಚ್.ಡಿ. ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ವಿ. ಸೋಮಣ್ಣ ಭಾಗವಹಿಸಲಿದ್ದಾರೆ.

ಮಳವಳ್ಳಿ ಶಾಸಕ ಪಿ.ಎಂ. ನರೇಂದ್ರಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ. ಅತಿಥಿಗಳಾಗಿ ರಾಜ್ಯ ಸಚಿವರಾದ ಎನ್. ಚಲುವರಾಯಸ್ವಾಮಿ, ರಾಮಲಿಂಗಾರೆಡ್ಡಿ, ಕೆ.ಜೆ. ಜಾರ್ಜ್, ದಿನೇಶ್ ಗುಂಡೂರಾವ್, ಕೃಷ್ಣ ಭೈರೇಗೌಡ, ಬೈರತಿ ಸುರೇಶ್ ಭಾಗವಹಿಸಲಿದ್ದಾರೆ.

ಮನೆ- ಮನೆಗೂ ಕಾವೇರಿ ನೀರು ತಲುಪಿಸುವ ಈ ಯೋಜನೆಯಲ್ಲಿ 4 ಲಕ್ಷ ನಳ ಸಂಪರ್ಕಗಳಿದ್ದು, 50 ಲಕ್ಷ ಫಲಾನುಭವಿಗಳಿಗೆ ಪ್ರಯೋಜನವಾಗಲಿದೆ. ಯೋಜನೆಗೆ ತಗುಲಿರುವ ಒಟ್ಟು ವೆಚ್ಚ ₹4,336 ಕೋಟಿ. ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳಿಗೆ ನೀರು ಸರಬರಾಜಾಗಲಿದ್ದು, ಯಲಹಂಕ, ಯಶವಂತಪುರ, ಬೆಂಗಳೂರು ದಕ್ಷಿಣ, ಬ್ಯಾಟರಾಯನಪುರ, ಬೊಮ್ಮನಹಳ್ಳಿ ವಲಯದ ಮನೆ-ಮನೆಗೂ ಕಾವೇರಿ ನೀರು ಪೂರೈಕೆಯಾಗಲಿದೆ.

ನಗರದಲ್ಲಿ ನಾಳೆ

ದಸರಾ ಮಹೋತ್ಸವ: ವಿಜಯದಶಮಿ ಆಚರಣೆ, ಸಂಗೀತ, ನೃತ್ಯ, ಪ್ರಸಾದ ವಿನಿಯೋಗ, ಆಯೋಜನೆ ಮತ್ತು ಸ್ಥಳ: ಲಾಸ್ಯ ವರ್ಧನ ಟ್ರಸ್ಟ್, ಮಲ್ಲೇಶ್ವರ, ಬೆಳಿಗ್ಗೆ 10

ಶರನ್ನವರಾತ್ರಿ ಮತ್ತು ವಿಜಯದಶಮಿ: ದೊಡ್ಡಮ್ಮ ದೇವಿ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪಲ್ಲಕ್ಕಿ ಮೆರವಣಿಗೆ, ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಚಿಕ್ಕದೇವಸಂದ್ರ, ಕೃಷ್ಣರಾಜಪುರ, ಬೆಳಿಗ್ಗೆ 11

ವಚನ ನವರಾತ್ರಿ: 'ವಚನ ವಿಜಯದಶಮಿ'ಯ ಸಾನ್ನಿಧ್ಯ: ಮೃತ್ಯುಂಜಯ ಸ್ವಾಮೀಜಿ, ಅತಿಥಿ: ಎಸ್.ಟಿ. ಸೋಮಶೇಖರ್, ಆಶಯ ನುಡಿ: ಎಸ್. ಪಿನಾಕಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಮಂಟಪ, ಬಸವೇಶ್ವನಗರ ಉದ್ಯಾನ, ಕೆಸಿಎಚ್‌ಎಸ್ ಬಡಾವಣೆ, ಸಂಜೆ 4



ಭಜನೆ: ಸುಧೀಂದ್ರನಗರದ ವಿಜಯವಿಠ್ಠಲ ಭಜನಾ ಮಂಡಳಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ಸ್ವಾಮಿ ಮಠ, ಮಂತ್ರಿ ಮಾಲ್ ಮೆಟ್ರೊ ನಿಲ್ದಾಣ ಮುಂಭಾಗ, ಸಂಜೆ 5

ಮಾತಾ ಅನ್ನಪೂರ್ಣೇಶ್ವರಿ ದೇವಿಗೆ ವಿಶೇಷ ಅಲಂಕಾರ: ಆಯೋಜನೆ ಮತ್ತು ಸ್ಥಳ: ಶ್ರೀಮಾತಾ ಅನ್ನಪೂರ್ಣೇಶ್ವರಿ ದೇವಿ, ವಸಂತಪುರ, ಸಂಜೆ 6.30ರಿಂದ

ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಅಲಂಕಾರ: ಚಾಮುಂಡೇಶ್ವರಿ ದೇವಿ, ಸ್ಥಳ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೃಷ್ಣರಾಜಪುರ, ಸಂಜೆ 6ರಿಂದ

ಆಯೋಜನೆ: ಸರ್ಕಲ್ ಮಾರಮ್ಮ ದೇವಸ್ಥಾನ: ಅಲಂಕಾರ: ಸುವರ್ಣ ಕವಚಾಲಂಕಾರ, ಮಧ್ಯಾಹ್ನ 1.30ಕ್ಕೆ ಸಾಮೂಹಿಕ ಲಲಿತಾ ಸಹಸ್ರನಾಮ ಪಾರಾಯಣ, ಗಣೇಶ ಮತ್ತು ಅಮ್ಮನವರ ಪಲ್ಲಕ್ಕಿ ಉತ್ಸವ, ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ, ಸಂಜೆ 6

ಆಯೋಜನೆ: ವರಸಿದ್ಧಿ ವಿನಾಯಕ ದೇವಾಲಯ: ಅಲಂಕಾರ: ಬೆಳ್ಳಿ-ವಿಜಯದಶಮಿ, ಭಜನೆ: ದೇವಾಲಯದ ಭಜನಾ ಮಂಡಳಿ, ಸ್ಥಳ: ವರಸಿದ್ಧಿ ವಿನಾಯಕ ದೇವಾಲಯ, ಕೆನರಾ ಬ್ಯಾಂಕ್ ಕಾಲೊನಿ, ಸಂಜೆ 6.30ರಿಂದ

ಆಯೋಜನೆ: ವೆಂಕಟರಮಣ ಸ್ವಾಮಿ ದೇವಸ್ಥಾನ: ನಗರೋತ್ಸವ, ಸ್ಥಳ: ವೆಂಕಟರಮಣ ಸ್ವಾಮಿ ದೇವಸ್ಥಾನ ಕಣಿಯರ ಕಾಲೊನಿ, ಚಾಮರಾಜಪೇಟೆ, ಸಂಜೆ 6.30

ಶುಕ್ರವಾರ, ಅಕ್ಟೋಬರ್ 11, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

'ಕಾಂಗ್ರೆಸ್ ಜೊತೆಗಿನ ಮೈತ್ರಿ ಅಬಾಧಿತ' 4

ಸಿನಿಮಾ ಪುರವಣಿ

ಧ್ರುವ ಸರ್ಜಾ ನಟನೆಯ ಐದನೇ ಸಿನಿಮಾ ಮಾರ್ಟಿನ್ ಇಂದು 3 ಸಾವಿರ ಚಿತ್ರಮಂದಿರಗಳಲ್ಲಿ ತೆರೆಕಾಣುತ್ತಿದೆ.



ಮಾಜಿ ಸಚಿವರು, ರಾಜಕೀಯ ನಾಯಕರೂ ತನಿಖಾ ವ್ಯಾಪ್ತಿಗೆ: ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ

ಕೋವಿಡ್ ಅಕ್ರಮ: ಎಸ್‌ಐಟಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿರ್ವಹಣೆ ಹೆಸರಿನಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಕುರಿತು, ತಪ್ಪಿತಸ್ಥರ ಮೇಲೆ ಅಪರಾಧ ಪ್ರಕರಣಗಳನ್ನು ದಾಖಲಿಸಿ ತನಿಖೆ ನಡೆಸಲು ವಿಶೇಷ ತನಿಖಾ ತಂಡ ರಚನೆಗೆ ಸರ್ಕಾರ ನಿರ್ಧರಿಸಿದೆ.

ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಡಿಕುನ್ಹಾ ನೇತೃತ್ವದ ಆಯೋಗವು ಸಲ್ಲಿಸಿರುವ ಮಧ್ಯಂತರ ವರದಿಯನ್ನು ಆಧರಿಸಿದ ಪ್ರಸ್ತಾವವು ಗುರುವಾರ ನಡೆದ ಸಚಿವ ಸಂಪುಟ ಸಭೆಯ ಮುಂದೆ ಮಂಡನೆಯಾಗಿತ್ತು. ಈ ಬಗ್ಗೆ ಚರ್ಚಿಸಿದ ಸಚಿವ ಸಂಪುಟ ಸಭೆ ಹಲವು ಮಹತ್ವದ ತೀರ್ಮಾನಗಳನ್ನು ಕೈಗೊಂಡಿದೆ.

ಸಭೆಯ ಬಳಿಕ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ, 'ಅಕ್ರಮ ನಡೆದಿರುವ ಕುರಿತು ಆಯೋಗವು ಮಧ್ಯಂತರ ವರದಿಯಲ್ಲಿ ವಿವರಿಸಿದೆ. ಈ ಅಕ್ರಮದಲ್ಲಿ ಯಾರ ಪಾತ್ರ ಏನು ಎಂಬುದನ್ನು ತನಿಖೆ ಮಾಡಿ ಎಸ್‌ಐಟಿ ಕ್ರಮ ತೆಗೆದುಕೊಳ್ಳಲಿದೆ' ಎಂದರು.

ಅಕ್ರಮದ ತನಿಖೆ ಮತ್ತು ತಪ್ಪಿತಸ್ಥರ ಮೇಲೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ನಿರಂತರವಾಗಿ ಮೇಲ್ವಿಚಾರಣೆ ನಡೆಸಲು ಸಚಿವ ಸಂಪುಟ ಉಪಸಮಿತಿ ರಚಿಸಲು ಕೂಡಾ ತೀರ್ಮಾನಿಸಲಾಗಿದೆ. ಈ ಉಪ ಸಮಿತಿಗೆ ಸದಸ್ಯರನ್ನು ಅಂತಿಮಗೊಳಿಸುವ ಅಧಿಕಾರವನ್ನು ಮುಖ್ಯಮಂತ್ರಿಗೆ ನೀಡಲಾಗಿದೆ ಎಂದರು.

ಕೋವಿಡ್ ನಿರ್ವಹಣೆಗಾಗಿ ₹7,223.64 ಕೋಟಿ ಮೊತ್ತದಲ್ಲಿ ವೈದ್ಯಕೀಯ ಉಪಕರಣ, ಔಷಧಗಳ ಖರೀದಿಯಲ್ಲಿ ನಡೆದ ಅವ್ಯವಹಾರದ ಕುರಿತು ನ್ಯಾಯಮೂರ್ತಿ ಜಾನ್ ಮೈಕೆಲ್ ಡಿಕುನ್ಹಾ ನೇತೃತ್ವದ ಆಯೋಗ ತನಿಖೆ ನಡೆಸಿ 11 ಸಂಪುಟಗಳಲ್ಲಿ ಮಧ್ಯಂತರ ವರದಿ ಸಲ್ಲಿಸಿದೆ. ತಪ್ಪಿತಸ್ಥರಿಂದ ₹500 ಕೋಟಿ ವಸೂಲಿಗೂ ಆಯೋಗ ಶಿಫಾರಸು ಮಾಡಿದೆ. ಈ ಹಣ ವಸೂಲಿಗೆ ಮತ್ತು ಅಕ್ರಮದಲ್ಲಿ ಭಾಗಿಯಾದ ಖಾಸಗಿ ಕಂಪನಿಗಳನ್ನು ಕಪ್ಪು ಪಟ್ಟಿಗೆ ಸೇರಿಸಲು ಕೂಡಾ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ ಎಂದರು.

ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಸಚಿವರು, 'ತನಿಖಾ ವರದಿಯಲ್ಲಿ ಕ್ರಿಮಿನಲ್ ಅಂಶ ಇರುವುದರಿಂದ ಎಸ್‌ಐಟಿ ತನಿಖೆಗೆ ನಿರ್ಣಯ ತೆಗೆದುಕೊಳ್ಳಲಾಗಿದೆ. ಅಕ್ರಮದಲ್ಲಿ ಭಾಗಿಯಾಗಿದ್ದ ಸಚಿವರು, ರಾಜಕೀಯ ನಾಯಕರನ್ನೂ ಎಸ್‌ಐಟಿ ತನಿಖೆಗೆ ಒಳಪಡಿಸಲಿದೆ' ಎಂದು ಹೇಳಿದರು.

ಆಯೋಗವು ಬಿಬಿಎಂಪಿಯ ನಾಲ್ಕು ವಲಯಗಳ ಮತ್ತು ರಾಜ್ಯದ ಎಲ್ಲ 31 ಜಿಲ್ಲೆಗಳ ವರದಿ ಸಲ್ಲಿಸಲು ಬಾಕಿಯಿದೆ. ಸಂಬಂಧಪಟ್ಟ ಇಲಾಖೆಗಳಿಂದ 55 ಸಾವಿರ ಕಡತಗಳನ್ನು ಪಡೆದು ಪರಿಶೀಲಿಸಿ ಆಯೋಗವು ವರದಿ ಸಲ್ಲಿಸಿದೆ ಎಂದೂ ಅವರು ತಿಳಿಸಿದರು.

ಕೋವಿಡ್ ಸಮಯದಲ್ಲಿ ಹಣದ ದುರುಪಯೋಗ ಮತ್ತು ಅಧಿಕಾರ ದುರುಪಯೋಗ ಬಗ್ಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿ ನೀಡಿದ್ದ ವರದಿಯನ್ನು 2023ರ ಜುಲೈ 17ರಂದು ವಿಧಾನ ಸಭೆಯಲ್ಲಿ ಮಂಡಿಸಲಾಗಿತ್ತು. ಈ ವರದಿಯ ಆಧಾರದಲ್ಲಿ ತನಿಖೆ ಮಾಡಿ ವರದಿ ಸಲ್ಲಿಸಲು ನ್ಯಾಯಮೂರ್ತಿ ಡಿಕುನ್ಹಾ ಆಯೋಗವನ್ನು ನೇಮಿಸಲಾಗಿತ್ತು ಎಂದೂ ಸಚಿವರು ವಿವರಿಸಿದರು.

ಮೃಣಾಲ್ ಸಕ್ಕರೆ ಕಾರ್ಖಾನೆಗೆ 19 ಗ್ರಾಮ

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನಲ್ಲಿರುವ ಶ್ರೀ ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆಗೆ ಕಬ್ಬು ಖರೀದಿಗೆ ಮೀಸಲಾಗಿದ್ದ ಧಾರವಾಡ ಜಿಲ್ಲೆಯ 19 ಗ್ರಾಮಗಳನ್ನು ಸಚಿವೆ ಲಕ್ಷ್ಮಿ ಹೆಬ್ಬಾಳಕರ ಕುಟುಂಬದ ಮೃಣಾಲ್ ಸಕ್ಕರೆ ಕಾರ್ಖಾನೆಗೆ ಮರು ಹಂಚಿಕೆ ಮಾಡಲು ಸಚಿವ ಸಭೆ ಒಪ್ಪಿಗೆ ನೀಡಿದೆ ಎಂದು ಎಚ್.ಕೆ. ಪಾಟೀಲ ತಿಳಿಸಿದರು.

'ಪುಡಕಲಕಟ್ಟೆ, ಉಪ್ಪಿನ ಬೆಟಗೇರಿ, ಹನುಮನಾಳ, ಕಲ್ಲೆ, ಕಬ್ಬೇನೂರ, ಕರಡಿಗುಡ್ಡ, ತಿಮ್ಮಾಪೂರ, ಮರೇವಾಡ, ಅಮ್ಮಿನಭಾವಿ, ಹಾರೋಬೆಳವಡಿ, ಕಲ್ಲೂರ, ಲೋಕೂರ, ಶಿಬಾರಗಟ್ಟಿ, ಯಾದವಾಡ, ಮುಳಮುತ್ತಲ, ಮಂಗಳಗಟ್ಟಿ, ಲಕಮಾಪುರ, ದಾಸನಕೊಪ್ಪ ಮತ್ತು ಕುರುಬಗಟ್ಟೆ ಈ ಗ್ರಾಮಗಳನ್ನು ಮೃಣಾಲ್ ಸಕ್ಕರೆ ಕಾರ್ಖಾನೆಗೆ ಮರುಹಂಚಿಕೆ ಮಾಡಲಾಗುವುದು. ಈ ಸಕ್ಕರೆ ಕಾರ್ಖಾನೆಯಿಂದ 7.50 ಕಿ.ಮೀ ಸುತ್ತಲಿನ ಗ್ರಾಮಗಳಿವು' ಎಂದರು.



ಕಾಂಗ್ರೆಸ್ ಅಧಿಕಾರಕ್ಕೆ ಬಂದ ಒಂದೂವರೆ ವರ್ಷದಿಂದಲೂ ಎಸ್‌ಐಟಿ ಭಜನೆ ಮಾಡುತ್ತಿದೆ. ವಿರೋಧ ಪಕ್ಷದಲ್ಲಿ ಇದ್ದಾಗಲೂ ಇದೇ ಚರ್ಚೆ ಮಾಡಿದ್ದರು. ಸಾರ್ವಜನಿಕ ಲೆಕ್ಕಪತ್ರ ಸಮಿತಿ ಅಧ್ಯಕ್ಷರು ಕಾಂಗ್ರೆಸ್‌ನವರೇ ಇದ್ದರು. ಇಷ್ಟು ದಿನ ತನಿಖೆ ಏಕೆ ಮಾಡಲಿಲ್ಲ? ಮುಡಾ, ವಾಲ್ಮೀಕಿ ನಿಗಮದ ಹಗರಣದ ಗಮನ ಬೇರೆ ಕಡೆ ಸೆಳೆಯಲು ಈಗ ನಾಟಕ ಮಾಡುತ್ತಿದ್ದಾರೆ

ಎಚ್.ಡಿ. ಕುಮಾರಸ್ವಾಮಿ
ಕೇಂದ್ರ ಬೃಹತ್ ಕೈಗಾರಿಕಾ ಸಚಿವ

ಟಾಟಾ ಸಮೂಹದ ಷೇರಿನ ಮೌಲ್ಯ ಶೇ 15ರಷ್ಟು ಹೆಚ್ಚಳ 5

ಬಿಡುವು

ಪ್ರಿಯ ಓದುಗರು, ಜಾಹೀರಾತುದಾರರು, ಪತ್ರಿಕಾ ವಿತರಕರಿಗೆ **ಆಯುಧ ಪೂಜೆ ಹಾಗೂ ವಿಜಯದಶಮಿ ಶುಭಾಶಯಗಳು**

ಆಯುಧಪೂಜೆ ನಿಮಿತ್ತ ಶುಕ್ರವಾರ ನಮ್ಮ ಕಚೇರಿಗೆ ಬಿಡುವು. ಹೀಗಾಗಿ ಶನಿವಾರದ ಸಂಚಿಕೆ ಪ್ರಕಟವಾಗುವುದಿಲ್ಲ.

–ಸಂ

ದಿನದ ಬೆಳವಣಿಗೆಗಳ ಅಪ್‌ಡೇಟ್ಸ್‌ಗಾಗಿ www.prajavani.net ನೋಡಿ.

ದರ್ಶನ್ ಜಾಮೀನು: ಅ.14ಕ್ಕೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಅಪಹರಣ, ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಟ ದರ್ಶನ್ ಅವರ ಜಾಮೀನು ಅರ್ಜಿಯ ವಿಚಾರಣೆಯನ್ನು ಪೂರ್ಣಗೊಳಿಸಿರುವ 57ನೇ ಸಿಸಿಎಚ್ ನ್ಯಾಯಾಲಯ ಆದೇಶವನ್ನು ಕಾಯ್ದಿರಿಸಿತು.

ಮುಂದುವರಿದ ವಾದ–ಪ್ರತಿವಾದವನ್ನು ಗುರುವಾರವೂ ಆಲಿಸಿದ ನ್ಯಾಯಾಧೀಶ ಜೈಶಂಕರ್ ಅವರು ಅಕ್ಟೋಬರ್ 14ಕ್ಕೆ ಜಾಮೀನು ಅರ್ಜಿಗೆ ಸಂಬಂಧಿಸಿದ ಆದೇಶವನ್ನು ಪ್ರಕಟಿಸುವುದಾಗಿ ಹೇಳಿದರು. ಅದೇ ದಿನವೇ, ದರ್ಶನ್ ಆಪ್ತರಾದ ಪವಿತ್ರಾಗೌಡ, ರವಿಶಂಕರ್, ನಾಗರಾಜ್, ಲಕ್ಷ್ಮಣ್ ಹಾಗೂ ದೀಪಕ್ ಅವರ ಜಾಮೀನು ಅರ್ಜಿ ಆದೇಶವೂ ಪ್ರಕಟ ಆಗಲಿದೆ.

ಕೊಲೆ ಪ್ರಕರಣದ ಆರೋಪದಡಿ ಜೂನ್ 11ರಂದು ದರ್ಶನ್ ಅವರನ್ನು ಬಂಧಿಸಲಾಗಿತ್ತು. ದರ್ಶನ್ ಅವರು ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದಾರೆ. ಅವರ ಪರವಾಗಿ ಸೆ.21ರಂದು ವಕೀಲರು ಜಾಮೀನು ಅರ್ಜಿ ಸಲ್ಲಿಸಿದ್ದರು.

ಈ ಪ್ರಕರಣದಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ಪ್ರಸನ್ನಕುಮಾರ್ ಅವರು ವಾದ ಮಂಡಿಸಿದ್ದರು. ಅವರ ವಾದಕ್ಕೆ ಪ್ರತಿಯಾಗಿ ದರ್ಶನ್ ಪರ ವಕೀಲ ಸಿ.ವಿ.ನಾಗೇಶ್ ವಾದಿಸಿದ್ದರು.

ದಕ್ಷಿಣ ಕೊರಿಯಾದ ಕಾಂಗ್‌ಗೆ ನೊಬೆಲ್ ಸಾಹಿತ್ಯ ಪುರಸ್ಕಾರ



ಹ್ಯಾನ್ ಕಾಂಗ್

ಸ್ಟಾಕ್‌ಹೋಮ್(ಎಪಿ): ಪ್ರಸಕ್ತ ಸಾಲಿನ ಸಾಹಿತ್ಯ ಕ್ಷೇತ್ರದ ನೊಬೆಲ್ ಪ್ರಶಸ್ತಿಗೆ ದಕ್ಷಿಣ ಕೊರಿಯಾ ಲೇಖಕಿ ಹ್ಯಾನ್ ಕಾಂಗ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಸ್ವೀಡಿಷ್ ಅಕಾಡೆಮಿ ಗುರುವಾರ ಘೋಷಿಸಿದೆ.

'ಮನುಷ್ಯನ ಜೀವನದ ಸೂಕ್ಷ್ಮತೆಗಳು ಹಾಗೂ ಎದುರಿಸಿದ ಆಘಾತಗಳನ್ನು ಹ್ಯಾನ್ ಅವರು ಕಾವ್ಯಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ' ಎಂದು ಅಕಾಡೆಮಿಯ ನೊಬೆಲ್ ಸಮಿತಿ ಕಾಯಂ ಕಾರ್ಯದರ್ಶಿ ಮ್ಯಾಟ್ಸ್ ಮಲ್ಮ್ ಹೇಳಿದ್ದಾರೆ.

53 ವರ್ಷದ ಹ್ಯಾನ್ ಕಾಂಗ್ ಅವರ 'ದಿ ವೆಜಿಟೇರಿಯನ್' ಎಂಬ ಕಾದಂಬರಿಗೆ 2016ರಲ್ಲಿ ಇಂಟರ್‌ನ್ಯಾಷನಲ್ ಬೂಕರ್ ಪ್ರಶಸ್ತಿ ಲಭಿಸಿತ್ತು. ಮಾಂಸಾಹಾರ ತ್ಯಜಿಸುವ ನಿರ್ಧಾರ ಕೈಗೊಂಡ ಮಹಿಳೆಯೊಬ್ಬಳು ಎದುರಿಸುವ ವಿನಾಶಕಾರಿ ಪರಿಣಾಮಗಳು ಈ ಕಾದಂಬರಿಯ ಕಥಾವಸ್ತುವಾಗಿದೆ.



ರತನ್ ಟಾಟಾ ಅವರ ಪಾರ್ಥಿವ ಶರೀರವನ್ನು ಮುಂಬೈನ ವರ್ಲಿಯಲ್ಲಿರುವ ವಿದ್ಯುತ್ ಚಿತಾಗಾರಕ್ಕೆ ಗುರುವಾರ ತರಲಾಯಿತು –ಪಿಟಿಐ ಚಿತ್ರ

ಭಾರತೀಯ ಔದ್ಯಮಿಕ ಕ್ಷೇತ್ರದ ಶಕೆಯೊಂದು ಅಂತ್ಯ

ರತನ್‌ಗೆ ಭಾವಪೂರ್ಣ ವಿದಾಯ

ಪ್ರಜಾವಾಣಿ ವಾರ್ತೆ

ಮುಂಬೈ: ಉದ್ಯಮಿ ಹಾಗೂ ದಾನಿ ರತನ್ ಟಾಟಾ ಅವರ ಅಂತ್ಯಕ್ರಿಯೆಯನ್ನು ಸಕಲ ಸರ್ಕಾರಿ ಗೌರವಗಳೊಂದಿಗೆ ಇಲ್ಲಿನ ವರ್ಲಿಯಲ್ಲಿರುವ ಚಿತಾಗಾರದಲ್ಲಿ ಗುರುವಾರ ನೆರವೇರಿಸಲಾಯಿತು. ಇದರೊಂದಿಗೆ ಭಾರತದ ಉದ್ಯಮ ಕ್ಷೇತ್ರದ ಶಕೆಯೊಂದು ಕೊನೆಗೊಂಡಂತಾಯಿತು.

ಪಾರ್ಸಿ ಸಂಪ್ರದಾಯದಲ್ಲಿ ಸಾಮಾನ್ಯವಾಗಿ ಪಾರ್ಥಿವ ಶರೀರವನ್ನು 'ಟವರ್ ಆಫ್ ಸೈಲೆನ್ಸ್'ನಲ್ಲಿ ಇರಿಸಲಾಗುತ್ತದೆ. ರತನ್ ಟಾಟಾ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆಯನ್ನು ಮಾತ್ರ ವಿದ್ಯುತ್ ಚಿತಾಗಾರದಲ್ಲಿ ನೆರವೇರಿಸಲಾಯಿತು.

ಗುರುವಾರ ಸಂಜೆ ರತನ್ ಟಾಟಾ ಅವರ ಪಾರ್ಥಿವ ಶರೀರವನ್ನು ಚಿತಾಗಾರಕ್ಕೆ ತಂದ ನಂತರ, ಮುಂಬೈ ಪೊಲೀಸರು ಕುಶಾಲ ತೋಪು ಹಾರಿಸಿ, ಗೌರವ ವಂದನೆ ಸಲ್ಲಿಸಿದಾಗ, ಇಡೀ ಚಿತಾಗಾರದಲ್ಲಿ ಗಾಢಮೌನ ಮನೆ ಮಾಡಿತ್ತು. ಸಾಮಾನ್ಯ ಜನರಲ್ಲದೇ, ಉದ್ಯಮ, ರಾಜಕೀಯ, ಚಿತ್ರರಂಗ ಸೇರಿದಂತೆ ವಿವಿಧ ಕ್ಷೇತ್ರಗಳ ಗಣ್ಯರು ಮಹಾನ್ ಚೇತನಕ್ಕೆ ಭಾವಪೂರ್ಣ ವಿದಾಯ ಹೇಳಿದರು.

ರತನ್ ಅವರ ಸಹೋದರ ಜಿಮ್ಮಿ ಟಾಟಾ, ಮಲತಾಯಿ ಸಿಮೋನ್ ಟಾಟಾ, ಮಲಸಹೋದರ ನೋಯಲ್ ಟಾಟಾ, ಟಾಟಾ ಗ್ರೂಪ್ ಅಧ್ಯಕ್ಷ ಎನ್. ಚಂದ್ರಶೇಖರನ್ ಅವರಲ್ಲದೆ ಉದ್ಯಮ ಸಮೂಹದ ಪ್ರಮುಖ ನೇತಾರರು ಅಂತಿಮ ನಮನ ಸಲ್ಲಿಸಿದರು.

ಮೂರು ದಿನ ಧಾರ್ಮಿಕ ವಿಧಿಗಳು: ಅಂತ್ಯಕ್ರಿಯೆ ನಂತರ ಮೂರು ದಿನ ಇತರ ವಿಧಿಗಳನ್ನು ನೆರವೇರಿಸಲಾಗುವುದು. ಇವುಗಳನ್ನು ದಕ್ಷಿಣ ಮುಂಬೈನ ಕೊಲಾಬಾದಲ್ಲಿರುವ ಟಾಟಾ ಅವರ ಬಂಗಲೆಯಲ್ಲಿ ನೆರವೇರಿಸಲಾಗುವುದು ಎಂದು ಚಿತಾಗಾರದಲ್ಲಿ ಉಪಸ್ಥಿತರಿದ್ದ ಧರ್ಮಗುರುವೊಬ್ಬರು ಹೇಳಿದರು.

ಅಂತಿಮ ದರ್ಶನ ವ್ಯವಸ್ಥೆ

ರತನ್ ಟಾಟಾ ಅವರ ಪಾರ್ಥಿವ ಶರೀರವನ್ನು ಬೆಳಿಗ್ಗೆ ಬ್ರೀಚ್ ಕ್ಯಾಂಡಿ ಆಸ್ಪತ್ರೆಯಿಂದ ಕೊಲಾಬಾದಲ್ಲಿನ ಅವರ ಬಂಗಲೆಗೆ ಕರೆತರಲಾಯಿತು. ನಂತರ, ಟಾಟಾ ಟ್ರಸ್ಟ್‌ನ ಜನರಲ್ ಮ್ಯಾನೇಜರ್ ಶಂತನು ನಾಯ್ಡು ಅವರು ಯೆಜ್ಡಿ ಬೈಕ್ ನಡೆಸುತ್ತಾ, ರತನ್ ಟಾಟಾ ಪಾರ್ಥಿವ ಶವವಿದ್ದ ಅಲಂಕೃತ ವಾಹನದ ಮೆರವಣಿಗೆ ಮುನ್ನಡೆಸಿದರು.

ವಾಹನ, ನರಿಮನ್ ಪಾಯಿಂಟ್‌ನಲ್ಲಿರುವ ರಾಷ್ಟ್ರೀಯ ಪ್ರದರ್ಶಕ ಕಲೆಗಳ ಕೇಂದ್ರ (ಎನ್‌ಸಿಪಿಎ) ತಲುಪಿದ ನಂತರ, ಅಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಭಾರಿ ಸಂಖ್ಯೆಯಲ್ಲಿ ಬಂದಿದ್ದ ಜನರು, ಅಂತಿಮ ನಮನ ಸಲ್ಲಿಸಿದರು.

'ಗೋವಾ' ನಮನ

ಬದುಕಿನುದ್ದಕ್ಕೂ ಟಾಟಾ ಅವರ ಒಡನಾಡಿಯಾಗಿದ್ದ, ಅವರ ಪ್ರೀತಿಯ ಸಾಕುನಾಯಿ 'ಗೋವಾ' ಶವಪೆಟ್ಟಿಗೆ ಬಳಿಯೇ ಇದ್ದು ಒಡೆಯನಿಗೆ ವಿದಾಯ ಹೇಳಿತು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura

BDA E-AUCTION East-South Corner Site No.902 for Sale at Further Extension of Anjanapura 11th Block Bannerghatta Rd 2645sqft Rs.14500/- Call:9448138640 9731125533

Banashankari

KANAKAPURA ROAD, Banashankari 6th Stage, 50x80 Site, And Concorde Napa Vally Villa For Sale: 9916817739

BDA-SITES Available @ Banashankari 6th Stage, Anjanapura All Measurement 20x30, 30x40, 40x60, 50x80 Call Rajesh: 9945610779

Gnanabharathi

"AVAILABLE 30X50 West facing Site Shanthi Vidhya Layout Attached Bangalore University, Good location. 9845500019/ 7019314962"

Mysore

2 ACRE, 20 gunta land Mysore 40 ft Road sale. Price 2300 per sft. 9380586105

Commerical

Mysore

MYSORE, 50X80 commercial site, 2nd phase, Vijayanagar 4th Stage. East facing and on NPS International school Road. Serious buyers Contact @ 919880413134, 6362718455.

House

Frazer Town

NEW HOUSE for Sale, 2 BHK 950 sqft, #19, Bourdillon Road, Frazer Town near Hajee Ismail Sait Masjid. 9845797687, 6362064085.

J P Nagar

J.P.NAGAR EXCELLENT location Second Phase South 45x60, Third Phase West 40x60 Old House sale Murali -9845232711

Flat

Banashankari

DUPLEX THREE and Half Bedroom Luxurious Penthouse Title Clear OC 3118 sqft Rs 2.53Cr Vegetarians 9845228595 9844021380

Rajajinagar

PURVA BLUBELLE Adjacent to Magadi road Metro station Rajajinagar Centre of the City 3 Bedroom & Exclusive 5Bedroom Flats +servant room with all luxurious Amenities, Only few units for Sale. Contact: 9844027560

Uttarahalli

3/4 BHK New Luxurious Flat Sale, A khatha, Ready-move, 75L/ 1cr. Carparking, Cauvery, Vaasthu. 9844394444, 9019110623.

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement, genuine Sellers Contact:9902038118, 9449060605

WANTED BDA & BBMP SITES, Anjanapura, JP.Nagar,Banashankari 6th Stage, Vishweshwaraiah Layout, Any Measurements Immediate Settlement Genuine Sellers Contact: 9972223222, 9606632777

Kanakapura Road

WANTED SITE 30x40, 40x60, Anjanapura BDA, Banashankri 6th Stage, BCCHS Layout, Investment Purpose, Agent Excuse. Call: 9663454878.

RENTAL PROPERTIES

Accommodation Available

Commercial

BENKI NAWAB STREET, S P ROAD 250SQ FT 2nd FLOOR , 3rd FLOOR COMMERCIAL SPACE AVAILABLE ON RENT CONTACT 9900503980 WHATS APP 9885532271

Flats

KASTURINAGAR FLAT, Gopalan Apts, Large Luxury 1 BHK, Monthly rent Rs 35000 plus Maintenance fee. No Car park. Not Negotiable. Contact @ 919880413134, 6362718455.

General

KORAMANGALA SADASHIVNAGAR, Manyatha, Judicial Layout, RMV, Hebbal 4 to 6 bedroom house for rent. 9380586105

Industrial And Factory

AVAILABLE OF Industrial Shed of 95000 sqft at Soukya Road, Whitefield. Contact:9341234288/ 9663224353/ 9845417487.

Villas/Bunglows

KASTURINAGAR VILLA Bungalow, Clean and modern design with 2 car park, 2 BHK GF, 2 BHK FF, 1+1/2 BHK SF + Den Pent house with Terrace access. Monthly rent Rs 35,000 per unit OR Full building at 1 Rs Lakh per month. Not Negotiable. Contact @ 919880413134, 6362718455.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology and Painting work. Call-9880916988

PUBLIC NOTICE

HASANATH EDUCATION SOCIETY
43, Dickenson Road, Bengaluru-560042
CORRIGENDUM
It has been brought to the notice of the General Public that the Advertisement Published in **Deccan Herald & Prajavani** Daily News Papers on Sunday, 29th September 2024 inviting Applications for **Teaching Posts in our college stands cancelled due to Technical Errors.**
Sd/- Hon. Secretary,
Hasanath Education Society,
Bengaluru

REQUIRED

Required Land 8000 to 15000 sqft anywhere in Bangalore City having minimum road width of 60 feet for PETROL BUNK - Rent / Company Lease for 20 years with rent between Rs.20/50. Building Tax will be paid by us.
Contact: 9845032519 / 99451 55688

BUSINESS

Business Offers

General

BUSINESS OPPORTUNITY to Earn 50k/m part/ Full time, in Property Development co. Interested call me 9663391355.

JOB OPPORTUNITIES

Hotel

WANTED IMMEDIATELY ADMIN MANAGER, RESTAURANT MANAGER, WAITERS, COOKS, COOLJOINT INCHARGE. Good Salary. UNCLE's KITCHEN: 99000-54468

Part-Time Jobs

BEST JOB Opportunity Looking for Retired, VRS, Homemakers, Age Minimum 40 Years Income 50K Monthly: 9886641282/ 6362220162

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PERSONAL

Change of Name

CHANGE OF NAME
I, **K.R. Lakshmi Sagar,** S/o Kantha Raju J, R/at # 1448/1, 4th Cross, 8th Main, BEML Layout 5th Stage, R R Nagar, Bengaluru-98, declare that my father name is wrongly mentioned in my educational documents as **KANTHA RAJ JAVARE GOWDA** instead of the correct name **KANTHA RAJU JAVARE GOWDA** vide affidavit dated 10.10.2024, before notary Karunakara, Bengaluru

CHANGE OF NAME
We, **Manojkumar G Tulasi & Shalini S,** R/at # 17/2,10th Cross, 13th Main, Gokula 1st Stage, 1st Phase, Mathikere, Bengaluru-54, have changed our minor son's name from **CHANDRAMOHANA M** to **RAMNAYAN M.** vide affidavit dated 09.10.2024, before notary, Ambika S, Bangalore. Henceforth he shall be known as **RAMNAYAN M** only

CHANGE OF NAME
I, **NAGESHA SINGRE GOWDA, NAGESH PATLU SINGRE GOWDA & NAGESH P.S.,** # 96, SFS 208, 2nd Main Road, Opp. Mother Dairy, Yelahanka, Bengaluru-64, declare that above names pertain to me only. Vide affidavit dated 08.10.2024 before Notary H. Sridhar Rao, Bengaluru. Henceforth I shall be called as **NAGESH P.S.** only

CHANGE OF NAME
I, **RENUKA C, RENUKA DEVI & RENUKA CHANNAPPA.,** # 96, SFS 208, 2nd Main Road, Opp. Mother Dairy, Yelahanka, Bengaluru-64, declare that above names pertain to me only. Vide affidavit dated 08.10.2024 before Notary H. Sridhar Rao, Bengaluru. Henceforth I shall be called as **RENUKA C.** only

ಲೋಕಾಯುಕ್ತ ಕಚೇರಿಯಲ್ಲಿ ಸತತ ಹತ್ತು ಗಂಟೆ ಪ್ರಶ್ನೆಗಳ ಸುರಿಮಳೆ

ಮಲ್ಲಿಕಾರ್ಜುನ, ದೇವರಾಜು ವಿಚಾರಣೆ

ಪ್ರಜಾವಾಣಿ ವಾರ್ತೆ

ಮೈಸೂರು: ಮುಡಾ ನಿವೇಶನ ಹಂಚಿಕೆ ಪ್ರಕರಣದ ಮೂರನೇ ಆರೋಪಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಮೈದ ಬಿ.ಎಂ. ಮಲ್ಲಿಕಾರ್ಜುನ ಸ್ವಾಮಿ ಹಾಗೂ ನಾಲ್ಕನೇ ಆರೋಪಿ ಜೆ. ದೇವರಾಜು ಅವರನ್ನು ಗುರುವಾರ ಇಲ್ಲಿನ ಲೋಕಾಯುಕ್ತ ಪೊಲೀಸ್ ಕಚೇರಿಯಲ್ಲಿ ತನಿಖಾಧಿಕಾರಿಗಳು ಸುದೀರ್ಘ ವಿಚಾರಣೆಗೆ ಒಳಪಡಿಸಿದರು.


ಬೆಳಿಗ್ಗೆ 11ರಿಂದ ರಾತ್ರಿ 8ರವರೆಗೆ ಜೆ. ದೇವರಾಜು ಅವರನ್ನು ಹಾಗೂ ಬೆಳಿಗ್ಗೆ 11.30ರಿಂದ ರಾತ್ರಿ 9ರವರೆಗೆ ಮಲ್ಲಿಕಾರ್ಜುನ ಸ್ವಾಮಿ ಅವರನ್ನು ಲೋಕಾಯುಕ್ತ ಎಸ್‌ಪಿ ಟಿ.ಜೆ. ಉದೇಶ್ ನೇತೃತ್ವದ ತಂಡವು ವಿಚಾರಣೆಗೆ ಒಳಪಡಿಸಿತು. ಮಧ್ಯಾಹ್ನ ಕಚೇರಿಯಲ್ಲೇ ಊಟ ತರಿಸಿಕೊಟ್ಟು, ಇಬ್ಬರಿಗೂ ಹಲವು ಪ್ರಶ್ನೆಗಳನ್ನು ಮುಂದಿಟ್ಟಿತು. ಅಧಿಕಾರಿಗಳ ನಿರಂತರ ಪ್ರಶ್ನೆಗಳಿಗೆ ಆರೋಪಿಗಳು ಬೆವರಿದರು. ರಾತ್ರಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡದೇ ಹೊರಟರು.

'ಜಮೀನನ್ನು ಖರೀದಿಸಿದ್ದು ಯಾವಾಗ? ಆಗ ಮುಡಾದಿಂದ ಬಡಾವಣೆ ಆಗಿದ್ದು ಗಮನಕ್ಕೆ ಬಂದಿರಲಿಲ್ಲವೇ? ಖರೀದಿಸುವಾಗ ಜಮೀನು ಕೃಷಿ ಭೂಮಿಯಾಗಿತ್ತೆ? ಅನ್ಯಕ್ರಾಂತ ಆದೇಶ ಆಗಿದ್ದು ಯಾವಾಗ? ಪಾರ್ವತಿ ಅವರಿಗೆ ದಾನಪತ್ರದ ರೂಪದಲ್ಲಿ ಕೊಟ್ಟಿದ್ದು ಯಾವಾಗ? ಆದಾಯದ ಮೂಲವೇನು?' ಎಂಬ ಕುರಿತು ಮಲ್ಲಿಕಾರ್ಜುನ ಸ್ವಾಮಿ ಅವರಿಂದ ಮಾಹಿತಿ ಪಡೆದ ತನಿಖಾ ತಂಡವು ನಂತರ ಲಿಖಿತ ಹೇಳಿಕೆ ದಾಖಲಿಸಿಕೊಂಡು ಸಹಿ ಪಡೆಯಿತು.

ಜಮೀನಿನ ಮಾಲೀಕ ಜೆ. ದೇವರಾಜು ಅವರ ವಿಚಾರಣೆ ನಡೆಸಿದ ತನಿಖಾಧಿಕಾರಿಗಳು, 1996ರಲ್ಲಿ ಜಮೀನಿನ ಡಿನೋಟಿಫೈಗೆ ಅರ್ಜಿ ಸಲ್ಲಿಸಿದ್ದಾಗಿನಿಂದ 2004ರಲ್ಲಿ ಮಲ್ಲಿಕಾರ್ಜುನ ಸ್ವಾಮಿ ಅವರಿಗೆ ಜಮೀನು ಮಾರಿದ್ದರವರೆಗೆ ಪ್ರತಿ ಮಾಹಿತಿಯನ್ನೂ ಪಡೆದರು. 'ಡಿನೋಟಿಫೈಗೆ ಅರ್ಜಿ ಸಲ್ಲಿಸಿದ್ದು ಯಾರು? ಜಮೀನು ನಿಮ್ಮ ಹೆಸರಿನಲ್ಲೇ ಇತ್ತೆ? ಮಾರಾಟಕ್ಕೆ ನಿಮ್ಮ ಸಹೋದರರ ಕುಟುಂಬ ಸದಸ್ಯರ ಒಪ್ಪಿಗೆ ಇತ್ತೆ? ಎಷ್ಟು ಮೊತ್ತಕ್ಕೆ ಕ್ರಯ ನಡೆದಿತ್ತು?' ಎಂಬ ಮಾಹಿತಿ ಪಡೆದು ಹೇಳಿಕೆ ದಾಖಲಿಸಿಕೊಂಡರು.

ಅಗತ್ಯ ಇದ್ದಲ್ಲಿ ಮತ್ತೊಮ್ಮೆ ವಿಚಾರಣೆಗೆ ಕರೆಯಲಾಗುವುದು ಎಂದು ಇಬ್ಬರಿಗೂ ಅಧಿಕಾರಿಗಳು ಹೇಳಿದರು ಎನ್ನಲಾಗಿದೆ.

ಪ್ರಕರಣದ ಮೊದಲ ಇಬ್ಬರು ಆರೋಪಿಗಳಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಪತ್ನಿ ಬಿ.ಎಂ. ಪಾರ್ವತಿ ಅವರಿಗೂ ಸದ್ಯದಲ್ಲೇ ನೋಟಿಸ್ ನೀಡಿ ವಿಚಾರಣೆಗೆ ಕರೆಯುವ ಸಾಧ್ಯತೆಗಳಿವೆ.

ಗುರುವಾರ ವಿಚಾರಣೆಗೆ ಬಂದ ಸಿದ್ದರಾಮಯ್ಯ ಭಾಮೈದ ಮಲ್ಲಿಕಾರ್ಜುನ ಸ್ವಾಮಿ (ಎಡಚಿತ್ರ), ದೇವರಾಜು

ಮಾಹಿತಿ ಕೋರಿದ ಗಂಗರಾಜು

ಮುಡಾ ಕಚೇರಿ ಮೇಲೆ ಲೋಕಾಯುಕ್ತ ತಂಡವು ಜೂನ್‌ನಲ್ಲಿ ನಡೆಸಲು ಉದ್ದೇಶಿಸಿದ್ದ ದಾಳಿಗೆ ಸಂಬಂಧಿಸಿದಂತೆ ದಾಖಲೆಗಳ ಮಾಹಿತಿ ಕೋರಿ ಆರ್‌ಟಿಐ ಕಾರ್ಯಕರ್ತ ಗಂಗರಾಜು ಬೆಂಗಳೂರಿನ ಲೋಕಾಯುಕ್ತ ಕಚೇರಿಗೆ ಅರ್ಜಿ ಸಲ್ಲಿಸಿದ್ದಾರೆ.

'ಯಾವ ದಿನ ದಾಳಿ ನಡೆಸಲು ಉದ್ದೇಶಿಸಲಾಗಿತ್ತು. ಯಾವ ದಾಖಲೆಗಳು ದೊರೆತಿದ್ದವು. ಯಾರ ಹೆಸರಿನಲ್ಲಿ ಸರ್ಚ್ ವಾರಂಟ್ ನೀಡಲಾಗಿತ್ತು? ಅದನ್ನು ಹಿಂಪಡೆದಿದ್ದು ಏಕೆ? ಎಂಬ ಮಾಹಿತಿಯನ್ನು ಕೋರಿ ಅವರು ಅಕ್ಟೋಬರ್ 8ರಂದು ಮಾಹಿತಿ ಹಕ್ಕಿನಡಿ ಅರ್ಜಿ ಸಲ್ಲಿಸಿದ್ದಾರೆ.

ಈ ಸಂಬಂಧ ಪೂರಕ ಮಾಹಿತಿ ಪಡೆಯಲು ಗಂಗರಾಜು ಗುರುವಾರ ಮೈಸೂರು ಲೋಕಾಯುಕ್ತ ಎಸ್.ಪಿ. ಕಚೇರಿಗೆ ಭೇಟಿ ನೀಡಿದರು. 'ಸಿದ್ದರಾಮಯ್ಯ ವಿರುದ್ಧದ ಪ್ರಕರಣದಲ್ಲಿ ಪೊಲೀಸರು ಮಲ್ಲಿಕಾರ್ಜುನ ಸ್ವಾಮಿ ಹಾಗೂ ದೇವರಾಜು ಅವರನ್ನು ವಶಕ್ಕೆ ಪಡೆಯಬೇಕು' ಎಂದು ಅವರು ಅಧಿಕಾರಿಗಳನ್ನು ಆಗ್ರಹಿಸಿದರು.

ಗೃಹಲಕ್ಷ್ಮಿ ಹಣದಿಂದ ದೇವಿಗೆ ಬೆಳ್ಳಿ ಕಿರೀಟ

ಆಲಮೇಲ (ವಿಜಯಪುರ ಜಿಲ್ಲೆ): ತಾಲ್ಲೂಕಿನ ಹೂವಿನಹಳ್ಳಿ ಗ್ರಾಮದ ಭಾಗಮ್ಮ ಗುರುಶಾಂತಗೌಡ ಬಿರಾದಾರ ದಂಪತಿ ತಮಗೆ ಬಂದ 12 ತಿಂಗಳ ಗೃಹಲಕ್ಷ್ಮಿ ಹಣದಿಂದ ನವರಾತ್ರಿ ನಿಮಿತ್ತ ಗ್ರಾಮದಲ್ಲಿ ಪ್ರತಿಷ್ಠಾಪಿಸಿದ ದೇವಿ ಮೂರ್ತಿಗೆ 250 ಗ್ರಾಂ ತೂಕದ ಬೆಳ್ಳಿ ಕಿರೀಟ ಮಾಡಿಸಿದ್ದಾರೆ. ಅವರನ್ನು ಶಾಸಕ ಅಶೋಕ ಮನಗೂಳಿ ಸನ್ಮಾನಿಸಿದರು.

ಅಶೋಕ ಮನಗೂಳಿ ಮಾತನಾಡಿ, 'ಕಾಂಗ್ರೆಸ್ ಪಕ್ಷವು ಚುನಾವಣೆಯಲ್ಲಿ ರಾಜ್ಯದ ಜನರಿಗೆ ಕೊಟ್ಟ ಮಾತನ್ನು ಪಾಲಿಸಿದೆ. ಪಂಚ ಗ್ಯಾರಂಟಿ ಯೋಜನೆಯ ಲಾಭವನ್ನು ರಾಜ್ಯದ 1.60 ಕೋಟಿ ಫಲಾನುಭವಿಗಳು ಪಡೆದಿದ್ದಾರೆ' ಎಂದರು.

'ಬಿಜೆಪಿಗೆ ಟಿಕೆಟ್ ಒಪ್ಪಂದವಾಗಿಲ್ಲ'

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ಉಪ ಚುನಾವಣೆಯಲ್ಲಿ ಚನ್ನಪಟ್ಟಣ ಕ್ಷೇತ್ರವನ್ನು ಬಿಜೆಪಿಗೆ ಬಿಟ್ಟು ಕೊಡುವ ಕುರಿತು ಈ ಕ್ಷಣದವರೆಗೆ ಯಾವುದೇ ಒಪ್ಪಂದ ಆಗಿಲ್ಲ ಎಂದು ಜೆಡಿಎಸ್ ಅಧ್ಯಕ್ಷರೂ ಆಗಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ.

'ಈ ಕ್ಷೇತ್ರ ಮೊದಲಿನಿಂದಲೂ ಜೆಡಿಎಸ್ ಭದ್ರಕೋಟೆ. ಇತ್ತೀಚಿನ ಎರಡು ಚುನಾವಣೆಗಳಲ್ಲಿ ನಾವು ಗೆದ್ದಿದ್ದೇವೆ. ಹಾಗಾಗಿ, ಕಾರ್ಯಕರ್ತರ ಒಮ್ಮತವಿಲ್ಲದೆ ಟಿಕೆಟ್ ಬಗ್ಗೆ ನಾನು ಏಕಪಕ್ಷೀಯವಾಗಿ ನಿರ್ಧಾರ ಮಾಡಲು ಸಾಧ್ಯವಿಲ್ಲ. ನಿಖಿಲ್ ಸ್ಪರ್ಧೆ ಬಗ್ಗೆಯೂ ತೀರ್ಮಾನಿಸಿಲ್ಲ' ಎಂದು ತಿಳಿಸಿದರು.

ಚನ್ನಪಟ್ಟಣದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಿಜೆಪಿ ಹಿತದೃಷ್ಟಿಯಿಂದ ಸಿ.ಪಿ. ಯೋಗೇಶ್ವರ್ ಅವರಿಗೆ ಟಿಕೆಟ್ ಕೊಡುವಂತೆ ಸ್ಥಳೀಯ ಮುಖಂಡರು ಒತ್ತಾಯಿಸುತ್ತಿದ್ದಾರೆ. ಅದನ್ನು ನಾನು ತಪ್ಪು ಎನ್ನಲಾರೆ. ಆದರೆ, ಈ ಬಗ್ಗೆ ನಾನೂ ತಕ್ಷಣ ತೀರ್ಮಾನಿಸಲಾಗದು' ಎಂದರು.

'ಟಿಕೆಟ್ ಕುರಿತು ಯೋಗೇಶ್ವರ್ ಅವರು ನನ್ನನ್ನು ಒಮ್ಮೆ ಭೇಟಿ ಮಾಡಿದ್ದರು. ಆಗ ನಮ್ಮ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ. ಮುಂದೆ ಟಿಕೆಟ್ ಬಗ್ಗೆ ತೀರ್ಮಾನಿಸೋಣ ಎಂದು ಸಲಹೆ ನೀಡಿದ್ದೆ. ಅನಂತರ ಮತ್ತೆ ಭೇಟಿ ಮಾಡಿಲ್ಲ. ಇದಾದ ಬಳಿಕ ಅವರು ಹೇಗೆಲ್ಲಾ ನಡೆದುಕೊಂಡಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ' ಎಂದು ಹೇಳಿದರು.

'ಲೋಕಸಭಾ ಚುನಾವಣೆಗೆ ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಯೋಗೇಶ್ವರ್ ಅವರನ್ನೇ ಮೊದಲು ಅಭ್ಯರ್ಥಿಯಾಗಿ ಆಯ್ಕೆ ಮಾಡಿದ್ದೆವು. ಎರಡು ಪಕ್ಷ ಒಂದಾದರೆ ಗೆಲುವು ಸುಲಭ. ನೀವೇ ಚುನಾವಣೆಗೆ ಸ್ಪರ್ಧಿಸಿ ಎಂದು ಏಳೆಂಟು ತಿಂಗಳ ಹಿಂದೆಯೇ ನಾನು ಅವರಿಗೆ ಹೇಳಿದ್ದೆ. ಆದರೆ, ಅಮಿತ್ ಶಾ ಕರೆ ಮಾಡಿ ಡಾ. ಸಿ.ಎನ್. ಮಂಜುನಾಥ್ ಅವರನ್ನು ಅಭ್ಯರ್ಥಿ ಮಾಡಿ ಎಂದರು. ಹಾಗಾಗಿ, ಮಂಜುನಾಥ್ ಅಭ್ಯರ್ಥಿಯಾದರು' ಎಂದು ತಿಳಿಸಿದರು.

'ಬಿಜೆಪಿ -ಜೆಡಿಎಸ್ ಮೈತ್ರಿಗೆ ನಾನೇ ಕಾರಣ' ಎಂಬ ಯೋಗೇಶ್ವರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಮೈತ್ರಿಗೆ ಯಾರು ಮೂಲ ಕಾರಣ ಎಂಬುದನ್ನು ಬೀದಿಯಲ್ಲಿ ಚರ್ಚಿಸುವುದಿಲ್ಲ' ಎಂದು ಹೇಳಿದರು.

ಬಿತ್ತನೆ ಬೀಜ: ದರದಲ್ಲಿ ಏರಿಳಿತ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಹಿಂಗಾರು ಹಂಗಾಮಿನ ಬಿತ್ತನೆ ಬೀಜಗಳಾದ ರಾಗಿ, ಗೋಧಿ ಮತ್ತು ಕಡಲೆ ದರ ತುಸು ಹೆಚ್ಚಾಗಿದೆ. ಜೋಳ, ಶೇಂಗಾ ಮತ್ತು ಕುಸುಬೆ ಬೀಜಗಳ ದರ ಕಡಿಮೆಯಾಗಿದೆ. ಉತ್ತರ ಕರ್ನಾಟಕ ಭಾಗದ ರೈತರಿಗೆ ತುಸು ಅನುಕೂಲವಾಗಿದ್ದರೆ, ದಕ್ಷಿಣ ಕರ್ನಾಟಕ ಭಾಗದವರಿಗೆ ದರದ ಬಿಸಿ ತಟ್ಟಿದೆ.

ಕಳೆದ ವರ್ಷ ರಾಜ್ಯದ ಎಲ್ಲೆಡೆ ಬರಗಾಲ ಆವರಿಸಿದ್ದರಿಂದ ಬಿತ್ತನೆ ಬೀಜಗಳ ಕೊರತೆ ಉಂಟಾಗಿದೆ. ಕರ್ನಾಟಕ ರಾಜ್ಯ ಬೀಜ ನಿಗಮ, ರಾಷ್ಟ್ರೀಯ ಬೀಜ ನಿಗಮ ಹಾಗೂ ಕರ್ನಾಟಕ ರಾಜ್ಯ ಎಣ್ಣೆಬೀಜ ಬೆಳೆಗಾರರ ಮಹಾಮಂಡಳಿಯಿಂದ ಬಿತ್ತನೆ ಬೀಜಗಳನ್ನು ಬಿತ್ತಲು ರೈತರಿಗೆ ನೀಡಲಾಗಿತ್ತು. ಈಗ ರೈತರಿಂದ ಖರೀದಿಸಲಾಗಿದೆ.

'ನಿಗಮ– ಮಂಡಳಿಗಳು ಕೂಡ ರೈತರಿಂದ ಶೇ 23ರಷ್ಟು ಹೆಚ್ಚು ದರ ನೀಡಿ ಖರೀದಿಸಿವೆ. ಅಂಥ ಬೀಜಗಳಿಗೆ ಶೇ 9 ರಿಂದ ಶೇ 13ರಷ್ಟು ದರ ಹೆಚ್ಚಾಗಿದೆ. ರೈತರಿಗೆ ಹೆಚ್ಚು ಲಾಭವಾಗಿದೆ' ಎಂದು ಕೃಷಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಹಿಂಗಾರು ಮಳೆ ಕೂಡ ಉತ್ತಮವಾಗಿ ಸುರಿದಿದ್ದರಿಂದ ರೈತರು ಹೊಲಗಳನ್ನು ಹದ ಮಾಡುವಲ್ಲಿ ನಿರತರಾಗಿದ್ದಾರೆ. ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ನೀಡಲು ಕೃಷಿ ಇಲಾಖೆ ಸಿದ್ಧತೆ ನಡೆಸಿದೆ.

'ಕಡಲೆ ಹಾಗೂ ಗೋಧಿ ಬಿತ್ತನೆ ಬೀಜಗಳು ದುಬಾರಿಯಾಗಿವೆ. ಅತಿವೃಷ್ಟಿಯ ಕಾರಣ ನಮ್ಮ ಸೋಯಾಬಿನ್ ಬೆಳೆ ಹಾಳಾಗಿದೆ. ಇದರ ಮಧ್ಯೆಯೇ ಬೀಜಗಳ ದರ ಏರಿಕೆ ಸಂಕಷ್ಟ ತಂದಿದೆ' ಎಂದು ಸವದತ್ತಿ ತಾಲ್ಲೂಕಿನ ಚಿಕ್ಕುಂಬಿ ಗ್ರಾಮದ ರೈತ ಮೊಹಮ್ಮದ್ ಅಲಿ ದೊಡ್ಡಮನಿ ತಿಳಿಸಿದರು.



ದೀಪಾಲಂಕಾರ ದಸರಾ ಅಂಗವಾಗಿ ಮಂಗಳೂರಿನ ಕುದ್ರೋಳಿ ಗೋಕರ್ಣನಾಥ ದೇವಸ್ಥಾನ ಗುರುವಾರ ರಾತ್ರಿ ವಿದ್ಯುತ್ ದೀಪಗಳಿಂದ ಕಂಗೊಳಿಸಿತು ಪ್ರಜಾವಾಣಿ ಚಿತ್ರ :ಫಕ್ರುದ್ದೀನ್ ಎಚ್.

ನಾಳೆ ಜಂಬೂಸವಾರಿ

ಒಂದನೇ ಪುಟದಿಂದ...

ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಚಿವರು ಪಾಲ್ಗೊಳ್ಳಲಿದ್ದಾರೆ. ರಾಜವಂಶಸ್ಥರೇ ಸಂಸದರಾಗಿರುವುದರಿಂದ, ಇದೇ ಮೊದಲಿಗೆ ಸಂಸದರೂ ವೇದಿಕೆಯಲ್ಲೇ ಪಾಲ್ಗೊಂಡಂತಾಗಲಿದೆ.

ಅರಮನೆ ಆವರಣದಲ್ಲಿ ಅತಿ ಗಣ್ಯರು, ಗಣ್ಯರು, ಗೋಲ್ಡ್ ಕಾರ್ಡ್ ಹಾಗೂ ಟಿಕೆಟ್ ಹೊಂದಿರುವವರಿಗೆ ಆಸನಗಳ ವ್ಯವಸ್ಥೆ ಮಾಡಲಾಗಿದೆ. ಮೆರವಣಿಗೆಯು ಐದು ಕಿ.ಮೀ.ವರೆಗೆ ಸಾಗಿ ಬನ್ನಿಮಂಟಪ ತಲುಪಲಿದೆ. ಸಂಜೆ 7ಕ್ಕೆ ಪಂಜಿನ ಕವಾಯತು ನಡೆಯಲಿದ್ದು, ರಾಜ್ಯಪಾಲ ಥಾವರಚಂದ್ ಗೆಹಲೋತ್ ಗೌರವ ವಂದನೆ ಸ್ವೀಕರಿಸುವರು. ಡ್ರೋನ್ ಶೋ ಈ ಬಾರಿಯ ವಿಶೇಷ. ಈ ಕಾರ್ಯಕ್ರಮದೊಂದಿಗೆ ನಾಡಹಬ್ಬಕ್ಕೆ ತೆರೆ ಬೀಳಲಿದೆ.

ಅರಮನೆಯಲ್ಲಿ ಖಾಸಗಿ ದರ್ಬಾರ್ ನಡೆಸುತ್ತಿರುವ ರಾಜವಂಶಸ್ಥ ಯದುವೀರ್ ಶುಕ್ರವಾರ ಆಯುಧಪೂಜೆ ಹಾಗೂ ಶನಿವಾರ ವಿಜಯದಶಮಿ ಮೆರವಣಿಗೆ ನಡೆಸುವರು. ನಂತರ, ಸರ್ಕಾರಿ ದಸರಾ ಮೆರವಣಿಗೆ ಆರಂಭವಾಗಲಿದೆ.



ಮೈಸೂರು ಅರಮನೆ ಆವರಣದಲ್ಲಿ ಸಿದ್ಧತೆಗಳು ಚುರುಕುಗೊಂಡಿವೆ

> **ಶನಿವಾರ ನಡೆಯಲಿರುವ ಜಂಬೂಸವಾರಿ ಮೆರವಣಿಗೆಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಎಲ್ಲವನ್ನೂ ಸಂಪ್ರದಾಯದಂತೆ ನಡೆಸಲಾಗುವುದು**
> **ಜಿ.ಲಕ್ಷ್ಮೀಕಾಂತ ರೆಡ್ಡಿ**, ಜಿಲ್ಲಾಧಿಕಾರಿ, ಮೈಸೂರು

ದಲಿತ ಬಾಲಕರ ತಲೆಬೋಳಿಸಿ ಮೆರವಣಿಗೆ

ಒಂದನೇ ಪುಟದಿಂದ...

ಗ್ರಾಮದಲ್ಲಿ ಕೋಳಿ ಫಾರಂ ನಡೆಸುತ್ತಿದ್ದ ನಜೀಂ ಮತ್ತು ಖಾಸಿಂ ಅವರು, ಕೋಳಿ ಫಾರಂ ಕೆಲಸಕ್ಕೆ ಬರಲಿಲ್ಲವೆಂದು ಬಾಲಕರ ಮೇಲೆ ಗೋಧಿ ಕಳವು ಆರೋಪ ಹೊರಿಸಿ, ಚಿತ್ರಹಿಂಸೆ ನೀಡಿದ್ದಾರೆ ಎಂದು ಸಂತ್ರಸ್ತ ಬಾಲಕರ ಕುಟುಂಬಗಳು ದೂರಿವೆ.

ಆರೋಪಿಗಳು ಬಾಲಕರಿಗೆ ಜೀವ ಬೆದರಿಕೆ ಹಾಕಿದ್ದಾರೆ. ಜಾತಿ ನಿಂದನೆ ಕೂಡ ಮಾಡಿದ್ದಾರೆ. ಅಲ್ಲದೆ, ವಿದ್ಯುತ್ ಕೇಬಲ್‌ಗಳಿಂದ ಕತ್ತು ಹಿಸುಕಲು ಪ್ರಯತ್ನಿಸಿದ್ದಾರೆ. ಬಾಲಕರಿಗೆ ನೀಡಿದ ಚಿತ್ರಹಿಂಸೆಯನ್ನು ಆರೋಪಿಗಳು ತಮ್ಮ ಮೊಬೈಲ್‌ಗಳಲ್ಲಿ ಚಿತ್ರೀಕರಿಸಿಕೊಂಡಿದ್ದಾರೆ ಎಂದು ಗ್ರಾಮಸ್ಥರು ಹೇಳಿದ್ದಾರೆ.

ಮುನ್ನೆಚ್ಚರಿಕಾ ಕ್ರಮವಾಗಿ ಗ್ರಾಮದಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ.

ದಲಿತ ಸಿ.ಎಂ– ಹೈಕಮಾಂಡ್‌ಗೆ ಬಿಟ್ಟಿದ್ದು: ಸಚಿವ ಮುನಿಯಪ್ಪ

ಪ್ರಜಾವಾಣಿ ವಾರ್ತೆ

ಕೋಲಾರ: ಮುಖ್ಯಮಂತ್ರಿ ಸ್ಥಾನದಿಂದ ಇಳಿಯುವಂತಹ ಪರಿಸ್ಥಿತಿ ಸಿದ್ದರಾಮಯ್ಯ ಅವರಿಗೆ ಎಂದಿಗೂ ಬರುವುದಿಲ್ಲ. ಒಂದು ವೇಳೆ ಬಂದರೆ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳಲಿದೆ. ದಲಿತರೊಬ್ಬರನ್ನು ಮುಖ್ಯಮಂತ್ರಿ ಮಾಡುವ ವಿಚಾರವನ್ನೂ ಹೈಕಮಾಂಡ್ ವಿವೇಚನೆಗೆ ಬಿಡೋಣ ಎಂದುಆಹಾರ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.



ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ 30 ವರ್ಷಗಳಿಂದ ಅಂದರೆ ಮಲ್ಲಿಕಾರ್ಜುನ ಖರ್ಗೆ ಅವರ ಕಾಲದಿಂದಲೂ ದಲಿತ ಮುಖ್ಯಮಂತ್ರಿ ಮಾತು ಕೇಳಿ ಬರುತ್ತಲೇ ಇದೆ. ಆದರೆ, ದಲಿತ ಮುಖ್ಯಮಂತ್ರಿ ಮಾಡಿದವರು ಯಾರೂ ಇಲ್ಲ ಎಂದರು.

'ಮಲ್ಲಿಕಾರ್ಜುನ ಖರ್ಗೆ ಅವರನ್ನು ಬಿಟ್ಟರೆ ಈಗ ರಾಜ್ಯದಲ್ಲಿ ಸೀನಿಯರ್ ಲೀಡರ್ ಯಾರು. ನಾನು ಮುಖ್ಯಮಂತ್ರಿ ಆಕಾಂಕ್ಷಿಯಲ್ಲ. ಸದ್ಯ ದಲಿತ ಮುಖ್ಯಮಂತ್ರಿ ವಿಚಾರದ ಬಗ್ಗೆ ಯಾರೂ ಮಾತನಾಡಬಾರದು ಎಂದು ಹೈಕಮಾಂಡ್ ಸೂಚಿಸಿದೆ. ಹೀಗಾಗಿ, ನಾನೂ ಮಾತನಾಡುವುದಿಲ್ಲ. ಹೈಕಮಾಂಡ್ ತೀರ್ಮಾನಕ್ಕೆ ಬದ್ಧನಾಗಿರುತ್ತೇನೆ' ಎಂದರು.

'ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಎಲ್ಲಾ ಶಾಸಕರು, ಸಚಿವರು ಒಗ್ಗಟ್ಟಾಗಿ ನಿಂತು ಅವರ ಕೈ ಬಲಪಡಿಸುವೆವು. ಜೊತೆಗೆ ಬಿಜೆಪಿಯ ಹುನ್ನಾರಗಳಿಗೆ ಪಾಠ ಹೇಳುವ ಶಕ್ತಿಯನ್ನೂ ನೀಡುತ್ತೇವೆ' ಎಂದರು.

ಬಾಗಲಕೋಟೆ ಜಿಲ್ಲೆಯಲ್ಲಿ ಕಾರ್ಯಕ್ರಮ ಆಯೋಜನೆಗೆ ಹಿನ್ನಡೆ

ಟ್ರಸ್ಟ್, ಅಕಾಡೆಮಿ: ಖರ್ಚಾಗದ ಅನುದಾನ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಗೆ ಅನುದಾನದ ಕೊರತೆ ಕಾಡುತ್ತಿದೆ. ಆದರೆ, ಜಿಲ್ಲೆಯ ಪ್ರತಿಷ್ಠಾನ, ಟ್ರಸ್ಟ್ ಮತ್ತು ಸಮಿತಿಗಳಲ್ಲಿ ದೊಡ್ಡಮೊತ್ತದ ಹಣ ನಾಲ್ಕಾರು ವರ್ಷಗಳಿಂದ ಬಳಕೆಯಾಗದೆ ಹಾಗೆಯೇ ಉಳಿದಿದೆ.

ಕವಿ ಚಕ್ರವರ್ತಿ ರನ್ನನ ಹೆಸರಿನಲ್ಲಿ ಪ್ರತಿಷ್ಠಾನ, ನಾಟಕಕಾರ ಪಿ.ಬಿ. ಧುತ್ತರಗಿ ಅವರ ಹೆಸರಿನಲ್ಲಿ ಟ್ರಸ್ಟ್ ಮತ್ತು ಚಾಲುಕ್ಯ ಉತ್ಸವಕ್ಕಾಗಿ ಸಮಿತಿ ರಚಿಸಲಾಗಿದೆ. ಆದರೆ, ಯಾವುದೇ ಚಟುವಟಿಕೆಗಳು ನಡೆದಿಲ್ಲ.

ರನ್ನ ಪ್ರತಿಷ್ಠಾನ ಮತ್ತು ಪಿ.ಬಿ. ಧುತ್ತರಗಿ ಟ್ರಸ್ಟ್‌ಗೆ ಪ್ರತಿ ವರ್ಷ ವಾರ್ಷಿಕ ₹8 ಲಕ್ಷ ಅನುದಾನವಿದೆ.

> **ಉತ್ತರ ಭಾರತದ ಗಂಗಾರತಿ ಮಾದರಿಯಲ್ಲಿ ಇಲ್ಲಿ ಆರತಿ ನಡೆಯುತ್ತದೆ. ಆದರೆ, ಇಲ್ಲಿನ ಸಂಸ್ಕೃತಿ ಬಿಂಬಿಸುವ ಚಾಲುಕ್ಯ ಉತ್ಸವ ನಡೆಯದಿರುವುದು ದುರ್ದೈವ**
> **ಇಷ್ಟಲಿಂಗ ಸಿರ್ಸಿ,** ಸಾಹಿತಿ

> **ಬಯಲಾಟ ಅಕಾಡೆಮಿಗೆ ಅಧ್ಯಕ್ಷರ ನೇಮಕವಾಗಿದೆ. ಇನ್ನೆರಡು ವರ್ಷಗಳ ಪ್ರಶಸ್ತಿಗೆ ಆಯ್ಕೆ ಮಾಡಿ, ಎಲ್ಲರಿಗೂ ಒಂದೇ ಬಾರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು**
> **ಕರ್ಣಕುಮಾರ ಜೈನಾಪುರ,** ಸಹಾಯಕ ನಿರ್ದೇಶಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪ್ರತಿಷ್ಠಾನದ ಖಾತೆಯಲ್ಲಿ ₹97 ಲಕ್ಷ, ಟ್ರಸ್ಟ್ ಖಾತೆಯಲ್ಲಿ ₹65 ಲಕ್ಷ, ಚಾಲುಕ್ಯ ಉತ್ಸವ ಸಮಿತಿಯ ಖಾತೆಯಲ್ಲಿ ₹2.42 ಕೋಟಿ ಹಣವಿದೆ. ಕಾರ್ಯಕ್ರಮ ಆಯೋಜಿಸದ ಕಾರಣ ಪ್ರತಿ ವರ್ಷದ ಅನುದಾನ, ಬಡ್ಡಿಯ ಹಣ ಜಮಾ ಆಗುತ್ತಿದೆ.

ಚಟುವಟಿಕೆಗಳೇ ಇಲ್ಲ: ಕವಿ ಚಕ್ರವರ್ತಿ ರನ್ನ ಪ್ರತಿಷ್ಠಾನ ಮತ್ತು ನಾಟಕಕಾರ ಪಿ.ಬಿ. ಧುತ್ತರಗಿ ಟ್ರಸ್ಟ್‌ಗೆ ರಾಜ್ಯ ಸರ್ಕಾರವು ಎರಡು ವರ್ಷಗಳಿಂದ ಅಧ್ಯಕ್ಷ, ಸದಸ್ಯರ ನೇಮಕಾತಿ ಮಾಡಿಲ್ಲ.

'ಈ ಹಿಂದೆ ಧುತ್ತರಗಿ ಟ್ರಸ್ಟ್‌ನಿಂದ ನಾಟಕೋತ್ಸವ, ವಿಚಾರ ಸಂಕಿರಣದಂತಹ ಕಾರ್ಯಕ್ರಮ ಆಯೋಜಿಸಲಾಗುತ್ತಿತ್ತು. ಆಗ ಸದಸ್ಯರಾಗಿದ್ದವರು, ಕಾರ್ಯಕ್ರಮ ಆಯೋಜನೆ ಜವಾಬ್ದಾರಿ ಮತ್ತು ಅನುದಾನ ತಮಗೇ ನೀಡಲು ಪಟ್ಟು ಹಿಡಿಯುತ್ತಿದ್ದರು. ಸದ್ಯಕ್ಕೆ ಅಧ್ಯಕ್ಷರು, ಸದಸ್ಯರ ನೇಮಕಾತಿಯಾಗದ ಕಾರಣ ಅನುದಾನ ಖರ್ಚು ಮಾಡಲು ಸಾಧ್ಯವಾಗಿಲ್ಲ' ಎಂದು ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರದಾನವಾಗದ ಪ್ರಶಸ್ತಿ: ಬಯಲಾಟ ಅಕಾಡೆಮಿಯ ಕೇಂದ್ರ ಕಚೇರಿ ಬಾಗಲಕೋಟೆಯಲ್ಲಿದೆ. ಹಿಂದೆ ಅಧ್ಯಕ್ಷರಾಗಿದ್ದ ಅಜಿತ್ ಬಸಾಪುರ 2021, 2022ನೇ ಸಾಲಿನ ಗೌರವ (₹50 ಸಾವಿರ ನಗದು), ವಾರ್ಷಿಕ (₹25 ಸಾವಿರ ನಗದು) ಪ್ರಶಸ್ತಿ ಪ್ರಕಟಿಸಿ ಎರಡು ವರ್ಷಗಳಾಗಿವೆ. ಇದುವರೆಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಆಯೋಜಿಸಿಲ್ಲ.

'ಅಕಾಡೆಮಿ ಅಧ್ಯಕ್ಷರಾಗಿ ದುರ್ಗದಾಸ್ ಹಾಗೂ ಸದಸ್ಯರ ನೇಮಕವಾಗಿದೆ. ಆದರೂ, ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜನೆ ನೆರವೇರಿಲ್ಲ. 2023 ಮತ್ತು 2024ನೇ ಸಾಲಿನ ಪ್ರಶಸ್ತಿಗಳಿಗೂ ಸಾಧಕರನ್ನು ಆಯ್ಕೆಯಾಗಬೇಕಿದೆ. ಅಕಾಡೆಮಿಯಿಂದ ಬಯಲಾಟ ಕುರಿತು ಚಟುವಟಿಕೆಗಳೂ ಕುಂಠಿತಗೊಂಡಿವೆ' ಎಂದು ಮೂಲಗಳು ತಿಳಿಸಿವೆ.

9 ವರ್ಷಗಳಿಂದ ನಡೆದಿಲ್ಲ ಉತ್ಸವ

ಬೆಳಗಾವಿಯಲ್ಲಿ ಕಿತ್ತೂರು ಉತ್ಸವ, ಬಳ್ಳಾರಿಯಲ್ಲಿ ಹಂಪಿ ಉತ್ಸವ ಸೇರಿ ವಿವಿಧ ಜಿಲ್ಲೆಗಳಲ್ಲಿ ಉತ್ಸವಗಳು ನಡೆದಿವೆ. ಆದರೆ, ಬಾಗಲಕೋಟೆ ಜಿಲ್ಲೆಯಲ್ಲಿ ಚಾಲುಕ್ಯ ಉತ್ಸವ 9 ವರ್ಷಗಳಿಂದ ನಡೆದಿಲ್ಲ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಬೇಡಿಕೆ ಈಡೇರಿಸಲು ಸಮ್ಮತಿ, ಗ್ರಾಮೀಣಾಭಿವೃದ್ಧಿ ಇಲಾಖೆ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿ

ಗ್ರಾ. ಪಂ. ನೌಕರರ ಮುಷ್ಕರ ಅಂತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಹುದ್ದೆಗಳನ್ನು 'ಬಿ' ಗುಂಪಿನ ಹುದ್ದೆಗಳಾಗಿ ಉನ್ನತೀಕರಿಸಲು ಗ್ರಾಮೀಣಾಭಿವೃದ್ಧಿ ಇಲಾಖೆ ಆಯುಕ್ತರ ಅಧ್ಯಕ್ಷತೆಯಲ್ಲಿ ನೌಕರರ ಸಂಘಟನೆಗಳ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿ ರಚಿಸಲಾಗುವುದು ಸೇರಿದಂತೆ ಹಲವು ಬೇಡಿಕೆ ಈಡೇರಿಸಲು ಸಚಿವ ಪ್ರಿಯಾಂಕ್ ಖರ್ಗೆ ಸಮ್ಮತಿಸಿದರು.

ರಾಜ್ಯ ಸರ್ಕಾರಿ ನೌಕರರ ಸಂಘ, ಗ್ರಾಮೀಣಾಭಿವೃದ್ಧಿ ಇಲಾಖೆಯ ವಿವಿಧ ಸಂಘಟನೆಗಳ ಪ್ರಮುಖರ ಜತೆ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಇಲಾಖೆಯ ಉನ್ನತಾಧಿಕಾರಿಗಳು ನಡೆಸಿದ ಮಾತುಕತೆ ಫಲಪ್ರದವಾದ ಕಾರಣ ಗ್ರಾಮ ಪಂಚಾಯಿತಿ ಅಧಿಕಾರಿಗಳು, ನೌಕರರು ಮತ್ತು ಸದಸ್ಯರು ಅ.4ರಿಂದ ನಡೆಸುತ್ತಿದ್ದ ಧರಣಿಯನ್ನು ಮುಕ್ತಾಯಗೊಳಿಸುವುದಾಗಿ ಘೋಷಿಸಿದರು.



ಬೆಂಗಳೂರಿನಲ್ಲಿ ಗುರುವಾರ ಗ್ರಾಮ ಪಂಚಾಯಿತಿಯ ಎಲ್ಲ ವೃಂದದ ಸಂಘಟನೆಗಳ ಮುಖಂಡರ ಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿದರು. ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಉಮಾ ಮಹಾದೇವನ್, ಆಯುಕ್ತೆ ಅರುಂಧತಿ ಚಂದ್ರಶೇಖರ್ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ರಾಜ್ಯದ ವಿವಿಧ ಜಿಲ್ಲೆಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು, ಕರ ವಸೂಲಿಗಾರರು, ಕ್ಲರ್ಕ್ ಮತ್ತು ಡಾಟಾ ಎಂಟ್ರಿ ಆಪರೇಟರ್‌ಗಳು, ನೀರಗಂಟಿಗಳು, ಜವಾನರು, ಸ್ವಚ್ಛತಾ ಕೆಲಸಗಾರರು, ದ್ವಿತೀಯ ದರ್ಜೆ ಸಹಾಯಕರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಗೆಜೆಟೆಡ್ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯಿತಿ ಸದಸ್ಯರ ಹಲವು ಸಮಸ್ಯೆಗಳನ್ನು ಆದ್ಯತೆ ಮೇಲೆ ಬಗೆಹರಿಸಲಾಗುವುದು. ಜ್ಯೇಷ್ಠತೆಯ ಸಮಸ್ಯೆಗಳನ್ನು ತುರ್ತಾಗಿ ಪರಿಹರಿಸಿ, ಬಡ್ತಿ ನೀಡಲಾಗುವುದು ಎಂದು ಖರ್ಗೆ ಭರವಸೆ ನೀಡಿದರು.

ಮೊದಲ ಹಂತದಲ್ಲಿ 2,166 ಪಿಡಿಒಗಳನ್ನು ಮೇಲ್ದರ್ಜೆಗೆ ಏರಿಸಲಾಗುವುದು, ನಂತರ ಉಳಿದವರಿಗೂ ಅವಕಾಶ ಕಲ್ಪಿಸಲಾಗುವುದು. ವರದಿ ನೀಡಲು ಸಮಿತಿಗೆ ಮೂರು ತಿಂಗಳ ಗಡುವು ನೀಡಲಾಗಿದೆ. ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರುವ ಕ್ರಮವಹಿಸಲಾಗುವುದು, ಈಗಾಗಲೇ ಪ್ರಕಟಿಸಿರುವ ವರ್ಗಾವಣೆ ಕರಡು ಅಧಿಸೂಚನೆಯಲ್ಲಿನ ನ್ಯೂನತೆಗಳನ್ನು ಪರಸ್ಪರ ಮಾತುಕತೆಯ ಮೂಲಕ ಬಗೆಹರಿಸಲಾಗುವುದು. ಖಾಲಿ ಹುದ್ದೆಗಳ ಭರ್ತಿಗೆ ಚಾಲನೆ ನೀಡಲಾಗುವುದು ಎಂದರು.

ಗ್ರಾಮ ಪಂಚಾಯಿತಿ ಸದಸ್ಯರ ಗೌರವಧನ ಹೆಚ್ಚಳ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆ ಚರ್ಚಿಸಲಾಗುವುದು. ನೌಕರರ ಮೇಲಿನ ಒತ್ತಡ ಕುರಿತು ಅಧ್ಯಯನ ಮಾಡಲು ತಜ್ಞರ ಸಮಿತಿ ನೇಮಕ ಮಾಡಲಾಗುವುದು ಎಂದು ಹೇಳಿದರು.

ಪಂಚಾಯತ್ ರಾಜ್ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಾದ ಉಮಾ ಮಹಾದೇವನ್, ಅಂಜುಂ ಪರ್ವೇಜ್, ಆಯುಕ್ತೆ ಅರುಂಧತಿ ಚಂದ್ರಶೇಖರ್, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಉಪಸ್ಥಿತರಿದ್ದರು.

ಸಚಿವರ ಪ್ರತ್ಯೇಕ ಸಭೆ ಸಿದ್ದರಾಮಯ್ಯ ಅತೃಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಲಿತ ಸಚಿವರಿಂದ ಪ್ರತ್ಯೇಕ ಸಭೆ, ಮುಖ್ಯಮಂತ್ರಿ ಬದಲಾವಣೆ ಕುರಿತು ನಾನಾ ವ್ಯಾಖ್ಯಾನಗಳಿಂದ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಉಂಟಾಗಿರುವ ಗೊಂದಲಗಳ ವಿಚಾರವನ್ನು ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಪ್ರಸ್ತಾಪಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಲವು ಸಚಿವರ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಚಹಾ, ಭೋಜನದ ನೆಪದಲ್ಲಿ ಸಚಿವರಾದ ಸತೀಶ ಜಾರಕಿಹೊಳಿ, ಎಚ್.ಸಿ. ಮಹದೇವಪ್ಪ, ಜಿ. ಪರಮೇಶ್ವರ ಅವರು ಗೌಪ್ಯವಾಗಿ ಸಭೆ ಸೇರಿ ಚರ್ಚಿಸಿರುವ ವಿಚಾರ ಸಭೆಯಲ್ಲಿ ಪ್ರಸ್ತಾಪವಾಗಿದೆ. ಈ ವೇಳೆ ಮೂವರು ಸಚಿವರೂ, 'ಜೊತೆಯಾಗಿ ಊಟ ಮಾಡಿರುವುದನ್ನೇ ಮಾಧ್ಯಮಗಳು ಅಪಾರ್ಥ ಕಲ್ಪಿಸಿಕೊಂಡು ಬಿಂಬಿಸಿರುವುದರಿಂದ ಮತ್ತು ತಪ್ಪಾಗಿ ಅರ್ಥೈಸಿ ಕೊಂಡಿದ್ದರಿಂದ ಗೊಂದಲಗಳು ಉಂಟಾಗಿವೆ. ಮಾಧ್ಯಮಗಳಲ್ಲಿ ವರದಿಯಾಗಿರುವಂತೆ ಯಾವ ಸಭೆಯೂ ನಡೆದಿಲ್ಲ. ಯಾವುದೇ ರಾಜಕೀಯ ವಿಚಾರಗಳನ್ನು ಚರ್ಚಿಸಿಲ್ಲ' ಎಂದು ಸಮಜಾಯಿಷಿ ನೀಡಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

'ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ. ಸಚಿವ ಸಂಪುಟವೂ ಇದೆ. ಇಂತಹ ಪರಿಸ್ಥಿತಿಯಲ್ಲಿ ಪ್ರತ್ಯೇಕ ಸಭೆ ನಡೆಸಿ ಸಾರ್ವಜನಿಕವಾಗಿ ಅಪಾರ್ಥಕ್ಕೆ ಅವಕಾಶ ಮಾಡಿಕೊಡುವುದು ಸರಿಯಲ್ಲ. ಪಕ್ಷದ ಹಿತದೃಷ್ಟಿಯಿಂದ ಸರಿಯಲ್ಲ. ಸರ್ಕಾರ ₹50 ಸಾವಿರ ಕೋಟಿ ಮೊತ್ತದಲ್ಲಿ ಗ್ಯಾರಂಟಿ ಯೋಜನೆಗಳನ್ನು ರಾಜ್ಯದ ಜನರಿಗೆ ತಲುಪಿಸುತ್ತಿದೆ. ಆ ಬಗ್ಗೆ ಮಾತನಾಡಬೇಕಾದ ನಾಯಕರು, ಅನವಶ್ಯಕ ವಿಷಯಗಳ ಬಗ್ಗೆ ಮಾಧ್ಯಮಗಳ ಜೊತೆ ಮತ್ತು ಬಹಿರಂಗವಾಗಿ ಚರ್ಚೆ ನಡೆಸುತ್ತಿರುವುದು, ಹೇಳಿಕೆಗಳನ್ನು ನೀಡುತ್ತಿರುವುದು ಸರಿಯಲ್ಲ' ಎಂದು ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿ ಅತೃಪ್ತಿ ವ್ಯಕ್ತಪಡಿಸಿದ್ದಾರೆ' ಎನ್ನಲಾಗಿದೆ.

ಸಚಿವ ಸಂಪುಟ ಸಭೆ ಬಳಿಕ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವ ಎಚ್.ಕೆ. ಪಾಟೀಲ ಅವರು 'ನಾವೆಲ್ಲರೂ ನಿಮ್ಮ ಜೊತೆ ಇದ್ದೇವೆ ಎಂದು ಎಲ್ಲ ಸಚಿವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಒಗ್ಗಟ್ಟಿನ ಬೆಂಬಲ ವ್ಯಕ್ತಪಡಿಸಿದ್ದಾರೆ' ಎಂದಷ್ಟೇ ಹೇಳಿದರು.

ಅಶಿಸ್ತಿಗೆ ನೋಟಿಸ್: ಹೈಕಮಾಂಡ್ ಎಚ್ಚರಿಕೆ

ರಾಜ್ಯದಲ್ಲಿನ ಇತ್ತೀಚಿನ ರಾಜಕೀಯ ಬೆಳವಣಿಗೆಗಳ ಮಾಹಿತಿ ಪಡೆದಿರುವ ಕಾಂಗ್ರೆಸ್ ವರಿಷ್ಠರು, ಪದೇ ಪದೇ ಶಿಸ್ತು ಉಲ್ಲಂಘಿಸುತ್ತಿರುವ ನಾಯಕರಿಗೆ ನೋಟಿಸ್ ನೀಡಲು ಮುಂದಾಗಿದ್ದಾರೆ.

'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಮತ್ತು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ರಾಜ್ಯದಲ್ಲಿ ನಡೆಯುತ್ತಿರುವ ಎಲ್ಲ ವಿದ್ಯಮಾನಗಳ ಮಾಹಿತಿ ಪಡೆದುಕೊಂಡಿದ್ದಾರೆ. ಈ ವಿಚಾರವನ್ನು ಹೈಕಮಾಂಡ್ ನಾಯಕರು ಗಂಭೀರವಾಗಿ ತೆಗೆದುಕೊಂಡಿದ್ದು, ಕ್ರಮ ತೆಗೆದುಕೊಳ್ಳುವ ನಿರ್ಧಾರಕ್ಕೆ ಬಂದಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜೊತೆಗೂ ಚರ್ಚೆ ನಡೆಸಿರುವ ಮಲ್ಲಿಕಾರ್ಜುನ ಖರ್ಗೆ ಮತ್ತು ವೇಣುಗೋಪಾಲ್, ಎಚ್ಚರಿಕೆಯ ಸಂದೇಶ ರವಾನಿಸಲು ನಿರ್ಧರಿಸಿದ್ದು, ನಡೆಯುತ್ತಿರುವ ಬದಲಾವಣೆ ಕುರಿತು ತೆಗೆದುಕೊಳ್ಳಬೇಕಾದ ಕ್ರಮದ ಅನಿವಾರ್ಯತೆ ಬಗ್ಗೆ ಸಮಾಲೋಚನೆ ನಡೆಸಿದ್ದಾರೆ. ಈ ವಿಚಾರದಲ್ಲಿ ನಿಗಾ ವಹಿಸುವಂತೆ ಸುರ್ಜೇವಾಲಾ ಅವರಿಗೆ ಖರ್ಗೆ ಮತ್ತು ವೇಣುಗೋಪಾಲ್ ಸೂಚನೆ ನೀಡಿದ್ದಾರೆ ಎಂದೂ ಗೊತ್ತಾಗಿದೆ.

ಜಾತಿಗಣತಿ ವರದಿ ಸ್ವೀಕಾರಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಷ್ಟೇ ವಿರೋಧ ಬಂದರೂ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಶೈಕ್ಷಣಿಕ ಮತ್ತು ಸಾಮಾಜಿಕ ಸಮೀಕ್ಷೆಯ ವರದಿಯನ್ನು (ಜಾತಿಗಣತಿ ವರದಿ) ಸಂಪುಟ ಸಭೆಯಲ್ಲಿ ಮಂಡಿಸಿ, ಸ್ವೀಕರಿಸುವ ಕೆಲಸವನ್ನು ಸರ್ಕಾರ ಮಾಡಬೇಕು' ಎಂದು ಕರ್ನಾಟಕ ಶೋಷಿತ ಸಮುದಾಯಗಳ ಮಹಾಒಕ್ಕೂಟದ ಪ್ರಧಾನ ಸಂಚಾಲಕ ಕೆ.ಎಂ.ರಾಮಚಂದ್ರಪ್ಪ ಆಗ್ರಹಿಸಿದರು.

ಒಕ್ಕೂಟವು ನಗರದಲ್ಲಿ ಗುರುವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ವರದಿಯನ್ನು ಮಂಡಿಸಲು ವಿರೋಧ ಪಕ್ಷಗಳ ಕೆಲವರ ಜತೆಗೆ, ಕಾಂಗ್ರೆಸ್‌ನ ಕೆಲ ನಾಯಕರು ಮತ್ತು ಸಚಿವರು ಅಡ್ಡಿಪಡಿಸುತ್ತಿದ್ದಾರೆ. ಆದರೆ ಅಂತಹ ಬೆದರಿಕೆಗಳಿಗೆ ಮಣೆ ಹಾಕದೆ, ಸಿದ್ದರಾಮಯ್ಯ ಅವರು ವರದಿಯನ್ನು ಮಂಡಿಸಬೇಕು' ಎಂದು ಅವರು ಒತ್ತಾಯಿಸಿದರು.

'ಎಚ್. ಡಿ. ಕುಮಾರಸ್ವಾಮಿ, ಬಿ.ಎಸ್.ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದಾಗ ವರದಿ ಸ್ವೀಕರಿಸಲು ಅವಕಾಶವಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಆದರೆ ಸಿದ್ದರಾಮಯ್ಯ ಅವರು ತಮ್ಮ ಈ ನಿರ್ಧಾರದಿಂದ ಹಿಂದೆ ಸರಿಯಬಾರದು' ಎಂದರು.

'ಸಂಪುಟ ಸಭೆಯಲ್ಲಿ ವರದಿಯನ್ನು ಮಂಡಿಸಿ, ಸ್ವೀಕರಿಸಿ ಎಂದು ಒತ್ತಾಯಿಸಲು ಇದೇ 16ರಂದು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸಮಾವೇಶ ನಡೆಸಲಾಗುವುದು' ಎಂದರು. ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಎಂ.ಈರಣ್ಣ, ಒಕ್ಕೂಟದ ಸಂಚಾಲಕ ಅನಂತನಾಯ್ಕ್ ಎನ್., ಸದಸ್ಯ ಆದರ್ಶ ಯಲ್ಲಪ್ಪ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

13,653 ಎಂಜಿನಿಯರಿಂಗ್ ಸೀಟು ಉಳಿಕೆ

ಬೆಂಗಳೂರು: ಎರಡನೇ ಸುತ್ತಿನ ಮುಂದುವರಿದ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಗೊಂಡಿದ್ದು, ನಂತರವೂ 13,653 ಎಂಜಿನಿಯರಿಂಗ್ ಸೀಟುಗಳು ಉಳಿದಿವೆ.

ಎಂಜಿನಿಯರಿಂಗ್, ಕೃಷಿ, ಪಶು ವೈದ್ಯಕೀಯ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ 1,11,294 ಸೀಟುಗಳಲ್ಲಿ 85,259 ಸೀಟುಗಳು ಹಂಚಿಕೆಯಾಗಿವೆ. 26,036 ಸೀಟು ಉಳಿದಿವೆ. ಎಂಜಿನಿಯರಿಂಗ್‌ನ 79,907 ಸೀಟುಗಳಲ್ಲಿ 66,254 ಸೀಟುಗಳು ಹಂಚಿಕೆಯಾಗಿವೆ. ಸಿವಿಲ್, ಮೆಕ್ಯಾನಿಕಲ್, ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗದಲ್ಲಿ ಹೆಚ್ಚು ಸೀಟುಗಳು ಉಳಿದಿವೆ ಎಂದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಫಾರ್ಮಸಿ ವಿಭಾಗದಲ್ಲಿ 401, ಯೋಗ ನ್ಯಾಚುರೋಪತಿ 125, ಕೃಷಿ (ಪ್ರಾಕ್ಟಿಕಲ್) 134 ಸೀಟುಗಳು ಹಂಚಿಕೆಗೆ ಬಾಕಿ ಇವೆ. ಎರಡನೇ ಮುಂದುವರಿದ ಸುತ್ತಿನಲ್ಲಿ ಸರ್ಕಾರಿ ಕೋಟಾದ ಸೀಟುಗಳನ್ನು ಮಾತ್ರ ಕೆಇಎ ಮೂಲಕ ಹಂಚಿಕೆ ಮಾಡಲಾಗಿದೆ. ಸರ್ಕಾರದ ನಿರ್ದೇಶನದಂತೆ ಖಾಸಗಿ ಕೋಟಾದ ಸೀಟುಗಳನ್ನು ಹಂಚಿಕೆ ಮಾಡಿಲ್ಲ. ಹಾಗಾಗಿ, ನರ್ಸಿಂಗ್‌ನಲ್ಲಿ 11,673, ಸೀಟು ಉಳಿದಿವೆ ಎಂದು ಮಾಹಿತಿ ನೀಡಿದ್ದಾರೆ.

ಸಿಐಡಿಗೆ ವಿನಯ್ ಕುಲಕರ್ಣಿ ಪ್ರಕರಣ

ಬೆಂಗಳೂರು: ಧಾರವಾಡ ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ವಿರುದ್ಧ ಹಾವೇರಿ ಮೂಲದ ಮಹಿಳೆ ಸಂಜಯನಗರ ಪೊಲೀಸ್ ಠಾಣೆಗೆ ನೀಡಿರುವ ದೂರು ಹಾಗೂ ಶಾಸಕರು ನೀಡಿರುವ ಪ್ರತಿ ದೂರುಗಳ ತನಿಖೆಯನ್ನು ರಾಜ್ಯ ಸರ್ಕಾರ ಸಿಐಡಿಗೆ ವಹಿಸಿದೆ.

'ಶಾಸಕ ವಿನಯ್‌ಕುಲಕರ್ಣಿ ಅತ್ಯಾಚಾರ ನಡೆಸಿದ್ದಾರೆ' ಎಂದು ಆರೋಪಿಸಿ ಮಹಿಳೆ ದೂರು ನೀಡಿದ್ದರು. ಅದಕ್ಕೆ ಪ್ರತಿಯಾಗಿ ದೂರುದಾರ ಮಹಿಳೆ ಹಾಗೂ ಖಾಸಗಿ ಸುದ್ದಿ ವಾಹಿನಿಯೊಂದರ ಮುಖ್ಯಸ್ಥರು ₹2 ಕೋಟಿ ಹಣ ನೀಡುವಂತೆ ಬ್ಲ್ಯಾಕ್‌ಮೇಲ್ ಮಾಡಿದ್ದರುಎಂದುವಿನಯ್‌ಕುಲಕರ್ಣಿಪ್ರತಿದೂರುನೀಡಿದ್ದರು.ಈಎರಡೂದೂರುಗಳ ತನಿಖೆಯನ್ನು ಸರ್ಕಾರ ಸಿಐಡಿಗೆ ವಹಿಸಿದೆ. 'ರೈತ ಹೋರಾಟ ಹಾಗೂ ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದ ನನಗೆ, 2022ರಲ್ಲಿ ವಿನಯ್ ಕುಲಕರ್ಣಿ ಪರಿಚಯವಾಗಿತ್ತು. ನನ್ನ ಮೊಬೈಲ್ ಸಂಖ್ಯೆ ಪಡೆದುಕೊಂಡಿದ್ದರು. ಮೊದಲ ಬಾರಿಗೆ ಹೆಬ್ಬಾಳ ನಿವಾಸದಲ್ಲಿ ಅವರನ್ನು ಭೇಟಿ ಮಾಡಿದ್ದೆ. 'ದೇವನಹಳ್ಳಿ ಹಾಗೂ ಧರ್ಮಸ್ಥಳಕ್ಕೆ ಬಲವಂತದಿಂದ ಕರೆದೊಯ್ದು ಅತ್ಯಾಚಾರ ನಡೆಸಿ ಜೀವಬೆದರಿಕೆ ಹಾಕಿದ್ದರು' ಎಂದು ಮಹಿಳೆ ದೂರು ನೀಡಿದ್ದರು.

'ಆಡಿಯೊ ಹಾಗೂ ವಿಡಿಯೊಗಳನ್ನು ಬಹಿರಂಗಪಡಿಸುವುದಿಲ್ಲ ಎಂದು ಹೇಳಿ ₹2 ಕೋಟಿಗೆ ಬೇಡಿಕೆಯಿಟ್ಟು ಸುಲಿಗೆಗೆ ಮುಂದಾಗಿದ್ದರು' ಎಂದು ಆರೋಪಿಸಿ ವಿನಯ್ ಕುಲಕರ್ಣಿ ಪ್ರತಿದೂರು ನೀಡಿದ್ದಾರೆ. ಆ ದೂರು ಆಧರಿಸಿ ವಾಹಿನಿಯೊಂದರ ಮುಖ್ಯಸ್ಥ ರಾಕೇಶ್ ಶೆಟ್ಟಿ ಹಾಗೂ ದೂರು ನೀಡಿದ ಸಂತ್ರಸ್ತೆ ವಿರುದ್ಧವೂ ಸುಲಿಗೆ ಪ್ರಕರಣದ ಅಡಿ ಇದೇ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ಯಾದಗಿರಿ ಸಿಡಿಲು ಬಡಿದು ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಯಾದಗಿರಿ: ಜಿಲ್ಲೆಯ ಸುರಪುರ ತಾಲ್ಲೂಕಿನ ಚಂದ್ಲಾಪುರ ಸೀಮಾಂತರದಲ್ಲಿ ಗುರುವಾರ ಸಿಡಿಲು ಬಡಿದು ಮಹಿಳೆಯೊಬ್ಬರು ಮೃತಪಟ್ಟಿದ್ದು, ಇಬ್ಬರು ಗಾಯಗೊಂಡಿದ್ದಾರೆ.

ಸುರಪುರ ನಗರದ ಕುರುಬರಗಲ್ಲಿ ಕುಂಬಾರಪೇಠ ನಿವಾಸಿ ನಿಂಗಮ್ಮ ನಾಗಪ್ಪ ಕೊಂಗಂಡಿ (35) ಮೃತರು. ಘಟನೆಯಲ್ಲಿ ಭಾಗಮ್ಮ ನಾಗಪ್ಪ, ಹಣಮಂತ ಬಸವರಾಜ ಗಾಯಗೊಂಡಿದ್ದು, ಸುರಪುರ ಸರ್ಕಾರಿ ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಹತ್ತಿ ಹೊಲದಲ್ಲಿ ಗುರುವಾರ ಸಂಜೆ ಕಳೆ ತೆಗೆಯುವ ವೇಳೆ ಸಿಡಿಲು ಬಡಿದಿದೆ. ನಿಂಗಮ್ಮ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಇದೇ ವೇಳೆ ಸಿಡಿಲಿನಿಂದ ಇನ್ನಿಬ್ಬರು ಗಾಯಗೊಂಡಿದ್ದಾರೆ.

ಸುರಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂಬತ್ತು ತಿಂಗಳಲ್ಲಿ 6,137 ಎಫ್‌ಐಆರ್: ಪ್ರಯಾಣಿಕರಿಗೆ ಕಿರಿಕಿರಿ ತಪ್ಪಿಸಲು ಕ್ರಮ

ಆಟೊ ಚಾಲಕರ ವಿರುದ್ಧ ಕಾರ್ಯಾಚರಣೆ ತೀವ್ರ

● ಆದಿತ್ಯ ಕೆ.ಎ.

ಬೆಂಗಳೂರು: ‘ರಾಜಧಾನಿಯಲ್ಲಿ ಪ್ರಯಾಣಿಕರ ಮೇಲೆ ಆಟೊ ಚಾಲಕರ ದೌರ್ಜನ್ಯ ಹಾಗೂ ಕಿರಿಕಿರಿ ಮಿತಿಮೀರಿದೆ’ ಎಂಬ ಆರೋಪ ವ್ಯಕ್ತವಾದ ಬೆನ್ನಲ್ಲೇ ನಗರದ ಸಂಚಾರ ಪೊಲೀಸರು, ಚಾಲಕರ ವಿರುದ್ಧ ಕಾರ್ಯಾಚರಣೆಯನ್ನು ತೀವ್ರಗೊಳಿಸಿದ್ದಾರೆ.

ಕಳೆದ ಮೂರು ವರ್ಷಕ್ಕೆ ಹೋಲಿಸಿದರೆ, ಈ ವರ್ಷದ ಒಂಬತ್ತು ತಿಂಗಳಲ್ಲೇ ಆಟೊ ಚಾಲಕರ ವಿರುದ್ಧ ವಿವಿಧ ಸಂಚಾರ ಠಾಣೆಗಳಲ್ಲಿ 6,137 ಪ್ರಕರಣಗಳು ದಾಖಲಾಗಿವೆ.

ಪ್ರಯಾಣಿಕರು ಕರೆದಿದ್ದ ಸ್ಥಳಕ್ಕೆ ಹೋಗದಿರುವುದು, ನಿಗದಿಗಿಂತ ಹೆಚ್ಚಿನ ಬಾಡಿಗೆ ಕೇಳುತ್ತಿರುವುದು, ಪ್ರಯಾಣಿಕರನ್ನು ಕರೆದೊಯ್ದು ಮೊಬೈಲ್, ನಗದು ಸುಲಿಗೆ ನಡೆಸುತ್ತಿರುವಂತಹ ಪ್ರಕರಣಗಳು ದಾಖಲಾಗುತ್ತಿವೆ. ಇನ್ನೂ ಕೆಲವು ನಿಲ್ದಾಣಗಳಲ್ಲಿ ಪ್ರಯಾಣಿಕರನ್ನು ಅಡ್ಡಗಟ್ಟಿ ಆಟೊ ಚಾಲಕರು ಕಿರುಕುಳ ನೀಡುತ್ತಿದ್ದಾರೆ. ಆ ಸಂಬಂಧವೂ ಹೆಚ್ಚಿನ ದೂರುಗಳು ಬಂದಿವೆ ಎಂದು ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಆಟೊದಲ್ಲಿ ಪ್ರಯಾಣಿಸುವರಿಗೆ ಚಾಕು ತೋರಿಸಿ ಹಣ, ಮೊಬೈಲ್ ಸುಲಿಗೆ ಮಾಡುತ್ತಿದ್ದ ಇಬ್ಬರು ಆಟೊ ಚಾಲಕರನ್ನು ಇತ್ತೀಚೆಗೆ ಗೋವಿಂದ ರಾಜನಗರ ಠಾಣೆ ಪೊಲೀಸರು ಬಂಧಿಸಿದ್ದರು. ಇಬ್ಬರು ಚಾಲಕರನ್ನು ವಿಚಾರಣೆಗೆ ಒಳಪಡಿಸಿದಾಗ ಇದೇ ರೀತಿ ಹಲವು ಕೃತ್ಯಗಳಲ್ಲಿ ಭಾಗಿ ಆಗಿರುವುದು ಗೊತ್ತಾಗಿತ್ತು.



ಸಂಚಾರ ನಿಯಮ ಉಲ್ಲಂಘಿಸಿದ ಆಟೊ ಚಾಲಕರೊಬ್ಬರನ್ನು ಮಾಗಡಿ ರೋಡ್ ಠಾಣೆ ಪೊಲೀಸರು ಬಂಧಿಸಿದ್ದರು

ಕಳೆದ 15 ದಿನಗಳಲ್ಲಿ ಇಬ್ಬರು ಯುವತಿಯರಿಗೆ ಆಟೊ ಚಾಲಕರು ನಿಂದಿಸಿದ್ದರು. ನಿಂದನೆ ಮಾಡುತ್ತಿದ್ದ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು. ಅದನ್ನು ಆಧರಿಸಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದರು.

ಚೆನ್ನೈನ ಯುವತಿಯೊಬ್ಬರು ಕಳೆದ ವಾರ ಸಿಲ್ಕ್ ಬೋರ್ಡ್‌ಗೆ ಬಂದಿದ್ದರು. ಕ್ಯಾಬ್ ಬುಕ್ ಮಾಡಿದ್ದರು. ಕ್ಯಾಬ್ ಬರುವುದು ತಡವಾಗಿತ್ತು. ಅದೇ ವೇಳೆಗೆ ಬಂದ ಆಟೊ ಚಾಲಕ, ಕ್ಯಾಬ್ ದರ ₹300ಕ್ಕೆ ಕರೆದೊಯ್ಯುವುದಾಗಿ ಹೇಳಿಕೊಂಡಿದ್ದ. ಯುವತಿ ಒಪ್ಪಿ, ಆಟೊ ಹತ್ತಿದ್ದರು. ಚಾಲಕ ಮೀಟರ್ ಹಾಕಿದ್ದ. ಸ್ವಲ್ಪ ದೂರ ಪ್ರಯಾಣಿಸಿದ ಮೇಲೆ ಮೀಟರ್‌ನಲ್ಲಿ ₹340 ತೋರಿಸುತ್ತಿತ್ತು. ಇದರಿಂದ ಗಾಬರಿಗೊಂಡಿದ್ದ ಯುವತಿ, ‘ಮೊದಲು ಹೇಳಿದಷ್ಟು ದರ ಮಾತ್ರ ನೀಡುತ್ತೇನೆ’ ಎಂದಾಗ ಮೀಟರ್‌ಗಿಂತ ಒಂದೂವರೆ ಪಟ್ಟು ಹೆಚ್ಚು ಹಣ ಪಾವತಿಸಬೇಕು ಎಂದು ಬೆದರಿಸಿದ್ದ. ಆಕೆ ನಿರಾಕರಿಸಿದಾಗ ಅವಾಚ್ಯ ಶಬ್ದಗಳಿಂದ ಚಾಲಕ ‘ಗುಡ್ಡೆ’ ಭರತ್ ನಿಂದಿಸಿದ್ದ. ವಿಡಿಯೊ ಆಧರಿಸಿ ಆರೋಪಿಯ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿತ್ತು ಎಂದು ಸಂಚಾರ ಪೊಲೀಸರು ಹೇಳಿದರು.

ಮಾರತ್‌ಹಳ್ಳಿಯ ಯಮಲೂರು ಸಿಗ್ನಲ್ ಬಳಿ ಕಾರು ಚಾಲಕನ ಮುಖಕ್ಕೆ ಉಗಿದಿದ್ದ ಆಟೊ ಚಾಲಕ ಯಮಲೂರಿನ ಕಿರಣ್ ಎಂಬಾತನನ್ನು ಎಚ್‌ಎಎಲ್ ಪೊಲೀಸ್ ಠಾಣಾ ಪೊಲೀಸರು ಬಂಧಿಸಿದ್ದರು.

ಬಾಡಿಗೆಗೆ ಬರಲು ನಕಾರ

ವರ್ಷ	ಪ್ರಕರಣ
2021	363
2022	2,183
2023	1,537
2024	3,058(ಸೆ.30ರವರೆಗೆ)

ಹೆಚ್ಚಿನ ಬಾಡಿಗೆ ಕೇಳಿದವರು

ವರ್ಷ	ಪ್ರಕರಣ
2021	644
2022	2,179
2023	1,599
2024	3,079 (ಸೆ.30ರವರೆಗೆ)

ಅಲ್ಲಿಗೆ ಬರೋಲ್ಲಾ ಕಣ್ರಿ...

ಮೆಜೆಸ್ಟಿಕ್, ಜಾಲಹಳ್ಳಿ ಕ್ರಾಸ್, ಎಂಟನೇ ಮೈಲು, ಕೆಂಗೇರಿಗಳಲ್ಲಿ ಮಧ್ಯರಾತ್ರಿ ಯಾರಾದರೂ ಬಂದು ಆಟೊ ವಿಚಾರಿಸಿದರೆ, ‘ಮೀಟರ್ ಮೇಲೆ ದುಪ್ಪಟ್ಟು ಹಣ ಕೊಡಿ’, ‘ಕತ್ರಿಗುಪ್ಪೆಗೆ ಬರೋಲ್ಲಾ ಕಣ್ರಿ...’, ‘ಗಂಗಮ್ಮನ ಗುಡಿ ವೃತ್ತ’ಕ್ಕೆ ಬರೋದಿಲ್ಲ ಎಂದು ಆಟೊ ಚಾಲಕರು ಹೇಳಿ, ನಿಯಮ ಉಲ್ಲಂಘನೆ ಮಾಡುತ್ತಿರುವುದು ಸಾಮಾನ್ಯವಾಗಿದೆ ಎಂದು ಪ್ರಯಾಣಿಕರು ದೂರಿದ್ದಾರೆ. ಈ ರೀತಿ ಹೇಳಿಕೆ ನೀಡುವ ಚಾಲಕರ ವಿರುದ್ಧ ಸಂಚಾರ ಪೊಲೀಸರು ಕಾರ್ಯಾಚರಣೆಗೆ ಇಳಿದಿದ್ದಾರೆ. ಮಧ್ಯರಾತ್ರಿಯೂ ಕಾರ್ಯಾಚರಣೆ ನಡೆಸುತ್ತಿದ್ದಾರೆ ಎಂದು ಗೊತ್ತಾಗಿದೆ.

ಕೆಲವರಿಂದ ನಿಷ್ಠಾವಂತ ಚಾಲಕರಿಗೂ ಸಮಸ್ಯೆ ಆಗುತ್ತಿದೆ. ತಪ್ಪಿತಸ್ಥ ಚಾಲಕರ ಬಗ್ಗೆ ನಾವೇ ಪೊಲೀಸರಿಗೆ ಮಾಹಿತಿ ನೀಡುತ್ತಿದ್ದೇವೆ

ನವೀನ್, ಆಟೊ ಚಾಲಕ, ಮೆಜೆಸ್ಟಿಕ್

ನಿಯಮ ಉಲ್ಲಂಘನೆ ಸಂಬಂಧ ಇತ್ತೀಚೆಗೆ ಆಟೊ ಚಾಲಕರ ವಿರುದ್ಧ ಹೆಚ್ಚಿನ ದೂರುಗಳು ಬರುತ್ತಿವೆ. ಕಾರ್ಯಾಚರಣೆ ಮುಂದುವರೆಯಲಿದೆ

ಎಂ.ಎನ್.ಅನುಚೇತ್, ಜಂಟಿ ಪೊಲೀಸ್ ಕಮಿಷನರ್, ಸಂಚಾರ ವಿಭಾಗ

ಸುದ್ದಿ 2 ನಿಮಿಷ

ಮುಸ್ಲಿಮರಿಗೂ ಒಳ ಮೀಸಲಾತಿ ನೀಡಿ

ಚಿತ್ರದುರ್ಗ: ‘ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ಸ್ಥಿತಿ ಅವಲೋಕಿಸಿ ಮುಸ್ಲಿಮರಿಗೂ ಒಳ ಮೀಸಲಾತಿ ನೀಡಬೇಕು. ಆ ಮೂಲಕ ಸಾಮಾಜಿಕ ನ್ಯಾಯ ಒದಗಿಸಬೇಕು’ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಒತ್ತಾಯಿಸಿದರು.

‘ಮುಸ್ಲಿಮರಲ್ಲಿ 48 ಉಪ ಜಾತಿಗಳಿವೆ. ಅವರಲ್ಲಿಯೂ ಬಡವರಿದ್ದಾರೆ. ಪರಿಶಿಷ್ಟ ಜಾತಿ ಅಷ್ಟೇ ಅಲ್ಲ, ಹಿಂದುಳಿದ ವರ್ಗದಲ್ಲೂ ಒಳಮೀಸಲು ಜಾರಿಗೊಳಿಸಲು ರಾಜ್ಯ ಸರ್ಕಾರ ಮುಂದಾಗಬೇಕು’ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.



‘ಬಿಜೆಪಿಯು ಮೀಸಲಾತಿ ವಿರೋಧಿ ಎಂದು ಬಿಂಬಿಸುತ್ತಿದ್ದಾರೆ. ಆದರೆ ಜವಾಹರಲಾಲ್ ನೆಹರೂ ಮೀಸಲಾತಿಯನ್ನು ವಿರೋಧಿಸಿದ್ದರು. ಆ ಪತ್ರವನ್ನು ಪ್ರಧಾನಿ ಮೋದಿ ಈಚೆಗೆ ಬಿಡುಗಡೆ ಮಾಡಿದ್ದಾರೆ. ಪರಿಶಿಷ್ಟ ಜಾತಿ, ವರ್ಗಕ್ಕೆ ಮೀಸಲಾತಿ ಹೆಚ್ಚಿಸಿದ್ದು ಬಿಜೆಪಿ. ಇದನ್ನು ಕಾಂಗ್ರೆಸ್ ಮರೆತಂತಿದೆ’ ಎಂದು ಕುಟುಕಿದರು.

‘ವಕ್ಫ್ ಆಸ್ತಿ ಸರ್ಕಾರದ್ದಲ್ಲ ಎಂದು ಸಚಿವ ಜಮೀರ್ ಅಹ್ಮದ್ ಅಹಂಕಾರದಿಂದ ಹೇಳಿದ್ದಾರೆ. ದೇಶದಲ್ಲಿನ ಎಲ್ಲ ಆಸ್ತಿಯೂ ಸರ್ಕಾರದ್ದೇ. ಜಮೀರ್, ತನ್ನ ಅಪ್ಪನ ಆಸ್ತಿ ಎಂಬಂತೆ ಮಾತನಾಡುವುದನ್ನು ನಿಲ್ಲಿಸಲಿ’ ಎಂದರು.

ನಕಲಿ ನೋಟು ಜಾಲ: ಐವರ ಸೆರೆ

ಬೆಂಗಳೂರು: ನಕಲಿ ನೋಟುಗಳ ಚಲಾವಣೆ ಜಾಲವನ್ನು ಬೇಧಿಸಿರುವ ಹಲಸೂರು ಗೇಟ್ ಠಾಣೆ ಪೊಲೀಸರು, ಐವರು ಆರೋಪಿಗಳನ್ನು ಬಂಧಿಸಿದ್ದಾರೆ.

ಬಳ್ಳಾರಿಯ ಅಬ್ದುಲ್ ಹುಸೇನ್, ಕೇರಳದ ಪ್ರಸಿದ್ಧ್, ನೂರುದ್ದೀನ್ ಅಲಿಯಾಸ್ ಅನ್ವರ್, ಮೊಹಮ್ಮದ್ ಅಫ್ಸಾನ್ ಹಾಗೂ ಪ್ರಯಾಶ್ ಬಂಧಿತರು. ಮತ್ತೊಬ್ಬ ಆರೋಪಿ ಶರತ್ ತಲೆಮರೆಸಿಕೊಂಡಿದ್ದು, ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು. ಬಂಧಿತ ಆರೋಪಿಗಳನ್ನು ನ್ಯಾಯಾಲಯಕ್ಕೆ ಗುರುವಾರ ಹಾಜರುಪಡಿಸಿ ಪರಪ್ಪನ ಅಗ್ರಹಾರ ಜೈಲಿಗೆ ಕಳುಹಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಅಬ್ದುಲ್ ಹುಸೇನ್ ಅವರು ಗ್ರಾನೈಟ್ ಉದ್ಯಮ ನಡೆಸುತ್ತಿದ್ದರು. ಕೆಲವು ದಿನಗಳ ಹಿಂದೆ ಕೇರಳಕ್ಕೆ ಗ್ರಾನೈಟ್ ಪೂರೈಸಿದ್ದರು. ಗ್ರಾನೈಟ್ ಖರೀದಿಸಿದವರು ₹50 ಲಕ್ಷ ಪಾವತಿಸಬೇಕಿತ್ತು. ಉದ್ಯಮಿ ಅಬ್ದುಲ್ ಹುಸೇನ್ ಅವರು ಹಣ ಕೊಡುವಂತೆ ಕೇಳಿದ್ದರೂ ಕೊಟ್ಟರಲಿಲ್ಲ. ಕೆಲವು ದಿನಗಳ ಬಳಿಕ ಪ್ರಸಿದ್ಧ್, ನೂರುದ್ದೀನ್, ಮೊಹಮ್ಮದ್ ಅಫ್ಸಾನ್, ಪ್ರಯಾಶ್ ಹಾಗೂ ಶರತ್ ಅವರು ಕರೆ ಮಾಡಿ, ₹2 ಸಾವಿರ ಮುಖಬೆಲೆಯ ನೋಟುಗಳಿದ್ದು ಆರ್‌ಬಿಐನಿಂದ ಬದಲಾವಣೆ ಮಾಡಿಕೊಳ್ಳುವಂತೆ ಹೇಳಿದ್ದರು. ಅಬ್ದುಲ್ ಅವರು ಆ ನೋಟುಗಳನ್ನು ಪಡೆದು ಆರ್‌ಬಿಐನಲ್ಲಿ ಬದಲಾವಣೆಗೆ ಹೋಗಿದ್ದರು. ಆರ್‌ಬಿಐ ಅಧಿಕಾರಿಗಳು ಪರಿಶೀಲಿಸಿದಾಗ ಅವುಗಳು ನಕಲಿ ನೋಟುಗಳು ಎಂಬುದು ಪತ್ತೆಯಾಗಿತ್ತು. ಅಧಿಕಾರಿಗಳು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು. ಕೇರಳಕ್ಕೆ ಮೂರು ವಿಶೇಷ ತಂಡಗಳನ್ನು ಕಳುಹಿಸಲಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಆರೋಪಿ ಪ್ರಯಾಶ್ ಕೇರಳದಲ್ಲಿ ಮುದ್ರಣಾಲಯ ನಡೆಸುತ್ತಿದ್ದಾನೆ. ಅದೇ ಮುದ್ರಣಾಯದಲ್ಲಿ ನಕಲಿ ನೋಟುಗಳನ್ನು ಮುದ್ರಿಸಲಾಗುತ್ತಿತ್ತು ಎಂಬುದು ತನಿಖೆಯಿಂದ ಗೊತ್ತಾಗಿದೆ. ಈ ಹಿಂದೆಯೂ ಪ್ರಯಾಶ್ ವಿರುದ್ಧ ಪ್ರಕರಣವೊಂದು ದಾಖಲಾಗಿದ್ದು ಸಿಸಿಬಿಯವರು ತನಿಖೆ ನಡೆಸುತ್ತಿದ್ದಾರೆ’ ಎಂದರು.

ಚಿತ್ರಾವಳಿ



ಕೆ.ಆರ್‌.ಪುರದ ಹೋಪ್ ಫಾರಂ ಸಿಗ್ನಲ್‌ನ ಕೆಳಸೇತುವೆ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಮಹದೇವಪುರ ಟಾಸ್ಕ್ ಫೋರ್ಸ್‌ನ ಸ್ವಯಂ ಸೇವಕರು ಹಾಗೂ ಬಿಬಿಎಂಪಿ ಯೋಜನಾ, ಭೂ ಸ್ವಾಧೀನ ಅಧಿಕಾರಿಗಳು ಗುರುವಾರ ಸ್ಥಳ ಪರಿಶೀಲಿಸಿದರು



ಬೆಂಗಳೂರು ಅನುದಾನರಹಿತ ಶಾಲೆ– ಕಾಲೇಜು ಆಡಳಿತ ಮಂಡಳಿಗಳ ಒಕ್ಕೂಟ ಗೆದ್ದಲಹಳ್ಳಿಯಲ್ಲಿ ಆಯೋಜಿಸಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಅವರು ಶಿಕ್ಷಕರನ್ನು ಸನ್ಮಾನಿಸಿದರು. ಒಕ್ಕೂಟದ ಗೌರವಾಧ್ಯಕ್ಷ ಕೆ. ಆಂಜೀನಪ್ಪ, ಹುಲಿಕಲ್ ನಟರಾಜ್, ಕೆ.ರಮೇಶ್, ಕೆ. ಪರಶುರಾಮ, ಶಿವಕುಮಾರ್ ಉಪಸ್ಥಿತರಿದ್ದರು



ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್‌.ಈ. ಸುಧೀಂದ್ರ ಅವರು ಮಾಲ್ದೀವ್ಸ್ ಅಧ್ಯಕ್ಷ ಮೊಹಮ್ಮದ್ ಮೊಯಿಜು ಅವರನ್ನು ಭೇಟಿಯಾಗಿ ಜೈವಿಕ ಇಂಧನ ಕ್ಷೇತ್ರದ ಅಭಿವೃದ್ಧಿ ಕುರಿತು ಚರ್ಚಿಸಿದರು

ದರ್ಶನ್ ಪರ ವಕೀಲ ಸಿ.ವಿ.ನಾಗೇಶ್ ವಾದ ಮಂಡನೆ

‘ರಕ್ತವಿಲ್ಲದೇ ‘ರಕ್ತಚರಿತ್ರೆ’ ಹೇಗೆ ಸಾಧ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಂಚನಾಮೆ ವೇಳೆ ರಕ್ತದ ಗುರುತಿನ ಕಲೆಗಳೇ ಸಿಕ್ಕಿಲ್ಲ. ಕೇವಲ ವಾದದಲ್ಲಿ ‘ಅರೇಬಿಯನ್ ನೈಟ್ಸ್ ಅಲ್ಲ’, ‘ರಕ್ತಚರಿತ್ರೆ’ ಆಗಿದೆ ಎಂದು ವಾದ ಮಂಡಿಸಲಾಗಿದೆ. ಜಪ್ತಿ ಮಾಡಿಕೊಂಡ ವಸ್ತುಗಳಲ್ಲಿ ರಕ್ತದ ಕಲೆಯ ಗುರುತೇ ಇಲ್ಲದ ಮೇಲೆ ರಕ್ತಚರಿತ್ರೆ ಹೇಗೆ ಸಾಧ್ಯ’ ಎಂದು ದರ್ಶನ್ ಪರ ವಕೀಲ ಸಿ.ವಿ.ನಾಗೇಶ್ ವಾದ ಮಂಡಿಸಿದರು.

57ನೇ ಸಿಸಿಎಚ್ ನ್ಯಾಯಾಲಯದಲ್ಲಿ ಗುರುವಾರ ದರ್ಶನ್ ಜಾಮೀನು ಅರ್ಜಿಯ ವಿಚಾರಣೆ ವೇಳೆ ವಾದ ಮಂಡಿಸಿದ ನಾಗೇಶ್ ಅವರು, ‘ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವರದಿಯಲ್ಲೂ ರಕ್ತದ ಕಲೆಯ ಗುರುತುಗಳು ಇರುವುದು ದೃಢಪಟ್ಟಿಲ್ಲ’ ಎಂದು ಹೇಳಿದರು.

‘ತನಿಖಾಧಿಕಾರಿಗಳು ಆರೋಪಿಗಳಿದ್ದ ಸ್ಥಳದ ಮಾಹಿತಿಯನ್ನ ಗೂಗಲ್‌ನಿಂದ ಪಡೆದಿಲ್ಲ. ಕರೆ ವಿವರವನ್ನೂ ಸಂಗ್ರಹಿಸಿಲ್ಲ. ಇದ್ಯಾವುದೂ ಇಲ್ಲದೇ ಸಾಕ್ಷಿಗಳ ಹೇಳಿಕೆ ಆಧರಿಸಿ, ಆರೋಪಿಗಳು ಕೃತ್ಯದ ಸ್ಥಳದಲ್ಲಿದ್ದರು ಎಂದು ಹೇಗೆ ಹೇಳುತ್ತಾರೆ’ ಎಂದು ವಕೀಲರು ಪ್ರಶ್ನಿಸಿದರು.

‘ಪಟ್ಟಣಗೆರೆಯ ಶೆಡ್ ಸಮೀಪದ ಟವರ್ ಲೊಕೇಷನ್ ವ್ಯಾಪ್ತಿಯಲ್ಲಿಯೇ ಆರೋಪಿಗಳ ವಾಸದ ಮನೆಗಳಿವೆ. ಅಲ್ಲೇ ಮನೆಯಿದ್ದಾಗ ಅವರೆಲ್ಲಾ ಶೆಡ್ ನಲ್ಲಿ ಇದ್ದರು ಎಂಬುದು ಸಾಬೀತಾಗುವುದಿಲ್ಲ. ಐ.ಪಿ ವಿಳಾಸದ ಮೂಲಕ ವ್ಯಕ್ತಿಯೊಬ್ಬರು ಇದ್ದ ನಗರ ಮಾತ್ರ ತೋರಿಸಬಹುದು’ ಎಂದರು.

‘ಕೃತ್ಯ ಸಾಬೀತುಪಡಿಸುವ ಅಂಶವೇ ಇಲ್ಲ’: ‘ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿ ಬಿಟ್ಟರೆ ಬೇರೆ ಸಾಕ್ಷಿಯೇ ಇಲ್ಲ. ಕೃತ್ಯ ಸಾಬೀತು ಪಡಿಸುವಂತಹ ಯಾವುದೇ ಅಂಶವೂ ಇಲ್ಲ. ಪ್ರತ್ಯಕ್ಷ ಸಾಕ್ಷಿಯನ್ನು ಸೃಷ್ಟಿಸಲಾಗಿದೆ. ಪ್ರತ್ಯಕ್ಷ ಸಾಕ್ಷಿಯ ಹೇಳಿಕೆಯನ್ನೂ 13 ದಿನ ವಿಳಂಬವಾಗಿ ದಾಖಲಿಸಿಕೊಳ್ಳಲಾಗಿದೆ. ಮರಣೋತ್ತರ ವರದಿ ಬಂದ ಬಳಿಕ ಹೇಳಿಕೆ ದಾಖಲಿಸಿಕೊಂಡಿದ್ದಾರೆ. ಮರಣೋತ್ತರ ಪರೀಕ್ಷೆ ವರದಿಗೂ, ಹೇಳಿಕೆಗೂ ಹೊಂದಾಣಿಕೆ ಆಗುವಂತೆ ಮಾಡಲು ವಿಳಂಬ ಮಾಡಲಾಗಿದೆ’ ಎಂದು ನಾಗೇಶ್ ವಾದಿಸಿದರು.

‘ಪಟ್ಟಣಗೆರೆ ಶೆಡ್‌ನಲ್ಲಿ ಮಣ್ಣಷ್ಟೇ ಅಲ್ಲ, ರಕ್ತದ ಕಲೆಯೂ ಸಿಕ್ಕಿದೆ. ಮನೆಯಲ್ಲಿ ಶೂ ಇಟ್ಟ ಬಗ್ಗೆ ದರ್ಶನ್ ಸ್ವಇಚ್ಛಾ ಹೇಳಿಕೆ ನೀಡಿದ್ದಾರೆ. ಲೊಕೇಷನ್, ಕರೆ ವಿವರವೂ ಹೊಂದಾಣಿಕೆ ಆಗಿದೆ. ತಂತ್ರಜ್ಞಾನ ತುಂಬಾ ಅಭಿವೃದ್ಧಿ ಆಗಿದೆ. ಹೀಗಾಗಿ, ವ್ಯಕ್ತಿಯ ಇರುವಿಕೆಯ ಸ್ಥಳದ ನಿಖರತೆ ಪತ್ತೆ ಹಚ್ಚಬಹುದಾಗಿದೆ’ ಎಂದು ಪಬ್ಲಿಕ್ ಪ್ರಾಸಿಕ್ಯೂಟರ್ ಪ್ರಸನ್ನ ಕುಮಾರ್ ಪ್ರತಿವಾದ ಮಂಡಿಸಿದರು. ನ್ಯಾಯಾಲಯವು ಇದೇ 14ಕ್ಕೆ ಆದೇಶ ಕಾಯ್ದಿರಿಸಿತು.

ನಿಧನ ವಾರ್ತೆ

ಪತ್ರಕರ್ತ ಜಿ.ಗಣೇಶ್

ಬೆಂಗಳೂರು: ಅನಾರೋಗ್ಯದಿಂದ ಬಳಲುತ್ತಿದ್ದ ಪತ್ರಕರ್ತ ಜಿ.ಗಣೇಶ್ (41) ಅವರು ಗುರುವಾರ ನಿಧನರಾದರು.



ಅವರಿಗೆ ಪತ್ನಿ ಹಾಗೂ ಪುತ್ರ ಇದ್ದಾರೆ.

ಕುಣಿಗಲ್ ಸಮೀಪದ ತಾಳೆಕೆರೆ ಗ್ರಾಮದ ಗಣೇಶ್ ಅವರು ಕಳೆದ 20 ವರ್ಷಗಳಿಂದ ಪತ್ರಿಕಾ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದರು. ಪ್ರಸ್ತುತ ಟಿವಿ–5 ವಾಹಿನಿಯಲ್ಲಿ ಔಟ್‌ಪುಟ್ ಎಡಿಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ಪ್ರೆಸ್‌ಕ್ಲಬ್ ಆಫ್ ಬೆಂಗಳೂರಿನ ಖಜಾಂಚಿ ಆಗಿಯೂ ಕೆಲಸ ಮಾಡುತ್ತಿದ್ದರು.

ಅನಾರೋಗ್ಯದಿಂದ ಬಳಲುತ್ತಿದ್ದ ಅವರನ್ನು ನಗರದ ಜೈನ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಗುರುವಾರ ಸಂಜೆ ತಾಳೆಕೆರೆ ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ಲಾಂಟೇಷನ್ ವಿಭಜಿಸಿ, ಮಾರಾಟಕ್ಕೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ಲಾಂಟೇಷನ್ ಜಮೀನುಗಳನ್ನು ಚಿಕ್ಕ–ಚಿಕ್ಕ ಹಿಸ್ಸೆಗಳಾಗಿ ವಿಂಗಡಿಸಿ, ಮಾರಾಟ ಮಾಡುವುದನ್ನು ನಿರ್ಬಂಧಿಸಿ ಕಂದಾಯ ಇಲಾಖೆ ಆದೇಶಿಸಿದೆ.

ಹೋಂಸ್ಟೇ, ರೆಸಾರ್ಟ್ ಸ್ಥಾಪಿಸುವುದು ಮತ್ತು ನಿವೇಶನ ಅಭಿವೃದ್ಧಿಪಡಿಸುವುದನ್ನು ತಪ್ಪಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಇಲಾಖೆ ತಿಳಿಸಿದೆ.

ಬೇಕರಿ ಮಾಲೀಕರ ಬೆದರಿಸಿ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ರಕರ್ತನ ಸೋಗಿನಲ್ಲಿ ಬೇಕರಿ ಮಾಲೀಕರನ್ನು ಬೆದರಿಸಿ ಸುಲಿಗೆ ಮಾಡುತ್ತಿದ್ದ ಯುಟ್ಯೂಬರ್‌ನನ್ನು ಹುಳಿಮಾವು ಠಾಣೆ ಪೊಲೀಸರು ಬಂಧಿಸಿದ್ದಾರೆ. ಬೊಮ್ಮನಹಳ್ಳಿ ನಿವಾಸಿ ಶಫಿ ಬಂಧಿತ.

‘ಯುಟ್ಯೂಬರ್ ಆಗಿರುವ ಆರೋಪಿ, ನಗರದ ಹಲವು ಬೇಕರಿಗಳಿಗೆ ಹೋಗಿ ಸ್ವಚ್ಛತೆ ಇಲ್ಲ. ನಿರ್ವಹಣೆ ಸರಿ ಇಲ್ಲ ಎಂದು ಮಾಲೀಕರನ್ನು ಬೆದರಿಸುತ್ತಿದ್ದ. ಏಕಾಏಕಿ ಬೇಕರಿಗಳ ಒಳ ನುಗ್ಗಿ ವಿಡಿಯೊ ಚಿತ್ರೀಕರಿಸಿಕೊಂಡು ಬಿಬಿಎಂಪಿ ಅಧಿಕಾರಿಗಳಿಗೆ ಹೇಳಿ ಪರವಾನಗಿ ರದ್ದು ಮಾಡಿಸುವುದಾಗಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ. ಮಾಲೀಕರು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.



‘ಇತ್ತೀಚೆಗೆ ಆರೋಪಿ ಹುಳಿಮಾವು ಬಳಿಯ ಅಕ್ಷಯನಗರದ ಬೇಕರಿಗಳ ಮಾಲೀಕರಿಗೆ ಬೆದರಿಕೆ ಹಾಕಿದ್ದ. ಯುಟ್ಯೂಬ್ ಚಾನಲ್‌ನ ಪತ್ರಕರ್ತ ಎಂದು ಹೇಳಿಕೊಂಡು ಬೇಕರಿ ಮಾಲೀಕರಿಂದ ಯುಪಿಐ ಮೂಲಕ ₹ 10 ಸಾವಿರ ಸುಲಿಗೆ ಮಾಡಿದ್ದ’ ಎಂದು ಪೊಲೀಸರು ಹೇಳಿದರು.

‘ಆರೋಪಿ ಇದೇ ರೀತಿ ಸುಮಾರು 50ಕ್ಕೂ ಹೆಚ್ಚು ಬೇಕರಿ ಮಾಲೀಕರನ್ನು ಬೆದರಿಸಿ ಹಣ ಸುಲಿಗೆ ಮಾಡಿದ್ದಾನೆ ಎನ್ನಲಾಗಿದೆ. ಈ ಸಂಬಂಧ ತನಿಖೆ ನಡೆಯುತ್ತಿದೆ. ಆರೋಪಿಯಿಂದ ಮೊಬೈಲ್, ನಕಲಿ ಗುರುತಿನ ಚೀಟಿ ವಶಪಡಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಮಾಹಿತಿ ನೀಡಿದರು. ಹುಳಿಮಾವು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜನವಾಡ ಪಿಡಿಒ ಅಮಾನತು

ಬೀದರ್: ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಡಿಜಿಟಲ್ ಖಾತೆಗಳನ್ನು ವಿತರಿಸಿದ ಆರೋಪದ ಮೇರೆಗೆ ತಾಲ್ಲೂಕಿನ ಜನವಾಡ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಸವಿತಾ ಹಿರೇಮಠ ಅವರನ್ನು ಅಮಾನತುಗೊಳಿಸಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಡಾ. ಗಿರೀಶ್ ಬದೋಲೆ ಆದೇಶ ಹೊರಡಿಸಿದ್ದಾರೆ.



ಸವಿತಾ ಹಿರೇಮಠ

ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಚರ್ಚಿಸದೆ, ಅನುಮೋದನೆ ಪಡೆಯದೇ ಜನವಾಡ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಭಾಗ್ಯವಂತಿ ಹೈಟೆಕ್ ಲೇಔಟ್‌ನಲ್ಲಿ ಸುಮಾರು 200 ಡಿಜಿಟಲ್ ಖಾತೆಗಳನ್ನು ವಿತರಿಸಿದ್ದಾರೆ. ಇದು ಸರ್ಕಾರದ ಮಾರ್ಗಸೂಚಿಗೆ ವಿರುದ್ಧವಾದುದು ಎಂದು ಆದೇಶದಲ್ಲಿ ತಿಳಿಸಿದ್ದಾರೆ.

‘ವಿ.ವಿಗಳು ಪ್ರಚಾರದ ವೇದಿಕೆಗಳಾಗದಿರಲಿ’

ಬೆಂಗಳೂರು: ವಿಶ್ವವಿದ್ಯಾಲಯಗಳು ಸರ್ಕಾರದ ಪ್ರಚಾರ ಕಾರ್ಯದ ವೇದಿಕೆಗಳಾದರೆ ಅವುಗಳ ಅಸ್ತಿತ್ವವೇ ಇರುವುದಿಲ್ಲ ಎಂದು ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಹೇಳಿದರು.

ಚಿರಂತ್ ಪ್ರಕಾಶನ ಪ್ರಕಟಿಸಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರ ಸಂಶೋಧನಾ ಗ್ರಂಥ ‘ಹುಡುಕಾಟ’ ಬಿಡುಗಡೆ ಕಾರ್ಯಕ್ರಮದಲ್ಲಿ ಗುರುವಾರ ಅವರು ಮಾತನಾಡಿದರು.

‘ವಿಶ್ವವಿದ್ಯಾಲಯಗಳು ಮುಕ್ತ ಚರ್ಚೆಯ ಕೇಂದ್ರಗಳಾಗಬೇಕು ಹಾಗೂ ಆರ್ಥಿಕ ಪ್ರಗತಿಗೆ ವೇಗವರ್ಧಕವಾಗಿರಬೇಕು. ಯಾವ ಉದ್ದೇಶದೊಂದಿಗೆ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ ಸ್ಥಾಪನೆಯಾಯಿತು. ಈಗ ಅದಕ್ಕೆ ತದ್ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿರುವ ಪರಿಸ್ಥಿತಿ ಕಾಣುತ್ತಿದ್ದೇವೆ. ಜೆಎನ್‌ಯು ಪತನವಾಗುವುದನ್ನು ಕಂಡಾಗ ಉಳಿದ ವಿಶ್ವವಿದ್ಯಾಲಯಗಳ ಪರಿಸ್ಥಿತಿ ಹೇಳುವಂತಿಲ್ಲ. ಇದು ದೇಶದ ದುರಂತ’ ಎಂದು ಬೇಸರ ವ್ಯಕ್ತಪಡಿಸಿದರು.



ಸಂಶೋಧನಾ ಗ್ರಂಥ ‘ಹುಡುಕಾಟ’ ಲೋಕಾರ್ಪಣೆ ಮಾಡಿದ ಸಾಹಿತಿ ಹಂ.ಪ. ನಾಗರಾಜಯ್ಯ ಅವರು ಲೇಖಕ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ ಆದ ಪುರುಷೋತ್ತಮ ಬಿಳಿಮಲೆ ಅವರಿಗೆ ಶುಭ ಕೋರಿದರು. ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ ಇದ್ದಾರೆ ಪ್ರಜಾವಾಣಿ ಚಿತ್ರ

‘ಸಂಶೋಧನೆಗಾಗಿ ಹುಟ್ಟಿಕೊಂಡ ಕನ್ನಡ ವಿಶ್ವವಿದ್ಯಾಲಯ ಸಹ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಪುರುಷೋತ್ತಮ ಬಿಳಿಮಲೆ ಅವರು ಪ್ರಾದೇಶಿಕ ಸಂಸ್ಕೃತಿಗೆ ಕೊಡುಗೆ ನೀಡಿದ್ದಾರೆ. ನಾಲ್ಕು ದಶಕಗಳಿಂದ ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ’ ಎಂದರು. ‘ಸಾಹಿತ್ಯ ಮತ್ತು ಜಾನಪದಲ್ಲಿ ಸಂಶೋಧನೆ ಅಗತ್ಯ. ಎಂ.ಎಂ. ಕಲಬುರ್ಗಿ ಅವರು ತಮ್ಮ ಸಂಶೋಧನೆಗಳ ಸತ್ಯಗಳಿಂದಾಗಿಯೇ ಕೊಲೆಯಾದರು. ಹಾಗಾಗಿ ಭಯ, ಆತಂಕ ಸಂಶೋಧಕರನ್ನು ಕಾಡುತ್ತಿದೆ. ಸಂಶೋಧನೆಯಲ್ಲಿ ಸತ್ಯ ಇರಬೇಕು. ಆದರೆ ಈಗ ಸತ್ಯ ಬೇಕಾಗಿಲ್ಲ. ಆದ್ದರಿಂದ ಸಂಶೋಧಕರು ತಮ್ಮ ಜೀವದ ಮೇಲೆ ಭಯ ಇಟ್ಟುಕೊಳ್ಳುವುದು ಬೇಡ’ ಎಂದರು.

ಸಾಹಿತಿ ಹಂ.ಪ. ನಾಗರಾಜಯ್ಯ ಗ್ರಂಥ ಬಿಡುಗಡೆ ಮಾಡಿದರು. ಚಿರಂತ್ ಪ್ರಕಾಶನದ ಎಚ್.ಪರಮೇಶ್ವರ, ದೆಹಲಿ ಮಿತ್ರದ ವಸಂತ ಶೆಟ್ಟಿ ಬೆಳ್ಳಾರೆ ಪಾಲ್ಗೊಂಡಿದ್ದರು. ಟಿ.ತಿಮ್ಮೇಶ್ ನಿರೂಪಿಸಿದರು.

’ಗ್ರಾಮ ಸಭೆಯಲ್ಲಿ ಎಲ್ಲರೂ ಪಾಲ್ಗೊಳ್ಳಿ’

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ಮಾರೇನಹಳ್ಳಿ ಗ್ರಾಮ ಪಂಚಾಯಿತಿಯ 2024–25ನೇ ಸಾಲಿನ ಮೊದಲನೇ ಸುತ್ತಿನ ಗ್ರಾಮಸಭೆಯನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷ ಪಿ.ರಾಹುಲ್ ಅವರು ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಂದ ದೊರೆಯುವ ಸೌಲಭ್ಯಗಳು ಸೇರಿದಂತೆ ಪಂಚಾಯತ್‌ರಾಜ್ ಇಲಾಖೆಯ ವಿವಿಧ ವಿಷಯಗಳ ಕುರಿತು ತಿಳಿದುಕೊಳ್ಳಲು ಗ್ರಾಮಸಭೆಯಲ್ಲಿ ಸಾರ್ವಜನಿಕರು ಕಡ್ಡಾಯವಾಗಿ ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದರು.

ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.

ನೀರಿನ ತೊಟ್ಟಿಯಲ್ಲಿ ಮುಳುಗಿ ಮಗು ಸಾವು

ಕನಕಪುರ: ತಾಲ್ಲೂಕಿನ ಉಯ್ಯಂಬಳ್ಳಿ ಹೋಬಳಿ ಅಡಕೆ ಹಳ್ಳ ಗ್ರಾಮದಲ್ಲಿ ಬುಧವಾರ ರಾತ್ರಿ ಮನೆ ಮುಂದಿನ ಅಂಗಳದಲ್ಲಿ ಆಟವಾಡುತ್ತಿದ್ದ ಮೂರು ವರ್ಷದ ಪುಟ್ಟ ಬಾಲಕ ನೀರಿನ ತೊಟ್ಟಿಗೆ ಬಿದ್ದು ಮೃತಪಟ್ಟಿದ್ದಾನೆ. ಸಿಂಧು ಮತ್ತು ಶ್ರೀನಿವಾಸ್ ದಂಪತಿಯ ಪುತ್ರ ಪ್ರದ್ವಿನ್ ಮೃತಪಟ್ಟ ಮಗು. ಎರಡನೇ ಹೆರಿಗೆಗಾಗಿ ಸಿಂಧು ಅಡಕೆ ಹಳ್ಳ ಗ್ರಾಮದ ತವರು ಮನೆಗೆ ಬಂದಿದ್ದರು. ಶ್ರೀನಿವಾಸ್ ಬೆಂಗಳೂರಿನಲ್ಲಿ ಆಟೊ ಚಾಲಕರಾಗಿದ್ದಾರೆ.



ಮಗು ಮನೆ ಮುಂದೆ ಚೆಂಡಿನೊಂದಿಗೆ ಆಟ ಆಡುತ್ತಿತ್ತು. ನೀರಿನ ತೊಟ್ಟಿಗೆ ಬಿದ್ದ ಚೆಂಡು ತೆಗೆದುಕೊಳ್ಳಲು ಹೋಗಿ ಮಗು ನೀರಿನಲ್ಲಿ ಮುಳುಗಿ ಮೃತಪಟ್ಟಿದೆ.

ಎಷ್ಟು ಹೊತ್ತಾದರೂ ಮಗು ಕಾಣದಿದ್ದಾಗ ಆತಂಕಗೊಂಡು ಸಿಂಧು ಮತ್ತು ಪೋಷಕರು ಹುಡುಕಾಡಿದಾಗ ಮಗು ನೀರಿನ ತೊಟ್ಟಿಯಲ್ಲಿ ಮುಳುಗಿ ಮೃತಪಟ್ಟಿರುವುದು ಗೊತ್ತಾಗಿದೆ.

ಗರ್ಭದಲ್ಲಿ ಫೈಬ್ರಾಯ್ಡ್: ಯಶಸ್ವಿ ಹೆರಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗರ್ಭಾಶಯದಲ್ಲಿ ನಾರುಗಡ್ಡೆ (ಫೈಬ್ರಾಯ್ಡ್) ಹೊಂದಿದ್ದ 31 ವರ್ಷದ ಗರ್ಭಿಣಿಗೆ ವಾಣಿವಿಲಾಸ ಆಸ್ಪತ್ರೆಯ ವೈದ್ಯರು ಯಶಸ್ವಿಯಾಗಿ ಹೆರಿಗೆ ಮಾಡಿಸಿದ್ದಾರೆ.

ನಗರದ ವಾಸಿಯಾದ ಮಹಿಳೆ, ಫೈಬ್ರಾಯ್ಡ್‌ನಿಂದಾಗಿ ಮಕ್ಕಳನ್ನು ಹೊಂದಲು ಸಾಧ್ಯವಾಗಿರಲಿಲ್ಲ. ಫೈಬ್ರಾಯ್ಡ್ ಸಂಬಂಧ ಅವರು 2017ರಲ್ಲಿ ಮೈಸೂರಿನ ಖಾಸಗಿ ಆಸ್ಪತ್ರೆಯೊಂದ ರಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಮತ್ತೆ ಈ ನಾರುಗಡ್ಡೆ ಬೆಳೆದಿದ್ದರಿಂದ ಅವರಿಗೆ ಮೂರು ಬಾರಿ ಗರ್ಭಪಾತವಾಗಿತ್ತು. ಮತ್ತೊಮ್ಮೆ ಗರ್ಭಿಣಿಯಾದ ಅವರು, ಮೂರನೇ ತಿಂಗಳಲ್ಲಿ ನಗರದ ವಾಣಿವಿಲಾಸ ಆಸ್ಪತ್ರೆಗೆ ಭೇಟಿ ನೀಡಿದ್ದರು. ಅಗತ್ಯ ಚಿಕಿತ್ಸೆ ಒದಗಿಸಿದ ವೈದ್ಯರು, ಗರ್ಭ ಚೀಲಕ್ಕೆ ಹೊಲಿಗೆ ಹಾಕುವ ಮೂಲಕ ಗರ್ಭಪಾತ ತಡೆಯುವಲ್ಲಿ ಯಶಸ್ವಿ ಯಾಗಿ ದ್ದರು. ಮಹಿಳೆಗೆ ಅ.5 ರಂದು ಶಸ್ತ್ರಚಿಕಿತ್ಸೆ ನಡೆಸಿ, ಮಗು ಹಾಗೂ ನಾಲ್ಕು ಕೆ.ಜಿ. ತೂಕದ ನಾರು ಗಡ್ಡೆಯನ್ನು ಹೊರ ತೆಗೆದಿದ್ದಾರೆ.



ಶಸ್ತ್ರಚಿಕಿತ್ಸೆ ಮೂಲಕ ಗರ್ಭಾಶಯದಲ್ಲಿನ ನಾರುಗಡ್ಡೆ ಹೊರತೆಗೆದ ವಾಣಿವಿಲಾಸ ಆಸ್ಪತ್ರೆಯ ವೈದ್ಯರ ತಂಡ

ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ.ಸವಿತಾ ಸಿ. ಅವರ ನೇತೃತ್ವದಲ್ಲಿ ವೈದ್ಯರ ತಂಡವು ಸಿಸೇರಿಯನ್ ಹೆರಿಗೆ ಮಾಡಿಸಿ ದ್ದಾರೆ. ಮಗು 2.3 ಕೆ.ಜಿ. ತೂಕವಿದೆ. ತಾಯಿ, ಮಗು ಆರೋಗ್ಯದಿಂದಿದ್ದು, ಶೀಘ್ರದಲ್ಲಿಯೇ ಅವರು ಮನೆಗೆ ತೆರಳುವುದಾಗಿ ವೈದ್ಯರು ತಿಳಿಸಿದ್ದಾರೆ.

‘ವಿವಾಹವಾಗಿ ಎಂಟು ವರ್ಷಗಳಾದರೂ ಮಹಿಳೆಗೆ ಮಗುವಾಗಿರಲಿಲ್ಲ. ಗರ್ಭಾಶಯದಲ್ಲಿ ನಾರುಗಡ್ಡೆ ಬೆಳೆದಿದ್ದ ರಿಂದ ಮಗುವಿಗೆ ಅಪಾಯವಾಗುವ ಸಾಧ್ಯತೆಯಿತ್ತು. ಸಾಮಾನ್ಯವಾಗಿ ಒಂದು ಕೆ.ಜಿ. ತೂಕ ಇರಬೇಕಾದ ಗರ್ಭಾಶಯ ನಾಲ್ಕು ಕೆ.ಜಿ. ತೂಕವಿತ್ತು. ಅವರಿಗೆ ಪ್ರಾಣಾಪಾಯ ತಪ್ಪಿಸಲು ಗರ್ಭಾಶಯ ತೆಗೆಯುವುದು ಅನಿವಾರ್ಯವಾಯಿತು. ಹಲವು ಸವಾಲು ಎದುರಿಸಿ, ತಾಯಿ ಮತ್ತು ಮಗುವನ್ನು ರಕ್ಷಿಸಲಾಗಿದೆ. ಸಂಪೂರ್ಣ ಚಿಕಿತ್ಸೆಯನ್ನು ಉಚಿತವಾಗಿ ಒದಗಿಸಲಾಗಿದೆ’ ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದರು.

ಮುಂಬಯಿ ವಿಮಾನ ನಿಲ್ದಾಣದಲ್ಲಿ ವಶಕ್ಕೆ ಪಡೆದ ಪೊಲೀಸರು

ವಿದೇಶಕ್ಕೆ ಹಾರಲು ಸಿದ್ಧರಾಗಿದ್ದ ಕಳ್ಳರ ಸೆರೆ

ಪ್ರಜಾವಾಣಿ ವಾರ್ತೆ

ಮಾಗಡಿ: ಇಪ್ಪತ್ತು ದಿನಗಳ ಹಿಂದೆ ಇಲ್ಲಿಯ ಗಿರವಿ ಅಂಗಡಿ ಮಾಲೀಕರ ಮನೆಯ ಬೀಗ ಮುರಿದು ನಾಲ್ಕು ಕೆ.ಜಿ ಚಿನ್ನ ಮತ್ತು ಐದು ಲಕ್ಷ ರೂಪಾಯಿ ಕಳವು ಮಾಡಿ ವಿದೇಶಕ್ಕೆ ಹಾರಲು ಸಜ್ಜಾಗಿದ್ದ ಇಬ್ಬರು ಕಳ್ಳರನ್ನು ಪೊಲೀಸರು ಬುಧವಾರ ಮುಂಬೈ ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದಾರೆ.

ಚಿಕ್ಕಮಗಳೂರು ನಿವಾಸಿ ಸಾದಿಕ್ (44) ಹಾಗೂ ಆತನ ಸಹಚರ ಅಮ್ಜಾನ್ (24) ಎಂಬುವರನ್ನು ಮುಂಬಯಿ ವಿಮಾನ ನಿಲ್ದಾಣದಲ್ಲಿ ಬಂಧಿಸಿದ ಮಾಗಡಿ ಪೊಲಿಸರು ಗುರುವಾರ ಇಲ್ಲಿಗೆ ಕರೆತಂದಿದ್ದಾರೆ.

ಅರ್ಧ ತಾಸು ತಡವಾಗಿದ್ದರೂ ಆರೋಪಿಗಳು ವಿದೇಶಕ್ಕೆ ಹಾರುತ್ತಿದ್ದರು. ಅಷ್ಟರಲ್ಲಿ ಇಬ್ಬರನ್ನೂ ವಿಮಾನ ನಿಲ್ದಾಣದಲ್ಲಿಯೇ ಬಂಧಿಸಲಾಯಿತು ಎಂದು ಮಾಗಡಿ ಪೊಲೀಸರು ತಿಳಿಸಿದ್ದಾರೆ.

ಮಾಗಡಿಯ ಡಾ.ರಾಜ್‌ಕುಮಾರ್ ಮುಖ್ಯರಸ್ತೆಯಲ್ಲಿರುವ ವಾಸವಾಂಭ ಬಟ್ಟೆ ಹಾಗೂ ಗಿರವಿ ಅಂಗಡಿ ಮಾಲೀಕ ವೇಣುಗೋಪಾಲ ಗುಪ್ತಾ ಸೆ.22ರಂದು ಕುಟುಂಬ ಸಮೇತ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ಚನ್ನಪಟ್ಟಣಕ್ಕೆ ತೆರಳಿದ್ದರು. ಇದನ್ನು ಗಮನಿಸಿದ್ದ ಕಳ್ಳರು ಮನೆಯ ಮೇಲಿನ ಕೊಠಡಿಯ ಬೀಗ ಮುರಿದು ಒಳ ಪ್ರವೇಶಿಸಿದ್ದರು.



ವಾಸವಿ ದೇವಸ್ಥಾನದ ಖಜಾಂಚಿಯೂ ಆಗಿದ್ದ ಗುಪ್ತಾ ಅವರು ದೇವಸ್ಥಾನದ ಚಿನ್ನಾಭರಣ ಮತ್ತು ಗಿರವಿ ಚಿನ್ನಾಭರಣಗಳನ್ನು ಮನೆಯಲ್ಲಿ ಇಟ್ಟಿದ್ದರು. ಎಲ್ಲವೂ ಸೇರಿ ಒಟ್ಟು ನಾಲ್ಕು ಕೆ.ಜಿ. ಚಿನ್ನಾಭರಣದ ಜೊತೆ ಐದು ಲಕ್ಷ ರೂಪಾಯಿ ನಗದು ದೋಚಿ ಕಳ್ಳರು ಪರಾರಿಯಾಗಿದ್ದರು.

ಚನ್ನಪಟ್ಟಣದಿಂದ ಗುಪ್ತಾ ಕುಟುಂಬ ಅದೇ ದಿನ ರಾತ್ರಿ ಹಿಂದಿರುಗಿ ಬಂದಾಗ ಕಳ್ಳತನ ಬೆಳಕಿಗೆ ಬಂದಿತ್ತು. ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು ಪಟ್ಟಣದ ಪ್ರಮುಖ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಿದ್ದರು.

ಆರೋಪಿಗಳು ಕಳ್ಳತನ ಮಾಡುವ ಒಂದು ದಿನ ಮುಂಚೆ ನಕಲಿ ನಂಬರ್ ಪ್ಲೇಟ್ ಇದ್ದ ಎಸ್‌ಯುವಿ ಕಾರಿನಲ್ಲಿ ಮಾಗಡಿ ಪಟ್ಟಣದ ಪ್ರಮುಖ ಬಡಾವಣೆಗಳಲ್ಲಿ ಓಡಾಡಿದ್ದರು. ಭಾನುವಾರವೂ ಪಟ್ಟಣದಲ್ಲಿ ಓಡಾಡಿ ವಿದ್ಯುತ್ ಕಡಿತವಾಗುವುದನ್ನೇ ಕಾದಿದ್ದರು. ಸಿಸಿಟಿವಿ ಕ್ಯಾಮೆರಾ ಪರಿಶೀಲನೆ ವೇಳೆ ಈ ಮಾಹಿತಿ ಲಭ್ಯವಾಗಿದೆ.

ಕಳ್ಳತನ ಮಾಡಿದ ನಂತರ ಆರೋಪಿಗಳು ವಾಹನದಲ್ಲಿ ಚಿಕ್ಕಮಗಳೂರಿಗೆ ಮರಳಿದ್ದರು. ಮಾರ್ಗಮಧ್ಯೆ ಒಂದು ಕಡೆ ಚಹಾ ಕುಡಿಯಲು ಕಾರು ನಿಲ್ಲಿಸಿದ್ದರು. ಅಲ್ಲಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಆರೋಪಿಗಳ ಮುಖ ಸೆರೆಯಾಗಿತ್ತು. ದೃಶ್ಯಗಳನ್ನು ಗಮನಿಸಿದ ಪೊಲೀಸರಿಗೆ ಕಳ್ಳತನ ಮಾಡಿದ್ದು ಕುಖ್ಯಾತ ಕಳ್ಳ ಚಿಕ್ಕಮಗಳೂರಿನ ಸಾದಿಕ್ ಹಾಗೂ ಆತನ ಸಹಚರ ಅಮ್ಜಾನ್ ಎಂಬ ಮಾಹಿತಿ ಲಭ್ಯವಾಗಿತ್ತು.

ಮಾಗಡಿಯಲ್ಲಿ ಕಳ್ಳತನ ಮಾಡಿದ ಆರೋಪಿಗಳು ಚಿಕ್ಕಮಂಗಳೂರಿಗೆ ಹೋಗಿ ಅಲ್ಲಿಂದ ಮುಂಬಯಿಗೆ ತೆರಳಿದ್ದರು. ಮುಂಬೈಯಿಂದ ವಿದೇಶಕ್ಕೆ ಹಾರುವ ಯೋಜನೆ ಇತ್ತು. ಈ ಮಾಹಿತಿ ದೊರೆತ ತಕ್ಷಣ ಮಾಗಡಿ ಪೊಲೀಸರು ಮುಂಬಯಿಗೆ ಧಾವಿಸಿದ್ದರು. ಇನ್ನೂ ಅರ್ಧ ತಾಸು ತಡವಾಗಿದ್ದರೂ ಆರೋಪಿಗಳನ್ನು ಬಂಧಿಸಲು ಸಾಧ್ಯವಾಗುತ್ತಿರಲಿಲ್ಲ. ವಿಮಾನ ನಿಲ್ದಾಣದಲ್ಲಿಯೇ ಇಬ್ಬರನ್ನೂ ಬಂಧಿಸಿದರು.

ಸಾದಿಕ್ ಈ ಹಿಂದೆ ತಿಪಟೂರಿನಲ್ಲಿ ಕೂಡ ಮನೆ ಕಳ್ಳತನ ಮಾಡಿ 2 ಕೆ.ಜಿ ಚಿನ್ನಾಭರಣ ಕದ್ದು ವಿದೇಶಕ್ಕೆ ಹಾರಿದ್ದ. ಸಾದಿಕ್ ಹಾಗೂ ತಂಡ ಈಗಾಗಲೇ ಅನೇಕ ಕಡೆ ಕಳ್ಳತನ ಮಾಡಿದೆ. ಈತನ ಜೊತೆ ಇನ್ನೂ ಮೂವರು ಭಾಗಿಯಾಗಿರುವ ಮಾಹಿತಿ ಇದೆ. ಇನ್ನುಳಿದ ಆರೋಪಿಗಳಿಗಾಗಿ ಪೊಲೀಸರು ಹುಡುಕಾಟ ಮುಂದುವರೆಸಿದ್ದಾರೆ.

ಪ್ರಜಾವಾಣಿ ನವವರ್ಣ

ನೇರಳೆ ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಶುಕ್ರವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...
7338018541




ಅರುಣೋದಯ ಇನ್ಸಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್


ಚಂದ್ರ & ಗೆಳತಿಯರು


ಆರಾಧ್ಯ


ರಮ್ಯಾ & ಗೆಳತಿಯರು


ದೀಪಿಕಾ ವಿನಯ್



ಗಾಯತ್ರಮ್ಮ & ಅಪರ್ಣಾ ವಿಜಯ & ಗೆಳತಿಯರು


ಗೀತಾಂಜಲಿ


ಕನ್ನಡ ಜ್ಯೋತಿ ಮಹಿಳಾ ಸಂಘ


ಜ್ಯೋತಿ, ಲಕ್ಷ್ಮಿ




ಹೇಮಾ & ಗೆಳತಿಯರು


ವಾಣಿಶ್ರೀ & ತಂಡ


ಯಕ್ಷ



BSNL ಸಿಬ್ಬಂದಿ

ಇಂದಿನ ಅಧಿದೇವತೆ
ಸಿದ್ಧಿದಾತ್ರಿ




KSC ಅಪೆಕ್ಸ್ ಬ್ಯಾಂಕ್


ನಂದಶ್ರೀ & ಗೆಳತಿಯರು


ಅಶ್ವಿನಿ


ರಾಣಿ ಎಚ್ ಎಸ್


ರೂಪ


ಸುಮಾ, ಕವಿತಾ, ಲೀನಾ, ಶೋಭಾ

ಇಂದಿನ ಬಣ್ಣ - ನೇರಳೆ


ಜಮುನಾ & ಗೆಳತಿಯರು


ತ್ರಿವೇಣಿ & ಗೆಳತಿಯರು


ಲಕ್ಷ್ಮಿ & ಕುಟುಂಬ

ವಾರ್ತಾ ಇಲಾಖೆ


ಮಮತಾ & ಗೆಳತಿಯರು




ಪೂರ್ಣಿಮಾ & ಗೆಳತಿಯರು


LIC ಸಿಬ್ಬಂದಿ



ಆದೀಶ್ವರ್
ಎಲೆಕ್ಟ್ರೋ ವರ್ಲ್ಡ್
gadget for every budget!
VIJAYADASHAMI SALE
ON EVERY PURCHASE OF ₹3,000/- GET LUCKY DRAW COUPON & CHANCE TO WIN ₹7.10 CRORES WORTH PRIZES
EMI CARD EASY FINANCE
Pre-approved Loan up to 4 Lakhs • Repay easily • No documentation • Pre-approved offers • Nil foreclosure charges
AVAIL UPTO 36 MONTHS LONG TENURE EMI
LOWEST DOWNPAYMENT
LOWEST EMI
1 EMI FREE ON LG SONY Haier UPTO ₹25,000/-
SINGLE EMI FOR MULTIPLE PRODUCTS
VIJAYADASHAMI Deals
SHOP MIXER GRINDER + WET GRINDER + GAS STOVE @ JUST ₹70/- DOWNPAYMENT AND PAY BALANCE IN EASY EMI
MIXER COMBO
EXCELLA 3 JAR - 16085 + FRESH DRY IRON 1000W - 15945
MRP PRICE ₹4590 TOTAL COMBI AMOUNT ₹2450 Discount 47%
INDUCTION COMBO
INDUCTION COOKTOP RAPIDO CUTE 667-M + STORM FLAT TAWA 250-IB - 14037
MRP PRICE ₹4290 TOTAL COMBI AMOUNT ₹2100 Discount 51%
CHIMNEY COMBO
NEBULA CHIMNEY 60 CM + AYUSH 4 BR
MRP PRICE ₹22089 TOTAL COMBI AMOUNT ₹9990 Discount 55%
Haier AO Smith HAVELLS V-GUARD
WATER HEATER
FREE PIPE & INSTALLATION
3 Liters ₹3,490/- 15 Liters ₹7,790/- 25 Liters ₹8,990/-
EUREKA FORBES AO Smith HAVELLS LG pureit
RO WATER PURIFIER
SPECIAL PRICE ₹12,990/- ONWARDS
Haier SIDE BY SIDE REFRIGERATOR 602 Ltr. EMI ₹2,994/- UPTO ₹8,000/- CASH BACK ON YOUR CREDIT CARD EMI
LG Haier Whirlpool Godrej SAMSUNG PREMIUM FROST FREE REFRIGERATOR EMI ₹2,999/- ONWARDS
LG SIDE BY SIDE REFRIGERATOR EMI ₹3,994/- UPTO ₹10,000/- CASH BACK ON YOUR CREDIT CARD EMI
LG FROST FREE REFRIGERATOR 240 Ltr. EMI ₹1,999/- UPTO ₹2,500/- CASH BACK ON YOUR CREDIT CARD EMI
Haier BMR REFRIGERATOR 325 Ltr. EMI ₹1,994/- UPTO ₹6,000/- CASH BACK ON YOUR CREDIT CARD EMI
Whirlpool DIRECT COOL REFRIGERATOR 192 Ltr. EMI ₹999/- UPTO ₹1,000/- CASH BACK ON YOUR CREDIT CARD EMI
LG FRONT LOAD WASHING MACHINE 10 Kg EMI ₹1,999/- UPTO ₹10,000/- CASH BACK ON YOUR CREDIT CARD EMI
IFB FRONT LOAD WASHING MACHINE 8 Kg EMI ₹1,990/- UPTO ₹2,500/- CASH BACK ON YOUR CREDIT CARD EMI
Haier FRONT LOAD WASHING MACHINE 10.5 Kg EMI ₹1,994/- UPTO ₹7,000/- CASH BACK ON YOUR CREDIT CARD EMI
LG Haier Whirlpool Godrej BPL IFB TOP LOAD WASHING MACHINE 7 Kg EMI ₹999/- ONWARDS
LG DISH WASHER EMI ₹2,999/- UPTO ₹3,000/- CASH BACK ON YOUR CREDIT CARD EMI
Haier Whirlpool Godrej BPL SEMI-AUTOMATIC WASHING MACHINE 7 Kg SPECIAL PRICE ₹8,990/- ONWARDS
ಬೆಂಗಳೂರು
ಸಂಜಯನಗರ Ph : 9606977121 / 9731306764
ಬಾಗಲೂರು Ph : 080-35712968 /35712969 9731306702
ನೆಲಮಂಗಲ Ph 9731306692 / 9686680755
ಬಿಡದಿ 7702203254
ಕೋಣನಕುಂಟೆ Ph :9731306531
ಬೇಗೂರು 080-41499467/9731306604
ಆರ್.ಟಿ. ನಗರ 9731307264 080-23559977
ಹೊಸಕೋಟೆ 9731306767
ಹೆಣ್ಣೂರು ಮುಖ್ಯ ರಸ್ತೆ 080-48651500/48505043 9731306571
ಮಹದೇವಪುರ 080-48148975, 9148151731
ಉತ್ತರಹಳ್ಳಿ 9731306547 49587474, 49537575
ವೈಟ್ ಫೀಲ್ಡ್ 080-40984677 9513499851
ಯಲಹಂಕ 9731306702
ಹೆಬ್ಬಗೋಡಿ 9731307257 080-27849941
ರಾಜಾಜಿನಗರ ಪ್ರೀಮಿಯಮ್ ಸ್ಟೋರ್ 41610910, 9731306537
ತನಿಸಂದ್ರ 9731306763/32521747
ವಿಜಯನಗರ 9731306631
ಪೀಣ್ಯ 2ನೇ ಹಂತ ದಾಸರಹಳ್ಳಿ 9731306572 28393199/4199
ಮತ್ತಿಕೆರೆ 080-40974968 Ph :9731306641
ಹೆಚ್.ಎಸ್.ಆರ್. ಲೇಔಟ್ Ph :9731306550
ಬನಶಂಕರಿ Ph :9731306606 080-26691262/63
ಜಯನಗರ 26541050/51 9731306617
ಚಂದ್ರ ಲೇಔಟ್ 9731306558, 080 41503359
ನಾಗರಭಾವಿ 9731306616
ಮಾರತಹಳ್ಳಿ 080-42200050 9731306703
ಕೆಂಗೇರಿ 9731306634
ಚನ್ನಸಂದ್ರ 28613065/9731306766
ಸುಂಕದಕಟ್ಟೆ 9686680764 23288940/942
ರಾಜಾಜಿನಗರ Ph :9731306570 080-23134692
ವಿದ್ಯಾರಣ್ಯಪುರ 41721897/1861 9731306614
ಹೆಗ್ಗನಹಳ್ಳಿ 9591997257 080-28366565/66
ಹೆಚ್.ಆರ್.ಬಿ.ಆರ್. ಲೇಔಟ್ 41687449, 9731306596 25450871
ರಾಮಮೂರ್ತಿನಗರ 41638612/13 8861007307
ಪುಟ್ಟೇನಹಳ್ಳಿ 9591997265 080-40954615/16
ಹುಳಿಮಾವು 080-26483425 9731306625
LG SHOPPE ಮಾರತಹಳ್ಳಿ 42197907/08 8861002259
LG SHOPPE ರಾಜಾಜಿನಗರ Ph : 9731306671
LG SHOPPE ರಾಜರಾಜೇಶ್ವರಿನಗರ 9591997261
Regd. Off: M/s ADISHWAR INDIA LIMITED, #85, 59th Cross, 4th Block, Rajaji Nagar, Bangalore - 560010 Tel: 080-40733999, CIN: U51909KA1997PLC021681
• 0% Interest • Free Delivery • Exchange Offers • Spot Finance • Major Credit Cards Accepted • Home Delivery only within City Limits • 0% Interest, Offers, are subject to evaluation • Offers valid till stocks last • Products available without the offers also • Spot finance is available from Bajaj Finance • Terms &


ಆದೀಶ್ವರ್ ಎಲೆಕ್ಟ್ರೋ ವರ್ಲ್ಡ್
gadget for every budget!
ದಸರಾ ಮತ್ತು ದೀಪಾವಳಿ ಮಹೋತ್ಸವ
ವಿಜಯದಶಮಿ ಸೇಲ್
BUMPER PRIZE 2 BHK FLAT Worth ₹ 35 Lakhs
1 WINNER
1st PRIZE 10 CARS MARUTHI S-PRESSO CAR Worth ₹ 4.26 Lakhs
10 WINNERS
2nd PRIZE 100 BIKES HERO BIKE Worth ₹ 70,000/-
100 WINNERS
3rd PRIZE 1000 LED TV'S 40" HD LED TV Worth ₹ 25,500/-
1000 WINNERS
4th PRIZE 10000 3 PIECE NONSTICK KITCHEN SETS Worth ₹ 2,990/-
10000 WINNER
ON EVERY PURCHASE OF ₹ 3,000/- GET LUCKY DRAW COUPON & CHANCE TO WIN ₹ 7.10 CRORES
WORTH PRIZES
UPTO ₹ 25,000/- INSTANT CASH BACK ON CREDIT & DEBIT CARD EMI
UPTO ₹ 10,000/- CASH VOUCHER ON BAJAJ FINSERV FINANCE
SONY BRAVIA 7 XR Mini LED
1 EMI FREE
EMI ₹ 2,995/-
3 YEARS* WARRANTY
UPTO ₹ 12,500/- INSTANT CASH BACK ON YOUR CREDIT CARD EMI
55 XR Mini LED
Haier UHD 4K
EMI ₹ 1,994/-
3 YEARS* WARRANTY
UPTO ₹ 5,000/- CASH BACK ON YOUR CREDIT CARD EMI
55 UHD/4K TV
LG Life's Good OLED
2 EMI FREE
EMI ₹ 1,999/-
3 YEARS* WARRANTY
UPTO ₹ 12,500/- INSTANT CASH BACK ON YOUR CREDIT CARD EMI
55 OLED TV
LG Life's Good UHD 4K
EMI ₹ 1,999/-
3 YEARS* WARRANTY
UPTO ₹ 6,000/- CASH BACK ON YOUR CREDIT CARD EMI
65 UHD/4K TV
QLED
43 SPECIAL PRICE ₹ 33,490/-
32 SPECIAL PRICE ₹ 16,490/-
HOT DEAL
Panasonic UHD 4K
EMI ₹ 2,490/-
2 YEARS* WARRANTY
UPTO ₹ 6,000/- CASH BACK ON YOUR CREDIT CARD EMI
55 UHD/4K TV
Haier OLED
1 EMI FREE
EMI ₹ 3,790/-
3 YEARS* WARRANTY
UPTO ₹ 20,000/- INSTANT CASH BACK ON YOUR CREDIT CARD EMI
65 OLED TV
SONY BRAVIA 3 4K ULTRA HD
1 EMI FREE
EMI ₹ 2,990/-
3 YEARS* WARRANTY
UPTO ₹ 9,000/- CASH BACK ON YOUR CREDIT CARD EMI
75 4K ULTRA HD
SAMSUNG UHD 4K
EMI ₹ 1,990/-
2 YEARS* WARRANTY
UPTO ₹ 5,000/- INSTANT CASH BACK ON YOUR CREDIT CARD EMI
55 UHD/4K TV
VIJAYADASHAMI Deals
ONEPLUS SAMSUNG vivo oppo mi realme
iPhone 16 & 16 PLUS
Get EARPODS @ ₹ 999/-
₹ 5,000/-
INSTANT DISCOUNT
Redmi NOTE 13 SERIES
Get ₹ 2,000/-
INSTANT DISCOUNT
SAMSUNG Galaxy S24
8GB/128GB ₹ 59,999/-
8GB/256GB ₹ 64,999/-
8GB/512GB ₹ 74,999/-
Special Discount ₹ 15,000/-
vivo V40e
NOW AVAILABLE
ONEPLUS
11 SERIES 8GB/128GB ₹ 18,000/-
NORD 3 8GB/128GB ₹ 14,000/-
INSTANT DISCOUNT
oppo F27
Get ₹ 2,000/-
INSTANT DISCOUNT
ಚನ್ನಪಟ್ಟಣ ಅರ್ಹಣ ಜ್ಯುವೆಲರ್ಸ್ ಬಿಲ್ಡಿಂಗ್, ಕೆನರಾ ಬ್ಯಾಂಕ್ ಪಕ್ಕ, ಬಿ.ಎಂ. ರಸ್ತೆ PH : 9036593446 / 9036593447
ಶಿರಸಿ ಸಿ.ಪಿ. ಬಜಾರ್ ಮುಖ್ಯ ರಸ್ತೆ, ದೇವೀಕೆರೆ PH : 9591997260, 9731306569
ಕೋಲಾರ ಶಾರದಾ ಟಾಕೀಸ್ ರಸ್ತೆ ದೊಡ್ಡಪೇಟೆ, ಕಠಾರಿಪಾಳ್ಯ 9731306635/9731306574 08152-467397
ಬೆಳಗಾವಿ ಕೊಲ್ಹಾಪುರ ವೃತ್ತದ ಹತ್ತಿರ, ನೆಹರು ನಗರ, ಪಿ.ಬಿ ರಸ್ತೆ. 0831 4215241 / 42, 9731306717 / 9731306713
ಬಳ್ಳಾರಿ ವಾಸವಿ ಶಾಲೆ ಎದುರು, Ph : 08392-242330 / 337, 9731306742 / 9731331684
ಚಿತ್ರದುರ್ಗ ಶ್ರೀನಿವಾಸ ಮ್ಯಾನ್ಷನ್, ಹೊಳಲ್ಕೆರೆ ರಸ್ತೆ, 08194-224224, 9686446883
ದಾವಣಗೆರೆ ಅಶೋಕ ರಸ್ತೆ, 08192-233626/27, 9731306633 / 6712
ತಿಪಟೂರು ರೈಲ್ವೇ ಸ್ಟೇಷನ್ ರಸ್ತೆ, Ph : 08134-250104/304, 9686680758 / 9731306552
ತುಮಕೂರು ವಿಶ್ವವಿದ್ಯಾಲಯ ಎದುರು, Ph : 0816-4021031, 9731306549 / 9591997270
ಕುಣಿಗಲ್ ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟಾಪ್ ಎದುರು 08132 - 221901 / 221902 97313 06663
ಯಾದಗಿರಿ ಮುದ್ ನಾಳ್ ಲೇಔಟ್ ಮುಖ್ಯ ರಸ್ತೆ, ಸಿಂಡಿಕೇಟ್ ಬ್ಯಾಂಕ್ ಎದುರು Ph : 08173/251779/759 8861002260
ಮಂಡ್ಯ 100 ಅಡಿ ರಸ್ತೆ, ವಿಜಯ ಬ್ಯಾಂಕ್ ಎದುರು 08232406100/08232406200 9513599861/7349609274
ಗೋಣಿಕೊಪ್ಪ ನಾರ್ಥ್ ಪಾಯಿಂಟ್, ಮಹಾಲಕ್ಷ್ಮಿ ದೇವಸ್ಥಾನದ ಎದುರು 7702770314/7702770353
ಕೊಪ್ಪಳ ಕೆಹೆಚ್ ಬಿ ಕಾಲೋನಿ ಐಡಿಬಿಐ ಬ್ಯಾಂಕ್ ಎದುರು, ಹೊಸಪೇಟೆ ರಸ್ತೆ 08539 221931/32, 9731306645
ಬೀದರ್ ಅಕ್ಷಯ ಕಾಂಪ್ಲೆಕ್ಸ್ ಹೊಸ ಬಸ್ ನಿಲ್ದಾಣ ಹತ್ತಿರ 08482-226800/01, 9513499863
ಕಲಬುರ್ಗಿ ತಿಮ್ಮಾಪುರಿ ಸರ್ಕಲ್ ಹತ್ತಿರ ಕನ್ನಡ ಭವನ ಎದುರು, ಎಸ್.ವಿ.ಪಿ.ಸರ್ಕಲ್ Ph 08472-227556, 9108023816.
ಕೆ.ಆರ್. ನಗರ ಶ್ರೀ ವೆಂಕಟೇಶ್ವರ ಚಿತ್ರಮಂದಿರದ ಎದುರು ಹುಣಸೂರು ಸರ್ಕಲ್, ಮೈಸೂರು ರಸ್ತೆ 08223295855/66 9731306715
ಚನ್ನರಾಯಪಟ್ಟಣ ಬಿ.ಎಂ. ರಸ್ತೆ, ಪುರಸಭೆ ಎದುರು ಹಳೇ ಬಸ್ ನಿಲ್ದಾಣ 08176253312 / 295256, 9513499855
ವಿಜಯಪುರ ಲಿಂಗದ್ ಗುಡಿ ರಸ್ತೆ, ಪಾರೇಖ್ ಸಿಗ್ನೇಚರ್ ಮಾಲ್ ಪಕ್ಕ 9353907691 / 9606865996
ಸಿಂಧನೂರ್ ನಟರಾಜ ಕಾಲೋನಿ, ಕೆಎಸ್ಆರ್‌ಟಿಸಿ ಬಸ್ ಸ್ಟ್ಯಾಂಡ್ ಹತ್ತಿರ 08535-222254, 9731306673 / 9731306672
ಕುಶಾಲನಗರ ಬಿಎಂ ರಸ್ತೆ, ಸಿಟಿ ಸೆಂಟರ್ ಎದುರು 9591997262/9591997263
ಚಿಕ್ಕಮಗಳೂರು ಐ.ಜಿ. ರಸ್ತೆ. Ph : 08262 - 239944 / 45, 9963998358, 9963998365
ಶಹಾಪೂರ ಬೀದರ್-ಬೆಂಗಳೂರು ರಸ್ತೆ ಬುದ್ಧನಗರ್ ಪಾರ್ಕ್ ಮುಂಭಾಗ, 9513499858 08479-240565,244565
ತೊಕ್ಕೊಟ್ಟು 0824-2956565 9731306621
ಮೈಸೂರು 5 ಸ್ಟೋರ್ಸ್
ಕುವೆಂಪುನಗರ ಅಕ್ಷಯ ಭಂಡಾರ Ph : 0821-2343705/6, 9731306587
ಹಿನ್‌ಕಲ್ ಹುಣಸೂರು ಮುಖ್ಯ ರಸ್ತೆ, ಫ್ಲೈ ಓವರ್ ಕೆಳಗೆ Ph. 0821-4852733 / 4851773, 8861007297
ಉದಯಗಿರಿ ಮಹದೇವಪುರ ಮುಖ್ಯ ರಸ್ತೆ, BSNL ಕಛೇರಿ ಸಿಗ್ನಲ್ ಹತ್ತಿರ Ph : 0821-2457860/50, 8861007304/9731306653
ಜೆ.ಪಿ ನಗರ ನಾಚನಹಳ್ಳಿ, ಕಿಲ್ಲೆ ಮೊಹಲ್ಲಾ ಮೋರ್ ಸೂಪರ್ ಮಾರ್ಕೆಟ್ ಹತ್ತಿರ, 8861007309 / 886107306
ಡಾ. ರಾಜ್‌ಕುಮಾರ್ ರಸ್ತೆ ಟೀಚರ್ಸ್ ಲೇಔಟ್, (ಕಾವೇರಿ ಸರ್ಕಲ್) 8861002262/8861002263
Free Gifts depends on Brands & Selective Models • Products shown here are only indicative • Exchange Rates Conditions apply • Finance at the sole discretion of the financiers • Offers not applicable on Sony & Samsung.
HELPLINE 080 - 408 33 999
Shop Online @ www.adishwarestore.com


FINANCE BONANZA
Upto ₹10,000 ಕ್ಯಾಶ್ ಬ್ಯಾಕ್*
CASH BACK BONANZA
Upto ₹26,000 ಕ್ಯಾಶ್ ಬ್ಯಾಕ್*
BIGGEST Deepavali SALE
UPTO 70% OFF
ಗಿರಿಯಾಸ್
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು 1971 ರಿಂದ
ಉಚಿತ* FIRE-BOLTT SMART CALLING WATCH WORTH ₹20000
EXCHANGE DHAMAKA
Upto ₹65,000
ವರೆಗೂ ಕಡಿತ ಹಳೆಯ ಎಲೆಕ್ಟ್ರಾನಿಕ್ಸ್ ಗೃಹೋಪಯೋಗಿ ವಸ್ತುಗಳ, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳು, ಎಕ್ಸ್‌ಚೇಂಜ್ ಮೇಲೆ
ಮಳಿಗೆಗಳು 10.30AM – 10PM ವರೆಗು ತೆರೆದಿರುತ್ತದೆ (11ನೇ ಅಕ್ಟೋಬರ್ – 3ನೇ ನವೆಂಬರ್ 2024)
FINANCE POWERED BY Groww 0% EMI Upto 3,500 Cash Back* MIN PRODUCT VALUE ₹10,000
1 ಇ.ಎಮ್.ಐ ಉಚಿತ*
ಕೇವಲ ಪಾವತಿಸಿ ₹1 ಮನೆಗೆ ತೆಗೆದುಕೊಂಡು ಹೋಗಿ*
HDFC BANK FESTIVE TREATS 10% INSTANT DISCOUNT ON CC & DC EMI* MIN SWIPE ₹17,500 MAX CASH BACK UPTO ₹3,000
YES BANK 5% INSTANT CASHBACK ON CC EMI* MIN SWIPE ₹20000 MAX CASH BACK UPTO ₹2000
DBS BANK 5% INSTANT CASHBACK ON CC EMI* MIN SWIPE ₹15000 MAX CASH BACK UPTO ₹2500
ASSURED BUYBACK UPTO 70% On New Purchase*
Redmi REDMI 13 5G 6+128 EFFECTIVE PRICE ₹11,800 (PRICE AFTER CASH BACK) EMI STARTS FROM ₹1,422 ಉಚಿತ: ₹1,599* ಮೌಲ್ಯದ POWERBANK OR BT NECKBAND
OPPO SMARTPHONES 0 INTEREST ON EMIs 0 DOWN PAYMENT 0 PROCESSING FEES # FESTIVE CELEBRATION BUY NOW ಉಚಿತ: EARBUDS WORTH ₹4999*
vivo Special Navarti Offers PAY ₹10 And own a vivo smartphone ಉಚಿತ: EARBUDS WORTH ₹4999*
iPhone iPhone 16 EFFECTIVE PRICE ₹74,900 (PRICE AFTER CASH BACK) EXCHNAGE BONUS ₹6000 EMI STARTS FROM ₹2,825 ಉಚಿತ: ANC EARBUDS OR WIRELESS MAGSAFE POWER BANK WORTH ₹6499*
SAMSUNG Galaxy S24 Series Galaxy AI is here own now at ₹2625/- month* EFFECTIVE PRICE ₹59,890 (PRICE AFTER CASH BACK) ಉಚಿತ: ANC EARBUDS OR WIRELESS MAGSAFE POWER BANK WORTH ₹6499*
DELL INS 15 10% CASH BACK Ryzen 3-7320U 8GB 512GB SSD 15.6 FHD Win 11 MSO 21 OFFER PRICE ₹31,990 EMI ₹2,666 MRP ₹49,395 ಉಚಿತ: 32GB PENDRIVE + W/L MOUSE WORTH ₹1299*
hp VICTUS 10% CASH BACK RYZEN 5, 5600H 512GB SSD, 16GB 4GB NVIDIA RTX 3050 15.6FHD 144 HZ WIN 11 MSO21 OFFER PRICE ₹60,990 EMI ₹5,083 MRP ₹84,638 ಉಚಿತ: SMART WATCH WORTH ₹7,999*
MacBook EMI STARTS FROM ₹3,031 UPTO ₹10000 CASHBACK ಉಚಿತ: 1 YEAR EXTENDED WARRANTY WORTH ₹9999*
Lenovo SLIM 3 10% CASH BACK RYZEN 5 7520U 16GB, 512GB SSD INT GFX RADEON 610M 15.6" FHD WIN 11 MSO 21 OFFER PRICE ₹44,990 EMI ₹3,749 MRP ₹69,890 ಉಚಿತ: 32GB PENDRIVE AND W/L MOUSE WORTH ₹1,299*
UPTO 70% OFF ON ACCESSORIES
LG 77 ಓಎಲ್ಇಡಿ EVO AI C4 4K SMART TV OLED77C46LA EMI ₹2,999 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
SAMSUNG 65 ಓಎಲ್ಇಡಿ 4K SMART TV 65S90D ಇ.ಎಮ್.ಐ ₹3,990 ಉಚಿತ: ₹35900 ಮೌಲ್ಯದ SAMSUNG 43 SMART FHD TV
SONY 65 OLED 4K ULTRA HD HIGH DYNAMIC RANGE (HDR) SMART TV (GOOGLE TV) K-65XR80 ಇ.ಎಮ್.ಐ ₹6,500
Panasonic 55 4K ULTRA HD SMART LED GOOGLE TV ಇ.ಎಮ್.ಐ ₹2,455
NVY PRIDE OF INDIA LOWEST PRICE CHALLENGE 4K ಎಲ್ಇಡಿ 52% OFF NVY Official LED partner of RCB
Model | Price | EMI
43 4K SMART | ₹18,990 | ₹1,582
55 4K SMART | ₹29,490 | ₹2,457
LG 650 Ltrs CONVERTIBLE SIDE BY SIDE REFRIGERATOR WITH PREMIUM GLASS DOOR, SMART INVERTER COMPRESSOR, HYGIENE FRESH+™ GL-B257DBM3 ಇ.ಎಮ್.ಐ ₹3,999 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Haier 630 Ltrs DOUBLE DOOR SIDE BY SIDE REFRIGERATOR APPLIANCES, EXPERT INVERTER TECHNOLOGY ಇ.ಎಮ್.ಐ ₹2,994 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Whirlpool 411L 2 Star Convertible Frost Free Double-Door Refrigerator ಇ.ಎಮ್.ಐ ₹3,733 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
IFB 8 ಕೆಜಿ ಫ್ರಂಟ್ ಲೋಡಿಂಗ್ ಇ.ಎಮ್.ಐ ₹3,274 ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Panasonic 7 ಕೆಜಿ ಟಾಪ್ ಲೋಡಿಂಗ್ ಇ.ಎಮ್.ಐ ₹1,399
Haier 22 ಲೀ ಕನ್‌ವೆಕ್ಷನ್ ಮೈಕ್ರೋವೇವ್ ಇ.ಎಮ್.ಐ ₹884
DAIKIN 1.0 TON 3 STAR INVERTER SPLIT AC ಇ.ಎಮ್.ಐ ₹3,558
OFFER VALID TILL STOCK LAST | OFFER VALID TILL STOCK LAST
Prestige MIXER GRINDER ENDURA 1000W+ PRESSURE COOKER SS POPULAR 3 LTR MILTON CASSEROLE MARVEL JR GIFT SET OFFER PRICE ₹8,590 MRP ₹13,890
EUREKA FORBES WATER PURIFIERS AQUAGUARD BLAZE INSTA RO+UV+TA HOT & AMB + VACUUM CLEANER CLEAN SWEEP+ Lifelong MASSAGER GUN MASSAGER (LLGM09, BLACK) OFFER PRICE ₹31,990 MRP ₹56,499
KAFF CHIMNEY MAINZ 60-DC + HOB HBR 604A + KENSTAR 3 LTRS INSTANT GEYSER OFFER PRICE ₹34,990 MRP ₹60,790
VIJAYALAKSHMI WET GRINDER PYRAMIDS+ IRON BOX ECO DRY IRON+ Prestige NON STICK COOKWARE DLX GRANITE BYK OFFER PRICE ₹6,190 MRP ₹11,495
SONY AUDIO SOUND BAR HT-S20 - 5.1CH, 400W, DOLBY DIGITAL. OFFER PRICE ₹13,990 MRP ₹23,990
GIRIAS THE CONSUMER DURABLE PEOPLE Since 1971
ಅಂದ್ರಹಳ್ಳಿ 95918 35070 | ಅತ್ತಿಬೆಲೆ 99009 99009 77747 | ಆರ್.ಟಿ.ನಗರ 91080 65665 | ಆನೇಕಲ್ 9036289556 | ಇಂದಿರಾನಗರ 9035499255 | ಉತ್ತರಹಳ್ಳಿ 90362 89563 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 | ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗುಬ್ಬಿ 9035027688 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬಾಗೇಪಲ್ಲಿ 9036289562 | ಬ್ರಿಗೇಡ್ ರಸ್ತೆ 9035499066 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಬಸವನಗುಡಿ 90354 99244 | ಭಾರ್ತಿಯಾ ಮಾಲ್ 70900 00981 | ಮಾದನಾಯಕನಹಳ್ಳಿ 90362 89550 | ಮತ್ತಿಕೆರೆ 90352 22377 | ಮಲ್ಲೇಶ್ವರಂ 90354 99233 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 | ಶಿರಾ 9035023188 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633 | ಹೊಸೂರು ರಸ್ತೆ 9035499022
STORE LOCATOR
*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರಾಂಡ್‌ಗಳು ಮತ್ತು ಮಾಡೆಲ್‌ಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 ಇಎಂಐ ರಿಯಾಯಿತಿ. ರೂ.10000 ವರೆಗೆ ಬಜಾಜ್ ಕ್ಯಾಶ್ ಬ್ಯಾಕ್ / ವೋಚರ್‌ಗಳು ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ. 3 ಇಎಂಐ ಅನ್ನು ತೆರವುಗೊಳಿಸಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆ / ಇಎಫ್‌ಎಲ್ ವ್ಯಾಲೆಟ್‌ಗೆ ಕ್ರೆಡಿಟ್ ಮಾಡಲಾಗುತ್ತದೆ. ಆಯ್ಕೆಮಾಡಿದ ಮೊಬೈಲ್‌ಗಳಲ್ಲಿ 70% ವರೆಗೆ ಖಚಿತವಾದ ಮರುಖರೀದಿಯು ಮಾನ್ಯವಾಗಿರುತ್ತದೆ.*ಉತ್ತಮ ಕೆಲಸದ ಸ್ಥಿತಿಯಲ್ಲಿರಲು ಎಂ.ಆರ್.ಪಿ ಮತ್ತು ಉತ್ಪನ್ನದ ಮೇಲೆ ಮಾನ್ಯವಾದ ವಿನಿಮಯ ಕೊಡುಗೆ. ಹಳೆಯ ಉತ್ಪನ್ನದ ಸ್ಥಿತಿಯನ್ನು ಆಧರಿಸಿ ವಿನಿಮಯ ಮೌಲ್ಯವು ಭಿನ್ನವಾಗಿರುತ್ತದೆ.
164 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ ಇಂದಿನಿಂದ: ಮಯಂಕ್ ಬಳಗಕ್ಕೆ ಮಧ್ಯಪ್ರದೇಶ ಸವಾಲು

ದಶಕದ ಬರ ನೀಗಿಸುವತ್ತ ಕರ್ನಾಟಕ ಚಿತ್ತ



ಮಯಂಕ್ ಅಗರವಾಲ್

ಪ್ರಜಾವಾಣಿ ವಾರ್ತೆ

ಇಂದೋರ್: ಒಂದು ದಶಕದಿಂದ ರಣಜಿ ಟ್ರೋಫಿ ಗೆಲುವಿಗಾಗಿ ಪರಿತಪಿಸಿರುವ ಕರ್ನಾಟಕ ತಂಡವು ಶುಕ್ರವಾರ ಮಧ್ಯಪ್ರದೇಶದ ಎದುರು ಈ ಸಲದ ಋತುವಿನಲ್ಲಿ ಅಭಿಯಾನ ಆರಂಭಿಸಲಿದೆ.

ಯುವ ಆಟಗಾರರು ಹೆಚ್ಚಿನ ಸಂಖ್ಯೆಯಲ್ಲಿರುವ ತಂಡವನ್ನು ಅನುಭವಿ ಮಯಂಕ್ ಅಗರವಾಲ್ ಮುನ್ನಡೆಸುತ್ತಿದ್ದಾರೆ. ಮನೀಷ್ ಪಾಂಡೆ ಉಪನಾಯಕರಾಗಿದ್ದಾರೆ. ಇಬ್ಬರೂ ದಶಕದ ಹಿಂದೆ ಎರಡು ಸಲ ರಣಜಿ ಟ್ರೋಫಿ ಜಯದ ಸಿಹಿಯನ್ನು ಉಂಡವರು. ಆದರೆ ಅಲ್ಲಿಂದ ಈಚೆಗೆ ಹಲವು ಬಾರಿ ನಾಕೌಟ್ ಹಂತದಲ್ಲಿಯೇ ತಂಡ ಎಡವಿರುವ ಕಹಿಯನ್ನೂ ಇವರಿಬ್ಬರೂ ಅನುಭವಿಸಿದ್ದಾರೆ.

ಭಾರತ ತಂಡವನ್ನು ಪ್ರತಿನಿಧಿಸಿರುವ ಅನುಭವ ಹೊಂದಿರುವ ಮಯಂಕ್ ಮತ್ತು ಮನೀಷ್ ಅವರು ದೇಶಿ ಕ್ರಿಕೆಟ್‌ಗೆ ವಿದಾಯ ಹೇಳುವ ಮುನ್ನ ಮತ್ತೊಂದು ಬಾರಿ ರಣಜಿ ಕಿರೀಟ ಧರಿಸುವ ಛಲದಲ್ಲಿದ್ದಾರೆ.

ಕಳೆದ ಹತ್ತು ವರ್ಷಗಳಲ್ಲಿ ಕರ್ನಾಟಕ ತಂಡವು ವಿಜಯ ಹಜಾರೆ ಟ್ರೋಫಿ (2017–18, 2019–20) ಮತ್ತು ಸೈಯದ್ ಮುಷ್ತಾಕ್ ಅಲಿ ಟ್ರೋಫಿ (2018–19) ಗಳನ್ನು ಜಯಿಸಿದೆ. ಆದರೆ 'ದೇಶಿ ಕ್ರಿಕೆಟ್ ರಾಜ'ನನ್ನು ಒಲಿಸಿಕೊಳ್ಳಲು ಸಾಧ್ಯವಾಗಿಲ್ಲ. ಈ ಅವಧಿಯಲ್ಲಿ 3 ಕ್ವಾರ್ಟರ್‌ಫೈನಲ್ ಮತ್ತು 3 ಸೆಮಿಫೈನಲ್ ಪ್ರವೇಶಿಸಿತ್ತು. ಆದರೆ ಒಂದು ಬಾರಿಯೂ ಫೈನಲ್ ಪ್ರವೇಶಿಸಲಿಲ್ಲ.

ಈ ಸಲ ಸಿ ಗುಂಪಿನಲ್ಲಿ ಆಡುತ್ತಿರುವ ಕರ್ನಾಟಕ ತಂಡವು ಮಧ್ಯಪ್ರದೇಶ, ಕೇರಳ, ಬಿಹಾರ, ಬಂಗಾಳ, ಉತ್ತರಪ್ರದೇಶ, ಪಂಜಾಬ್ ಮತ್ತು ಹರಿಯಾಣ ತಂಡಗಳನ್ನು ಎದುರಿಸಲಿದೆ. ಇದರಲ್ಲಿ ಯಾವುದೇ ತಂಡವನ್ನೂ ಹಗುರವಾಗಿ ಪರಿಗಣಿಸುವಂತಿಲ್ಲ. ಪ್ರತಿಯೊಂದು ಪಂದ್ಯವೂ ಮಯಂಕ್ ಬಳಗಕ್ಕೆ ಸವಾಲಾಗಲಿದೆ.



ಶುಭಂ ಶರ್ಮಾ

ತಂಡದಲ್ಲಿ ಮಯಂಕ್, ಮನೀಷ್ ಬಿಟ್ಟರೆ, ಶ್ರೇಯಸ್ ಗೋಪಾಲ್ ಹೆಚ್ಚು ಅನುಭವಿ ಆಟಗಾರರಾಗಿದ್ದಾರೆ. ವೇಗಿ ವಿದ್ವತ್ ಕಾವೇರಪ್ಪ ಗಾಯಗೊಂಡಿರುವುದರಿಂದ ಮೊದಲೆರಡು ಪಂದ್ಯಗಳಲ್ಲಿ ಆಡುವುದಿಲ್ಲ. ಪ್ರಸಿದ್ಧಕೃಷ್ಣ, ವೈಶಾಖ ವಿಜಯಕುಮಾರ್, ಆರ್. ಕೌಶಿಕ್ ಅವರು ವೇಗದ ವಿಭಾಗದ ಹೊಣೆ ನಿಭಾಯಿಸುವರು. ಸ್ಪಿನ್ ವಿಭಾಗದಲ್ಲಿ ಶ್ರೇಯಸ್ ಅವರೊಂದಿಗೆ ಆಲ್‌ರೌಂಡರ್ ಹಾರ್ದಿಕ್ ರಾಜ್ ಜೊತೆಗೂಡುವ ಸಾಧ್ಯತೆ ಇದೆ. ವಿಕೆಟ್‌ಕೀಪಿಂಗ್ ಹೊಣೆಯು ಸುಜಯ್ ಸತೇರಿ ಅಥವಾ ಲವನೀತ್ ಸಿಸೊಡಿಯಾ ಅವರಲ್ಲಿ ಒಬ್ಬರಿಗೆ ದಕ್ಕುವುದು ಖಚಿತ. ಮಯಂಕ್, ಮನೀಷ್, ನಿಕಿನ್ ಜೋಸ್ ಹಾಗೂ ದೇವದತ್ತ ಪಡಿಕ್ಕಲ್ ಅವರು ಲಯ ಕಾಪಾಡಿಕೊಳ್ಳುವುದು ಮಹತ್ವದ್ದಾಗಲಿದೆ. ಹೊಸಪ್ರತಿಭೆಗಳಾದ ಮೊಹಸಿನ್ ಖಾನ್, ಅಭಿಲಾಶ್ ಶೆಟ್ಟಿ, ಹೋದ ಬಾರಿ ಆಡಿದ್ದ ಕಿಶನ್ ಬೆದರೆ ಮತ್ತು ವಿದ್ಯಾಧರ್ ಪಾಟೀಲ ಅವರಿಗೆ ಮೊದಲ ಪಂದ್ಯದಲ್ಲಿ ಅವಕಾಶ ಸಿಗುವುದು ಖಚಿತವಿಲ್ಲ.

ಶುಭಂ ಶರ್ಮಾ ನಾಯಕತ್ವದ ಮಧ್ಯಪ್ರದೇಶ ತಂಡವೂ ಶುಭಾರಂಭದ ನಿರೀಕ್ಷೆಯಲ್ಲಿದೆ. ಬ್ಯಾಟರ್ ರಜತ್ ಪಾಟೀದಾರ್, ಆಲ್‌ರೌಂಡರ್ ವೆಂಕಟೇಶ್ ಅಯ್ಯರ್, ವೇಗಿ ಆವೇಶ್ ಖಾನ್, ಕುಲವಂತ್ ಖೆಜ್ರೊಲಿಯಾ, ಯಶ್ ದುಬೆ ಅವರ ಬಲವಿರುವುದರಿಂದ ತವರಿನ ಅಂಗಳದಲ್ಲಿ ಮೇಲುಗೈ ಸಾಧಿಸುವ ವಿಶ್ವಾಸದಲ್ಲಿದೆ.

ಪಂದ್ಯ ಆರಂಭ: ಬೆಳಿಗ್ಗೆ 9.30

ಪ್ರಮುಖ ಅಂಶಗಳು

- ಮಯಂಕ್ ಅಗರವಾಲ್ ಇದೇ ಮೊದಲ ಸಲ ಮಧ್ಯಪ್ರದೇಶ ಎದುರು ನಾಯಕತ್ವ ವಹಿಸಲಿದ್ದಾರೆ.
- ಇಲ್ಲಿಯವರೆಗೂ 14 ಪ್ರತ್ಯೇಕ ತಂಡಗಳ ಎದುರು ನಾಯಕತ್ವ ವಹಿಸಿರುವ ಮಯಂಕ್ ಅಗರವಾಲ್
- ಮನೀಷ್ ಪಾಂಡೆ ಅವರು ಇನ್ನು 568 ರನ್ ಗಳಿಸಿದರೆ ರಣಜಿ ಟ್ರೋಫಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಕರ್ನಾಟಕದ ಆಟಗಾರನಾಗುವರು. ಬ್ರಿಜೇಷ್ ಪಟೇಲ್ (7126) ದಾಖಲೆ ಮುರಿಯುವರು
- ಮನೀಷ್ ಪಾಂಡೆ ಇನ್ನು 4 ಶತಕ ಗಳಿಸಿದರೆ, ಬ್ರಿಜೇಷ್ ಪಟೇಲ್ ಅವರ 26 ಶತಕಗಳ ದಾಖಲೆ ಸರಿಗಟ್ಟುವರು
- ದೇವದತ್ತ ಪಡಿಕ್ಕಲ್ 17 ರನ್ ಗಳಿಸಿದರೆ ರಣಜಿ ಕ್ರಿಕೆಟ್‌ನಲ್ಲಿ 2 ಸಾವಿರ ರನ್ ಗಳಿಸಿದ ಆಟಗಾರನಾಗುವರು
- 2019–20ರಲ್ಲಿ ಶಿವಮೊಗ್ಗದಲ್ಲಿ ಕರ್ನಾಟಕ–ಮಧ್ಯಪ್ರದೇಶ ಮುಖಾಮುಖಿಯಾಗಿದ್ದವು. ಡ್ರಾ ಆಗಿದ್ದ ಪಂದ್ಯದಲ್ಲಿ ಮಧ್ಯಪ್ರದೇಶ ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಿತ್ತು.
- ಕರ್ನಾಟಕ ತಂಡವು ರಣಜಿ ಇತಿಹಾಸದಲ್ಲಿ 8 ಸಲ ಚಾಂಪಿಯನ್, 6 ಬಾರಿ ರನ್ನರ್ಸ್ ಅಪ್ ಆಗಿದೆ. ಮಧ್ಯಪ್ರದೇಶ 1 ಸಲ ಚಾಂಪಿಯನ್.

ಬಲಾಬಲ

ಪಂದ್ಯ	8
ಕರ್ನಾಟಕ ಜಯ	2
ಮಧ್ಯಪ್ರದೇಶ ಜಯ	1
ಡ್ರಾ	5

ತಂಡಗಳ ಫಲಿತಾಂಶ

ತಂಡ	ಪಂದ್ಯ	ಜಯ	ಸೋಲು	ಡ್ರಾ
ಕರ್ನಾಟಕ	470	213	71	186
ಮಧ್ಯಪ್ರದೇಶ	356	93	72	191

ಅಂಕಿ ಸಂಖ್ಯೆ: ಚನ್ನಗಿರಿ ಕೇಶವಮೂರ್ತಿ

ನಡಾಲ್ ವಿದಾಯ ಘೋಷಣೆ

ಡೇವಿಸ್ ಕಪ್ ಫೈನಲ್ ನಂತರ ನಿವೃತ್ತಿಗೆ ರಫಾ ನಿರ್ಧಾರ



ಪ್ಯಾರಿಸ್ (ರಾಯಿಟರ್ಸ್): ಆವೆ ಅಂಕಣದ ಸಾಮ್ರಾಟ (ಕಿಂಗ್ ಆಫ್ ಕ್ಲೇ) ಎಂದೇ ಹೆಸರಾದ ಸ್ಪೇನ್‌ನ ಟೆನಿಸ್ ದಿಗ್ಗಜ ರಫೆಲ್ ನಡಾಲ್ ಅವರು ಮುಂದಿನ ತಿಂಗಳ ಡೇವಿಸ್ ಕಪ್ ನಂತರ ತಮ್ಮ ಅತ್ಯಮೋಘ ಟೆನಿಸ್ ಜೀವನಕ್ಕೆ ಭಾವನಾತ್ಮಕ ವಿದಾಯ ಹೇಳಲಿದ್ದಾರೆ. 22 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದಿರುವ ನಡಾಲ್ ಗುರುವಾರ ತಮ್ಮ ನಿರ್ಧಾರ ಪ್ರಕಟಿಸಿದರು.

ಅವರ ಯಶಸ್ವಿ ಟೆನಿಸ್ ಬದುಕಿಗೆ ಪದೇ ಪದೇ ಕಾಡುತ್ತಿದ್ದ ನೋವು, ಗಾಯಗಳು ಸಮಸ್ಯೆ ತಂದೊಡ್ಡಿದ್ದವು. 23 ವರ್ಷಗಳ ಟೆನಿಸ್ ಬದುಕಿನಲ್ಲಿ ಅವರು ದಾಖಲೆಯ 14 ಫ್ರೆಂಚ್ ಓಪನ್ ಸಿಂಗಲ್ಸ್ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ. ಬೆನ್ನಿನ ಕೆಳಭಾಗದ ನೋವಿಗೆ ಅವರು ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಯಿತು. ಈ ವರ್ಷ ನಿವೃತ್ತರಾಗುವುದಾಗಿ 38 ವರ್ಷ ವಯಸ್ಸಿನ ನಡಾಲ್ ವರ್ಷದ ಆರಂಭದಲ್ಲೇ ಸುಳಿವು ನೀಡಿದ್ದರು.

ಡೇವಿಸ್ ಕಪ್ ಫೈನಲ್ ಸ್ಪೇನ್ ಮಲಗಾದಲ್ಲಿ ನವೆಂಬರ್ 19 ರಿಂದ 24ರವರೆಗೆ ನಡೆಯಲಿದ್ದು, ನಡಾಲ್ ಅವರು ಸ್ಪೇನ್ ತಂಡಕ್ಕೆ ಅಚ್ಚರಿಯ ಆಯ್ಕೆಯಾಗಿದ್ದಾರೆ. ಜುಲೈನಲ್ಲಿ ಕೊನೆಯ ಬಾರಿ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಆಡಿದ್ದ ಅವರು ಫಿಟ್ನೆಸ್ ಸಮಸ್ಯೆಯಿಂದಾಗಿ ಅಮೆರಿಕ ಓಪನ್ ಮತ್ತು ಲೇವರ್ ಕಪ್ ಟೂರ್ನಿಗಳಲ್ಲಿ ಆಡಿರಲಿಲ್ಲ.

'ಕೆಲವು ವರ್ಷಗಳು, ಅದರಲ್ಲೂ ವಿಶೇಷವಾಗಿ ಕೊನೆಯ ಎರಡು ವರ್ಷಗಳು ನನ್ನ ಪಾಲಿಗೆ ಕಠಿಣವಾದವು' ಎಂದು ನಡಾಲ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ ವಿಡಿಯೊದಲ್ಲಿ ತಿಳಿಸಿದ್ದಾರೆ.

'ನನ್ನ ಕೊನೆಯ ಪಂದ್ಯಾವಳಿ ಡೇವಿಸ್ ಕಪ್ ಆಗಿದ್ದು ದೇಶವನ್ನು ಪ್ರತಿನಿಧಿಸುತ್ತಿರುವುದಕ್ಕೆ ಸಂತಸವಾಗುತ್ತಿದೆ. ನಾನು 2004ರಲ್ಲಿ ಸೆವಿಲ್‌ನಲ್ಲಿ (ಸ್ಪೇನ್) ಡೇವಿಸ್ ಕಪ್ ಫೈನಲ್‌ನೊಡನೆ ನನ್ನ ವೃತ್ತಿ ಜೀವನ ಆರಂಭಿಸಿದ್ದೆ. ಈಗ ಡೇವಿಸ್ ಕಪ್ ಫೈನಲ್‌ನೊಡನೆ ಟೆನಿಸ್ ಪಯಣ ಕೊನೆಗೊಳಿಸಿ ವರ್ತುಲ ಪೂರ್ಣಗೊಳಿಸುತ್ತಿದ್ದೇನೆ' ಎಂದು ಹೇಳಿದ್ದಾರೆ.

ನಡಾಲ್, ಗಾಯಗಳಿಗೆ ಒಳಗಾಗುತ್ತಿರುವುದು ಹೊಸದೇನಲ್ಲ. 2023ರ ಆಸ್ಟ್ರೇಲಿಯಾ ಓಪನ್ ಸಮಯದಲ್ಲಿ ಅವರು ಬೆನ್ನಿನ ಕೆಳಭಾಗದ ನೋವಿಗೆ ಒಳಗಾಗಿದ್ದರು. ಆ ವರ್ಷ ಅವರೊಗೆ ತಮ್ಮ ಅಚ್ಚುಮೆಚ್ಚಿನ ಫ್ರೆಂಚ್ ಓಪನ್ ಟೂರ್ನಿಯಲ್ಲಿ ಆಡಲಾಗಲಿಲ್ಲ. ನಂತರ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.

ಕೊನೆಯ ಎರಡು ಋತುಗಳಲ್ಲಿ ಅವರು 23 ಪಂದ್ಯಗಳನ್ನಷ್ಟೇ ಆಡಿದ್ದಾರೆ. ಈ ವರ್ಷ ರೋಲಂಡ್ ಗ್ಯಾರೋಸ್ ಕ್ರೀಡಾಂಗಣದಲ್ಲಿ ಆಡಲಿಳಿದರೂ, ಮೊದಲ ಸುತ್ತಿನಲ್ಲೇ ಅಲೆಕ್ಸಾಂಡರ್ ಜ್ವರೇವ್ ಅವರಿಗೆ ಮಣಿದಿದ್ದರು. ಮುಂದಿನ ವರ್ಷ ಆಡುವ ಬಯಕೆಯಿಂದ ತಮಗೆ ನೀಡಲುದ್ದೇಶಿಸಿದ 'ಭವ್ಯ ವಿದಾಯ' ನಿರಾಕರಿಸಿದ್ದರು.

ಫ್ರೆಂಚ್ ಓಪನ್‌ನಲ್ಲಿ ಅವರ ಸಾಧನೆ ಹುಬ್ಬೇರಿಸುವ ರೀತಿಯಲ್ಲಿದೆ. ಜಯಾಪಜಯದ ದಾಖಲೆ 112–4. ಅವರು 2022ರಲ್ಲಿ ಕೊನೆಯ ಬಾರಿಗೆ ರೋಲಂಡ್ ಗ್ಯಾರೋಸ್‌ನಲ್ಲಿ ಸಿಂಗಲ್ಸ್ ಕಿರೀಟ ಧರಿಸಿದ್ದರು.

ಪ್ರಬಲ ಎದುರಾಳಿಯಾಗಿದ್ದ ರೋಜರ್ ಫೆಡರರ್ ಅವರು ನಿವೃತ್ತಿ ಘೋಷಿಸಿದ ಎರಡು ವರ್ಷಗಳ ನಂತರ ನಡಾಲ್ ಕೂಡ ಅದೇ ಹಾದಿ ಹಿಡಿದಿದ್ದಾರೆ. ಫೆಡರರ್ ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ 24 ಪ್ರಶಸ್ತಿ ಗೆದ್ದಿದ್ದರು.

ನಡಾಲ್ ನಿವೃತ್ತಿ ನಿರ್ಧಾರದಿಂದ ಟೆನಿಸ್‌ನ 'ಬಿಗ್ ತ್ರಿ' ಆಟಗಾರರಲ್ಲಿ ನೊವಾಕ್ ಜೊಕೊವಿಚ್ ಮಾತ್ರ ಸಕ್ರಿಯರಾಗಿ ಉಳಿಯಲಿದ್ದಾರೆ.

ನಡಾಲ್ ಗೆದ್ದ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳು

ಫ್ರೆಂಚ್ ಓಪನ್: 14 (2005, 06, 07, 08, 2010, 2011, 2012, 2013, 2014, 2017, 2018, 2019, 2020, 2022)
ಅಮೆರಿಕ ಓಪನ್ 4 (2010, 2013, 2017, 2109)
ಆಸ್ಟ್ರೇಲಿಯಾ ಓಪನ್: 2 (2010, 2013, 1017, 2022)
ವಿಂಬಲ್ಡನ್ 2 (2008, 2010)
ಒಟ್ಟು ಎಟಿಪಿ ಪ್ರಶಸ್ತಿಗಳು: 92 (ಇವುಗಳಲ್ಲಿ 36 ಮಾಸ್ಟರ್ಸ್ ಪ್ರಶಸ್ತಿ ಸೇರಿವೆ)
ಒಲಿಂಪಿಕ್ಸ್
2008 (ಬೀಜಿಂಗ್): ಸಿಂಗಲ್ಸ್ ಚಿನ್ನ
2016 (ರಿಯೊ) ಡಬಲ್ಸ್ ಚಿನ್ನ (ಮಾರ್ಕ್ ಲೋಪೆಝ್ ಜೊತೆಗಾರ)
ಆವೆ ಅಂಕಣದಲ್ಲಿ ಅವರು ಸತತವಾಗಿ 81 ಪಂದ್ಯಗಳನ್ನು ಗೆದ್ದಿರುವುದು ಮುಕ್ತ (ಓಪನ್) ಯುಗದಲ್ಲಿ ದಾಖಲೆ.

ಏಷ್ಯನ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್ ● ಚೀನಾ ತೈಪೆ ಎದುರು ಸೋಲು

ಪುರುಷರ ತಂಡಕ್ಕೂ ಕಂಚಿನ ಪದಕ

ನವದೆಹಲಿ (ಪಿಟಿಐ): ಭಾರತ ಪುರುಷರ ತಂಡ, ಕಜಕಸ್ತಾನದ ಅಸ್ತಾನದಲ್ಲಿ ನಡೆಯುತ್ತಿರುವ ಏಷ್ಯನ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್ಸ್‌ನ ಸೆಮಿಫೈನಲ್‌ನಲ್ಲಿ ಗುರುವಾರ 0–3 ಅಂತರದಿಂದ ಚೀನಾ ತೈಪೆ ತಂಡಕ್ಕೆ ಸೋತು ಕಂಚಿನ ಪದಕಕ್ಕೆ ಸಮಾಧಾನಪಟ್ಟುಕೊಳ್ಳಬೇಕಾಯಿತು.

ಭಾರತ ಮಹಿಳೆಯರ ತಂಡ ಸಹ ಬುಧವಾರ ಕಂಚಿನ ಪದಕ ಗೆದ್ದುಕೊಂಡಿತ್ತು. ಇದು, ಈ ಚಾಂಪಿಯನ್‌ಷಿಪ್ 1972ರಲ್ಲಿ ಆರಂಭವಾದ ನಂತರ ಭಾರತ ಮಹಿಳೆಯರ ತಂಡ ಗೆದ್ದ ಮೊದಲ ಪದಕವಾಗಿತ್ತು.

ವಿಶ್ವ ಕ್ರಮಾಂಕದಲ್ಲಿ 42ನೇ ಸ್ಥಾನದಲ್ಲಿರುವ ಭಾರತದ ಅನುಭವಿ ಆಟಗಾರ ಅಚಂತ ಶರತ್ ಕಮಲ್ ಅವರು ವಿಶ್ವ ಕ್ರಮಾಂಕದಲ್ಲಿರುವ ಏಳನೇ ಸ್ಥಾನದಲ್ಲಿರುವ ಲಿನ್ ಯುನ್ ಜು ಅವರ ನಿಖರವಾದ ಮತ್ತು ಮಿಂಚಿನ ಹೊಡೆತಗಳ ಮುಂದೆ ಹೆಚ್ಚೇನೂ ಹೋರಾಟ ತೋರಲಾಗಲಿಲ್ಲ. ಶರತ್ ಅವರಿಗೆ ಕುದುರಿಕೊಳ್ಳಲೂ ಅವಕಾಶ ಸಿಗಲಿಲ್ಲ. ಚೀನಾ ತೈಪೆಯ ಆಟಗಾರ 11–7, 12–10, 11–9 ರಲ್ಲಿ ನೇರ ಆಟಗಳಿಂದ ಜಯಗಳಿಸಿದರು.



ಅಚಂತ ಶರತ್ ಕಮಲ್

ಮಾನವ್ ಠಕ್ಕರ್, ವಿಶ್ವ ಕ್ರಮಾಂಕದಲ್ಲಿ 22ನೇ ಸ್ಥಾನದಲ್ಲಿರುವ ಕಾವೊ ಚೆಂಗ್–ಜುಯಿ ಎದುರು ಹೋರಾಟ ತೋರಿದರೂ ಅಂತಿಮವಾಗಿ ಸೋಲನುಭವಿಸಬೇಕಾಯಿತು. ಚೆಂಗ್ 11–9, 8–11, 11–3, 13–11 ರಲ್ಲಿ ಪಂದ್ಯ ಗೆದ್ದು, ತೈಪೆ ತಂಡಕ್ಕೆ 2–0 ಮುನ್ನಡೆ ಒದಗಿಸಿದರು.

ಮೂರನೇ ಸಿಂಗಲ್ಸ್‌ನಲ್ಲಿ ಹರ್ಮೀತ್ ದೇಸಾಯಿ ಕೂಡ ನಿರಾಸೆ ಅನುಭವಿಸಿದರು. ಹುವಾಂಗ್ ಯಾನ್–ಚೆಂಗ್ 11–6, 11–9, 11–7 ರಿಂದ ಹರ್ಮೀತ್ ಅವರನ್ನು ಸುಲಭವಾಗಿ ಮಣಿಸಿದರು.

'ಸೋಲಿನ ಹೊರತಾಗಿಯೂ ಭಾರತ ಪುರುಷರ ತಂಡ ಹೆಮ್ಮೆಪಡುವಂಥ ಸಾಧನೆ ಮಾಡಿದೆ. ಏಷ್ಯದ ಪ್ರಬಲ ತಂಡಗಳಿರುವ ಪ್ರತಿಷ್ಠಿತ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆಲ್ಲುವುದು ಸಣ್ಣ ಸಾಧನೆಯೇನಲ್ಲ' ಎಂದು ಭಾರತ ಟೇಬಲ್ ಟೆನಿಸ್ ಫೆಡರೇಷನ್ ಪ್ರಕಟಣೆಯಲ್ಲಿ ತಿಳಿಸಿದೆ.

ಆರ್ಕ್ಟಿಕ್ ಓಪನ್: ಲಕ್ಷ್ಯ ಪರಾಭವ

ವಾಂಟಾ (ಫಿನ್ಲೆಂಡ್), (ಪಿಟಿಐ): ಮೊದಲ ಗೇಮ್ ಗೆದ್ದ ಲಾಭ ಪಡೆಯಲಾಗದೇ ಭಾರತದ ಲಕ್ಷ್ಯ ಸೇನ್, ಸೂಪರ್ 500 ಮಟ್ಟದ ಆರ್ಕ್ಟಿಕ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಚೀನಾ ತೈಪೆಯ ಚೌ ಟಿಯೆನ್ ಚೆನ್ ಅವರಿಗೆ ಗುರುವಾರ ಸೋತರು.



ಲಕ್ಷ್ಯ ಸೇನ್

ಒಂದು ಗಂಟೆ ಹತ್ತು ನಿಮಿಷ ನಡೆದ ಪುರುಷರ ಸಿಂಗಲ್ಸ್ ಎರಡನೇ ಸುತ್ತಿನ ಸೆಣಸಾಟದಲ್ಲಿ, 23 ವರ್ಷ ವಯಸ್ಸಿನ ಲಕ್ಷ್ಯ 21–19, 18–21, 15–21ರಲ್ಲಿ ಏಳನೇ ಶ್ರೇಯಾಂಕದ ಎದುರಾಳಿಯೆದುರು ಸೋತರು.

ಇದರೊಂದಿಗೆ ಟೂರ್ನಿಯಲ್ಲಿ ಭಾರತದ ಸವಾಲು ಎರಡನೇ ಸುತ್ತಿನಲ್ಲೇ ಅಂತ್ಯ ಕಂಡಿತು.

ಮಹಿಳಾ ವಿಶ್ವ ಕಪ್; ವಿಂಡೀಸ್ ಜಯ–ಹೆಯಲಿ ಬ್ಯಾಟಿಂಗ್

ಕರಿಷ್ಮಾ ಮೋಡಿಗೆ ಕುಸಿದ ಬಾಂಗ್ಲಾ

ಶಾರ್ಜಾ (ಪಿಟಿಐ): ವೆಸ್ಟ್ ಇಂಡೀಸ್ ತಂಡದ ಆಫ್‌ಸ್ಪಿನ್ನರ್ ಕರಿಷ್ಮಾ ರಾಮಾರ್ಕ್ (17ಕ್ಕೆ4) ಅವರ ಅಮೋಘ ಬೌಲಿಂಗ್ ಮುಂದೆ ಬಾಂಗ್ಲಾದೇಶ ತಂಡವು ಕುಸಿಯಿತು.

ಇಲ್ಲಿ ನಡೆಯುತ್ತಿರುವ ಮಹಿಳೆಯರ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಬಿ ಗುಂಪಿನ ಪಂದ್ಯದಲ್ಲಿ ವಿಂಡೀಸ್ ತಂಡವು 8 ವಿಕೆಟ್‌ಗಳಿಂದ ಜಯಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ವಿಂಡೀಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕರಿಷ್ಮಾ ಅವರ ಬೌಲಿಂಗ್ ಎದುರು ಬಾಂಗ್ಲಾ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 103 ರನ್ ಗಳಿಸಿತು. ನಾಯಕಿ ನಿಜರ್ ಸುಲ್ತಾನಾ (39 ರನ್) ಅವರೊಬ್ಬರೇ ಹೋರಾಟ ಮಾಡಿದರು. ಉಳಿದ ಬ್ಯಾಟರ್‌ಗಳು ವಿಫಲರಾದರು.

ಗುರಿ ಬೆನ್ನಟ್ಟಿದ ವೆಸ್ಟ್ ಇಂಡೀಸ್ ತಂಡವು 12.5 ಓವರ್‌ಗಳಲ್ಲಿ2 ವಿಕೆಟ್‌ಗಳಿಗೆ 104 ರನ್ ಗಳಿಸಿತು. ಆರಂಭಿಕ ಬ್ಯಾಟರ್ ಹೇಯಲಿ ಮ್ಯಾಥ್ಯೂಸ್ (34; 22ಎ, 4X6) ಅವರು ಉತ್ತಮ ಆರಂಭ ನೀಡಿದರು. ದಿಯಾಂದ್ರಾ ಡಾಟಿನ್ (ಔಟಾಗದೆ 19; 7ಎ, 4X1, 6X2) ಮಿಂಚಿನ ಬ್ಯಾಟಿಂಗ್ ಮಾಡಿದರು.

ವಿಂಡೀಸ್ ತಂಡದ ಲೆಗ್‌ಬ್ರೇಕ್ ಬೌಲರ್ ಎಫೈ ಫ್ಲೆಚರ್ ಅವರೂ ಎರಡು ವಿಕೆಟ್ ಗಳಿಸಿದರು.



ವೆಸ್ಟ್ ಇಂಡೀಸ್ ತಂಡದ ಹೆಯಲಿ ಮ್ಯಾಥ್ಯೂಸ್ ಬ್ಯಾಟಿಂಗ್ ವೈಖರಿ —ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 103 (ದಿಲಾರಾ ಅಕ್ತರ್ 19, ಶೋಭನಾ ಮೊಸ್ತಾರೆ 16, ನಿಜರ್ ಸುಲ್ತಾನಾ 39,ರಿತು ಮೋನಿ 10, ಕರಿಷ್ಮಾ ರಾಮಾರ್ಕ್ 17ಕ್ಕೆ4, ಎಫೈ ಫ್ಲೆಚರ್ 25ಕ್ಕೆ2) ವೆಸ್ಟ್ ಇಂಡೀಸ್: 12.5 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 104 (ಹೆಯಲಿ ಮ್ಯಾಥ್ಯೂಸ್ 34, ಸ್ಟೆಫಾನಿ ಟೇಲರ್ 27, ಶೆಮೈನ್ ಕ್ಯಾಂಪ್‌ಬೆಲ್ 21, ದಿಯಾಂದ್ರಾ ಡಾಟಿನ್ ಔಟಾಗದೆ 19) ಫಲಿತಾಂಶ: ವೆಸ್ಟ್ ಇಂಡೀಸ್ ತಂಡಕ್ಕೆ 8 ವಿಕೆಟ್‌ಗಳ ಜಯ.

ಚೌಬೆ ವಿರುದ್ಧ ಪಿ.ಟಿ ಉಷಾ ಅಸಮಾಧಾನ

ಅವಿಶ್ವಾಸ ನಿರ್ಣಯ ಕಾನೂನುಬಾಹಿರ

ನವದೆಹಲಿ (ಪಿಟಿಐ): ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಜಂಟಿ ಕಾರ್ಯದರ್ಶಿ ಕಲ್ಯಾಣ್ ಚೌಬೆ ಮತ್ತು ಕಾರ್ಯಕಾರಿ ಮಂಡಳಿಯ ಇತರ ಸದಸ್ಯರ ಯಾವುದೇ ಸೂಚನೆಗಳನ್ನು ಪಾಲಿಸದಿರುವಂತೆ ಸಂಸ್ಥೆಯ ಅಧ್ಯಕ್ಷೆ ಪಿ.ಟಿ.ಉಷಾ ಅವರು ಐಒಎ ಸಿಬ್ಬಂದಿಗೆ ಕಟ್ಟಪ್ಪಣೆ ವಿಧಿಸಿದ್ದಾರೆ.

ಇದೇ 25ರಂದು ನಡೆಯಲಿರುವ ವಿಶೇಷ ಸಾಮಾನ್ಯ ಸಭೆಗೆ ಚೌಬೆ ಅವರು ಸಿದ್ಧಪಡಿಸಿರುವ ಕಾರ್ಯಸೂಚಿ 'ಕಾನೂನುಬಾಹಿರ ಮತ್ತು ಅನಧಿಕೃತ' ಎಂದೂ ಉಷಾ ಗುರುವಾರ ಘೋಷಿಸಿದ್ದಾರೆ.

ಅಕ್ಟೋಬರ್ 25ರಂದು ನಡೆಯಲಿರುವ ಸಭೆಗೆ ಚೌಬೆ ಅವರು 26 ಅಂಶಗಳ ಕಾರ್ಯಸೂಚಿಯನ್ನು ಸಿದ್ಧಪಡಿಸಿ ಬುಧವಾರ ಸುತ್ತೋಲೆ ಹೊರಡಿಸಿದ್ದರು. ಸಂಸ್ಥೆಯ ನಿಯಮಾವಳಿಗಳ ಉಲ್ಲಂಘನೆ ಮತ್ತು ದೇಶದ ಕ್ರೀಡೆಗೆ ಮಾರಕವಾಗಬಲ್ಲ ನಿರ್ಧಾರಗಳನ್ನು ಕೈಗೊಂಡಿರುವುದಕ್ಕಾಗಿ ಉಷಾ ವಿರುದ್ಧ ಅವಿಶ್ವಾಸ ನಿರ್ಣಯವೂ ಕಾರ್ಯಸೂಚಿಯಲ್ಲಿ ಒಳಗೊಂಡಿತ್ತು.



ಪಿ.ಟಿ. ಉಷಾ

ಸುತ್ತೋಲೆಯಲ್ಲಿ ಚೌಬೆ ಅವರು ತಮ್ಮನ್ನು ಜಂಟಿ ಕಾರ್ಯದರ್ಶಿ ಮತ್ತು ಹಂಗಾಮಿ ಸಿಇಒ ಎಂದು ಉಲ್ಲೇಖಿಸಿದ್ದರು. ಆದರೆ ಚೌಬೆ ಈಗ ಹಂಗಾಮಿ ಸಿಇಒ ಹುದ್ದೆಯಲ್ಲಿಲ್ಲ ಎಂದು ಉಷಾ ಹೇಳಿದ್ದಾರೆ.

ಚೌಬೆ ಈ ಹಿಂದೆ ಅವರು ಹಂಗಾಮಿ ಸಿಇಒ ಆಗಿ ಕಾರ್ಯನಿರ್ವಹಿಸಿದ್ದರು. ಆದರೆ ರಘುರಾಮ್ ಅಯ್ಯರ್ ಜನವರಿಯಲ್ಲಿ ಸಿಇಒ ಆಗಿ ನೇಮಕಗೊಂಡಿದ್ದರು.

'ಅಯ್ಯರ್ ನೇಮಕವನ್ನು ಎಕ್ಸಿಕ್ಯೂಟಿವ್ ಕೌನ್ಸಿಲ್ ಜನವರಿ 5ರಂದು ಅನುಮೋದಿಸಿತ್ತು. ವೇತನದ ವಿಷಯದಲ್ಲಿ ಒಮ್ಮತ ಮೂಡಿರಲಿಲ್ಲ' ಎಂದು ಉಷಾ ಹೇಳಿದ್ದಾರೆ. ಆದರೆ ಈ ಹಿಂದೆ 15 ಸದಸ್ಯರ ಪೈಕಿ 12 ಮಂದಿ ಅಯ್ಯರ್ ನೇಮಕ ಸ್ಥಿರೀಕರಣಕ್ಕೆ ನಿರಾಕರಿಸಿದ್ದರು. ಅಂದಿನ ಈ ಭಿನ್ನಾಭಿಪ್ರಾಯ ನಂತರದ ದಿನಗಳಲ್ಲಿ ದೊಡ್ಡ ಕಂದರವಾಗಿದೆ.

ಜಾರ್ಖಂಡ್ ತಂಡಕ್ಕೆ ಇಶಾನ್ ನಾಯಕ

ರಾಂಚಿ (ಪಿಟಿಐ): ವಿಕೆಟ್‌ಕೀಪರ್ ಇಶಾನ್ ಕಿಶನ್ ಅವರನ್ನು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಜಾರ್ಖಂಡ್ ತಂಡದ ನಾಯಕರನ್ನಾಗಿ ನೇಮಕ ಮಾಡಲಾಗಿದೆ.

ಹೋದ ವರ್ಷ ಅವರು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ವಾರ್ಷಿಕ ಗುತ್ತಿಗೆ ಕಳೆದುಕೊಂಡಿದ್ದರು. 2022ರಲ್ಲಿ ರಿಷಭ್ ಪಂತ್ ಅವರು ಕಾರು ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು ಕ್ರಿಕೆಟ್‌ನಿಂದ ದೂರವುಳಿದಿದ್ದರು. ಆ ಸಂದರ್ಭದಲ್ಲಿ ಇಶಾನ್ ಭಾರತ ತಂಡದ (ಸೀಮಿತ್ ಓವರ್‌ಗಳ ಕ್ರಿಕೆಟ್) ಕೀಪರ್ ಆಗಿದ್ದರು. ಆದರೆ ದಕ್ಷಿಣ ಆಫ್ರಿಕಾ ಪ್ರವಾಸದ ಮಧ್ಯದಲ್ಲಿಯೇ ತವರಿಗೆ ಮರಳಿದ್ದರು. ಅದರ ನಂತರವೂ ಅವರು ಬಿಸಿಸಿಐ ಟೂರ್ನಿಗಳಲ್ಲಿ ಭಾಗವಹಿಸಿರಲಿಲ್ಲ.



ಇಶಾನ್ ಕಿಶನ್

ಭಾರತ ತಂಡದಲ್ಲಿ ಆಡದ ಸಂದರ್ಭದಲ್ಲಿ ದೇಶಿಕ್ರಿಕೆಟ್‌ನಲ್ಲಿ ತಮ್ಮ ತವರು ರಾಜ್ಯ ತಂಡವನ್ನು ಪ್ರತಿನಿಧಿಸುವುದು ಕಡ್ಡಾಯ ಎಂಬ ನಿಯಮವನ್ನು ಅವರು ಪಾಲಿಸಿರಲಿಲ್ಲ. ಇದರಿಂದಾಗಿ ಮಂಡಳಿಯ ಕೆಂಗಣ್ಣಿಗೆ ಗುರಿಯಾಗಿದ್ದರು. ವಾರ್ಷಿಕ ಗುತ್ತಿಗೆ ಕಳೆದುಕೊಂಡಿದ್ದರು. ತಮ್ಮ ವರ್ಚಸ್ಸು ಮರಳಿ ಗಳಿಸಿಕೊಳ್ಳಲು ಇಶಾನ್ ದೇಶಿ ಕ್ರಿಕೆಟ್‌ಗೆ ಮರಳಿದ್ದಾರೆ. ಕಳೆದ ತಿಂಗಳು ದುಲೀಪ್ ಟ್ರೋಫಿ ಟೂರ್ನಿಯಲ್ಲಿ ಅವರು ಭಾರತ ಸಿ ತಂಡದಲ್ಲಿ ಆಡಿ ಶತಕ ಗಳಿಸಿದ್ದರು. ಡಿ ಗುಂಪಿನಲ್ಲಿ ಜಾರ್ಖಂಡ್ ತಂಡವು ಮೊದಲ ಪಂದ್ಯದಲ್ಲಿ ಅಸ್ಸಾಂ ವಿರುದ್ಧ ಗುವಾಹಟಿಯಲ್ಲಿ ಆಡಲಿದೆ.

ತಂಡ: ಇಶಾನ್ ಕಿಶನ್ (ನಾಯಕ), ವಿರಾಟ್ ಸಿಂಗ್ (ಉಪನಾಯಕ), ಕುಮಾರ ಕುಶಾಗ್ರ (ವಿಕೆಟ್‌ಕೀಪರ್), ನಜೀಂ ಸಿದ್ಧಿಕಿ, ಆರ್ಯಮನ್ ಸೇನ್, ಶರಣದೀಪ್ ಸಿಂಗ್, ಕುಮಾರ ಸೂರಜ್, ಅನುಕೂಲ್ ರಾಯ್, ಉತ್ಕರ್ಷ ಸಿಂಗ್, ಸುಪ್ರಿಯೊ ಚಕ್ರವರ್ತಿ, ಸೌರಭ್ ಶೇಖರ್, ವಿಕಾಸ್ ಕುಮಾರ್, ವಿವೇಕಾನಂದ ತಿವಾರಿ, ಮಾನಿಷಿ, ರವಿ ಕುಮಾರ್ ಯಾದವ್, ರೌನಕ್ ಕುಮಾರ್.

ಎಚ್‌ಐಎಲ್ ಬಿಡ್: ಸಾವಿರ ಆಟಗಾರರು

ನವದೆಹಲಿ (ಪಿಟಿಐ): ಭಾರತ ಮತ್ತು ವಿದೇಶಗಳ ಒಟ್ಟು ಒಂದು ಸಾವಿರ ಆಟಗಾರರು ಹಾಕಿ ಇಂಡಿಯಾ ಪ್ರೀಮಿಯರ್ ಲೀಗ್ (ಎಚ್‌ಐಎಲ್) ಟೂರ್ನಿಯ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲಿದ್ದಾರೆ.

ಏಳು ವರ್ಷಗಳ ನಂತರ ಎಚ್‌ಐಎಲ್ ನಡೆಯಲಿದೆ. ಇದೇ ಮೊದಲ ಸಲ ಮಹಿಳೆಯರ ವಿಭಾಗದ ಟೂರ್ನಿಯೂ ನಡೆಯಲಿದೆ. ಪುರುಷರ ವಿಭಾಗದಲ್ಲಿ ಎಂಟು ತಂಡಗಳ ಆಟಗಾರರಿಗಾಗಿ ಅ.13 ಮತ್ತು 14ರಂದು ಬಿಡ್ ನಡೆಯಲಿದೆ. 15ರಂದು ಮಹಿಳೆಯರ ವಿಭಾಗದ ಬಿಡ್ ಆಯೋಜನೆಗೊಂಡಿದೆ.

ಒಟ್ಟು ಒಂದು ಸಾವಿರ ಆಟಗಾರರು ಹೆಸರು ನೋಂದಾಯಿಸಿಕೊಂಡಿದ್ದಾರೆ. ಅದರಲ್ಲಿ ಪುರುಷರ ವಿಭಾಗದಲ್ಲಿ ಭಾರತದ 400, ವಿದೇಶಗಳ 150ಕ್ಕೂ ಹೆಚ್ಚು ಆಟಗಾರರಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಸ್ಥಳೀಯ 250 ಮತ್ತು ವಿದೇಶಗಳ 70 ಆಟಗಾರ್ತಿಯರು ಇದ್ದಾರೆ.



ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್, ಆಟಗಾರರು

ಆಟಗಾರರನ್ನು ಮೂರು ಮೌಲ್ಯ ವಿಭಾಗಗಳಲ್ಲಿ ವಿಂಗಡಿಸಲಾಗಿದೆ. ₹ 2 ಲಕ್ಷ, ₹ 5 ಲಕ್ಷ ಮತ್ತು ₹ 10 ಲಕ್ಷ ವಿಭಾಗಗಳಲ್ಲಿ ಬಿಡ್ ನಡೆಯಲಿದೆ.

ಪುರುಷರ ವಿಭಾಗದಲ್ಲಿ ಮೊದಲಿಗೆ ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಕಂಚಿನ ಪದಕ ಜಯಿಸಿದ ಭಾರತ ತಂಡದ ಆಟಗಾರರ ಬಿಡ್ ನಡೆಯಲಿದೆ. ನಾಯಕ ಹರ್ಮನ್‌ಪ್ರೀತ್ ಸಿಂಗ್, ಉಪನಾಯಕ ಹಾರ್ದಿಕ್ ಸಿಂಗ್, ಅನುಭವಿ ಆಟಗಾರರಾದ ಮನಪ್ರೀತ್ ಸಿಂಗ್, ಮನದೀಪ್ ಸಿಂಗ್ ಅವರು ಸ್ಪರ್ಧೆಯಲ್ಲಿದ್ದಾರೆ. ಮಾಜಿ ಆಟಗಾರರಾದ ರೂಪಿಂದರ್ ಪಾಲ್ ಸಿಂಗ್, ಬಿರೇಂದ್ರ ಲಕ್ರಾ ಮತ್ತು ಧರ್ಮವೀರ್ ಸಿಂಗ್ ಅವರೂ ಹೆಸರು ನೋಂದಾಯಿಸಿಕೊಂಡಿದ್ದಾರೆ.

ಮಹಿಳೆಯರ ವಿಭಾಗದಲ್ಲಿ ಅನುಭವಿ ಗೋಲ್‌ಕೀಪರ್ ಸವಿತಾ, ನಾಯಕಿ ಸಲೀಮಾ ಟೆಟೆ, ಡ್ರ್ಯಾಗ್ ಫ್ಲಿಕರ್ ದೀಪಿಕಾ, ವಂದನಾ ಕಟಾರಿಯಾ ಮತ್ತು ಲಾಲ್‌ರೆಮ್ಸಿಯಾಮಿ ಮತ್ತಿತರರು ಇದ್ದಾರೆ. ಮಾಜಿ ಆಟಗಾರ್ತಿಯರಾದ ಯೋಗಿತಾ ಬಾಲಿ, ಲಿಲಿಮಾ ಮಿಂಜ್ ಮತ್ತು ನಮಿತಾ ಟೊಪ್ಪೊ ಅವರೂ ಹೆಸರು ನೊಂದಾಯಿಸಿದ್ದಾರೆ. ಪ್ರತಿಯೊಂದು ತಂಡದಲ್ಲಿ ಗರಿಷ್ಠ 24 ಆಟಗಾರರನ್ನು ಸೇರ್ಪಡೆ ಮಾಡಬಹುದು. ಅದರಲ್ಲಿ 16 ಮಂದಿ ಭಾರತೀಯ ಆಟಗಾರರು (ನಾಲ್ವರು ಜೂನಿಯರ್ ಆಟಗಾರರು ಸೇರಿ) ಇರುವುದು ಕಡ್ಡಾಯ. ಡಿಸೆಂಬರ್ 28ರಿಂದ ಟೂರ್ನಿಆರಂಭವಾಗುವುದು.

ಆಸ್ಟ್ರೇಲಿಯಾ ಪಂದ್ಯ: ರೋಹಿತ್ ವಿಶ್ರಾಂತಿ?

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾದಲ್ಲಿ ಮುಂದಿನ ತಿಂಗಳು ಭಾರತ ತಂಡವು ಆಡಲಿರುವ ಟೆಸ್ಟ್ ಸರಣಿಯ ಮೊದಲ ಅಥವಾ ಎರಡನೇ ಪಂದ್ಯದಲ್ಲಿ ನಾಯಕ ರೋಹಿತ್ ಶರ್ಮಾ ವಿಶ್ರಾಂತಿ ಪಡೆಯುವ ಸಾಧ್ಯತೆ ಇದೆ.



ವೈಯಕ್ತಿಕ ಕಾರಣಗಳಿಂದಾಗಿ ಅವರು ಒಂದು ಪಂದ್ಯದಲ್ಲಿ ಆಡುವುದು ಅನುಮಾನವಾಗಿದೆ. ಈ ಕುರಿತು ರೋಹಿತ್ ಬಿಸಿಸಿಐಗೆ ಮಾಹಿತಿ ನೀಡಿದ್ದಾರೆನ್ನಲಾಗಿದೆ.

ಆಸ್ಟ್ರೇಲಿಯಾದಲ್ಲಿ ಭಾರತ ತಂಡವು ಐದು ಟೆಸ್ಟ್ ಪಂದ್ಯಗಳನ್ನು ಆಡಲಿದೆ. ನವೆಂಬರ್ 22ರಂದು ಮೊದಲ ಟೆಸ್ಟ್ ಪರ್ಥ್‌ನಲ್ಲಿ ಆರಂಭವಾಗಲಿದೆ. ಡಿಸೆಂಬರ್ 6ರಿಂದ 10ರವರೆಗೆ ಅಡಿಲೇಡ್‌ನಲ್ಲಿ ಎರಡನೇ ಪಂದ್ಯ ನಡೆಯಲಿದೆ. 'ರೋಹಿತ್ ಅವರು ಮಂಡಳಿಗೆ ಮಾಹಿತಿ ನೀಡಿದ್ದಾರೆನ್ನಲಾಗಿದೆ. ಆದರೆ ಅವರು ಯಾವ ಪಂದ್ಯದಲ್ಲಿ ಆಡುತ್ತಿಲ್ಲ ಮತ್ತು ಕಾರಣಗಳೇನು ಎಂಬುದರ ಕುರಿತು ಸ್ಪಷ್ಟತೆ ಇಲ್ಲ' ಎಂದು ಪದಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೊದಲ ಟೆಸ್ಟ್: ಸೋಲಿನ ಭೀತಿಯಲ್ಲಿ ಪಾಕಿಸ್ತಾನ

ಹ್ಯಾರಿ ಬ್ರೂಕ್ ತ್ರಿಶತಕ, ಇಂಗ್ಲೆಂಡ್ 823

ಮುಲ್ತಾನ್, ಪಾಕಿಸ್ತಾನ (ಎಎಫ್‌ಪಿ): ಜೋ ರೂಟ್ ಅವರ ದ್ವಿಶತಕದ ಬಳಿಕ, ಹ್ಯಾರಿ ಬ್ರೂಕ್ ಅಮೋಘ ತ್ರಿಶತಕ ದಾಖಲಿಸಿದರು. ನಂತರ ಇಂಗ್ಲೆಂಡ್ ಬೌಲರ್‌ಗಳ ದಾಳಿಗೆ ಪಾಕಿಸ್ತಾನದ ಬ್ಯಾಟರ್‌ಗಳು ಪರದಾಡಿದ್ದು, ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಪ್ರವಾಸಿ ಇಂಗ್ಲೆಂಡ್ ಗೆಲುವಿನ ಹಾದಿಯಲ್ಲಿದೆ.

ರೂಟ್ 262 ರನ್ ಗಳಿಸಿದರೆ, ಬ್ರೂಕ್ 317 ರನ್ ಬಾರಿಸಿದ್ದು, ಪಂದ್ಯದ ನಾಲ್ಕನೇ ದಿನವಾದ ಗುರುವಾರ ಇಂಗ್ಲೆಂಡ್ 7 ವಿಕೆಟ್‌ಗೆ 823 ರನ್‌ಗಳ ಹಿಮಾಲಯದೆತ್ತರದ ಮೊತ್ತ ಗಳಿಸಿ ಮೊದಲ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು. ತನ್ಮೂಲಕ ಪ್ರವಾಸಿ ತಂಡ 267 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆ ಪಡೆಯಿತು.

ದಿನದಾಟ ಮುಗಿದಾಗ, ಪಾಕಿಸ್ತಾನ ಎರಡನೇ ಇನಿಂಗ್ಸ್‌ನಲ್ಲಿ 152 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದೆ.

ಆಘಾ ಸಲ್ಮಾನ್ ಅಜೇಯ 41 ರನ್ ಮತ್ತು ಅಮೇರ್ ಜಮಾಲ್ ಅಜೇಯ 27 ರನ್ ಗಳಿಸಿ ಆಡುತ್ತಿದ್ದಾರೆ. ಇವರಿಬ್ಬರು ಮುರಿಯದ ಏಳನೇ ವಿಕೆಟ್‌ಗೆ 70 ರನ್ ಸೇರಿಸಿದ ಪರಿಣಾಮ ಪಾಕ್ ಇನ್ನಷ್ಟು ಮುಖಭಂಗ ತಪ್ಪಿಸಿಕೊಂಡಿತು. ತಂಡ ಇನಿಂಗ್ಸ್ ಸೋಲು ತಪ್ಪಿಸಿಕೊಳ್ಳಲು ಇನ್ನೂ 115 ರನ್ ಗಳಿಸಬೇಕಾಗಿದೆ.



ತ್ರಿಶತಕ ಗಳಿಸಿದ ಹ್ಯಾರಿ ಬ್ರೂಕ್ ಸಂಭ್ರಮ ಎಎಫ್‌ಪಿ ಚಿತ್ರ

ಮುಲ್ತಾನಿನ ಸ್ಟೇಡಿಯಮ್‌ನಲ್ಲಿ 1379 ರನ್‌ಗಳು ಹರಿದುಬಂದಿವೆ. 17 ವಿಕೆಟ್‌ಗಳಷ್ಟೇ ಉರುಳಿವೆ.

ಬ್ರೂಕ್ ಮತ್ತು ರೂಟ್ ನಾಲ್ಕನೇ ವಿಕೆಟ್‌ಗೆ ದಾಖಲೆಯ 454 ರನ್ ಪೇರಿಸಿದರು. ಇಂಗ್ಲೆಂಡ್ ತಂಡ (ಬುಧವಾರ: 3 ವಿಕೆಟ್‌ಗೆ 492) ಟೆಸ್ಟ್ ಇತಿಹಾಸದಲ್ಲಿ ನಾಲ್ಕನೇ ಅತ್ಯಧಿಕ ಮೊತ್ತ ಪೇರಿಸಿತು. ಈ ಹಿಂದೆ, 1957ರಲ್ಲಿ ಬರ್ಮಿಂಗಮ್ ಟೆಸ್ಟ್ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಪೀಟರ್ ಮೇ ಮತ್ತು ಕಾಲಿನ್ ಕೌಡ್ರಿ ನಾಲ್ಕನೇ ವಿಕೆಟ್‌ಗೆ 411 ರನ್ ಜೊತೆಯಾಟವಾಡಿದ್ದು ದಾಖಲೆಯಾಗಿತ್ತು.


ಚಹಕ್ಕೆ ಹೊರಡಲು 33 ನಿಮಿಷಗಳಿದ್ದಾಗ ಇಂಗ್ಲೆಂಡ್ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು. ಪಾಕ್ ಆರಂಭ ಆಟಗಾ್ರ ಅಬ್ದುಲ್ಲಾ ಶಫೀಖ್ ಎರಡನೇ ಇನಿಂಗ್ಸ್‌ನ ಮೊದಲ ಎಸೆತದಲ್ಲೇ ಕ್ರಿಸ್ ವೋಕ್ಸ್ ಅವರಿಗೆ ವಿಕೆಟ್ ನೀಡಿದರು. ನಾಯಕ ಶಾನ್ ಮಸೂದ್ (11), ಬಾಬರ್ ಆಜಂ (5) ಮತ್ತು ಸಯೀಮ್ ಅಯೂಬ್ (25) ಕೂಡ ಪ್ರತಿರೋಧ ತೋರಲಿಲ್ಲ

ಬ್ರೂಕ್ ಅವರ 429 ನಿಮಿಷಗಳ (322 ಎಸೆತಗಳ) ಬ್ಯಾಟಿಂಗ್‌ನಲ್ಲಿ 29 ಬೌಂಡರಿ, ಮೂರು ಸಿಕ್ಸರ್‌ಗಳಿದ್ದವು. ಅವರು ತ್ರಿಶತಕ ಬಾರಿಸಿದ ಇಂಗ್ಲೆಂಡ್‌ನ ಆರನೇ ಆಟಗಾರ. ರೂಟ್ 375 ಎಸೆತಗಳನ್ನೆದುರಿಸಿ 17 ಬೌಂಡರಿಗಳನ್ನು ಬಾರಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: **ಪಾಕಿಸ್ತಾನ:** 556; **ಇಂಗ್ಲೆಂಡ್:** 150 ಓವರುಗಳಲ್ಲಿ 7 ವಿಕೆಟ್‌ಗೆ 823 ಡಿಕ್ಲೇರ್ಡ್ (ಜೋ ರೂಟ್ 262, ಹ್ಯಾರಿ ಬ್ರೂಕ್ 317); ಎರಡನೇ ಇನಿಂಗ್ಸ್: ಪಾಕಿಸ್ತಾನ: 37 ಓವರುಗಳಲ್ಲಿ 6 ವಿಕೆಟ್‌ಗೆ 152 (ಸಯೀಮ್ ಅಯೂಬ್ 25, ಸಾದ್ ಶಕೀಲ್ 29, ಸಲ್ಮಾನ್ ಆಘಾ ಔಟಾಗದೇ 41, ಆಮೇರ್ ಜಮಾಲ್ ಔಟಾಗದೇ 27; ಗಸ್ ಅಟ್ಕಿನ್ಸನ್ 27ಕ್ಕೆ2, ಬ್ರಿಡನ್ ಕಾರ್ಸ್ 39ಕ್ಕೆ2)

ತಂದೆಯ ನಿಧನ: ಅರ್ಧದಲ್ಲೇ ತವರಿಗೆ ಮರಳಿದ ಸನಾ

ದುಬೈ (ಪಿಟಿಐ):ಪಾಕಿಸ್ತಾನ ಕ್ರಿಕೆಟ್ ತಂಡದ ನಾಯಕಿ ಫಾತಿಮಾ ಸನಾ ಅವರು ತಂದೆಯ ನಿಧನದಿದಾಗಿ ಮಹಿಳಾ ಟಿ20 ವಿಶ್ವಕಪ್ ಟೂರ್ನಿಯಿಂದ ಅರ್ಧದಲ್ಲೇ ತವರು ಕರಾಚಿಗೆ ಮರಳಬೇಕಾಗಿದೆ. ಅವರು ಆಸ್ಟ್ರೇಲಿಯಾ ವಿರುದ್ಧದ ಮಹತ್ವದ ಪಂದ್ಯ ಕಳೆದುಕೊಳ್ಳಲಿದ್ದಾರೆ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಗುರುವಾರ ಪ್ರಕಟಿಸಿದೆ.



ಫಾತಿಮಾ ಸನಾ

ಗುರುವಾರ ಬೆಳಿಗ್ಗೆ ಫಾತಿಮಾ ತಂದೆ ನಿಧನರಾಗಿದ್ದರು. ಅವರು ತವರಿಗೆ ಹಿಂತಿರುಗಲು ಪಿಸಿಬಿ ವ್ಯವಸ್ಥೆ ಮಾಡಿದೆ. ಶುಕ್ರವಾರ ಪಾಕಿಸ್ತಾನ ತಂಡವು ಆಸ್ಟ್ರೇಲಿಯಾವನ್ನು ಎದುರಿಸಲಿದ್ದು ಆ ಪಂದ್ಯಕ್ಕೆ ಸನಾ ಅಲಭ್ಯರಾಗಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು. ಉಪನಾಯಕಿ ಮುನೀಬಾ ಅಲಿ ಅವರು ಶುಕ್ರವಾರದ ಪಂದ್ಯಕ್ಕೆ ನಾಯಕತ್ವ ವಹಿಸುವರು.

22 ವರ್ಷದ ಫಾತಿಮಾ ಸನಾ ತಂಡದ ಪ್ರಮುಖ ಆಲ್‌ರೌಂಡರ್ ಆಗಿ ಗುರುತಿಸಿಕೊಂಡಿದ್ದಾರೆ. ಪಾಕಿಸ್ತಾನವು ಸೋಮವಾರ ನಡೆಯುವ ಕೊನೆಯ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ.

ಉತ್ತರಾಖಂಡದಲ್ಲಿ ರಾಷ್ಟ್ರೀಯ ಕ್ರೀಡೆ

ನವದೆಹಲಿ (ಪಿಟಿಐ): ಮುಂದಿನ (38ನೇ ಆವೃತ್ತಿಯ) ರಾಷ್ಟ್ರೀಯ ಕ್ರೀಡೆಗಳು ಉತ್ತರಾಖಂಡದಲ್ಲಿ ಜನವರಿ 28 ರಿಂದ ಫೆಬ್ರುವರಿ 14ರವರೆಗೆ ನಡೆಯಲಿವೆ ಎಂದು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಬುಧವಾರ ಪ್ರಕಟಿಸಿದೆ. ವೇಳಾಪಟ್ಟಿಯು ಮುಂದಿನ ತಿಂಗಳ ಸಾಮಾನ್ಯಸಭೆಯಲ್ಲಿ ಸ್ಥಿರೀಕರಣ ಪಡೆಯಬೇಕಾಗಿದೆ ಎಂದು ಐಒಎ ಹೇಳಿದೆ. ಸಂಸ್ಥೆಯ ಸಾಮಾನ್ಯ ಸಭೆ ಅಕ್ಟೋಬರ್ 25ರಂದು ನಿಗದಿಯಾಗಿದೆ.